

# ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸ ಪತ್ರಿಕೆ

# Karnataka Scout & Guide

Monthly Magazine


| Vol -66 | Issue -04 | April 2025 | Pages: 28 | Annual Subscription: ₹ 100/- |
|---|---|---|---|---|
| ಸಂಪುಟ: 66 | ಸಂಚಿಕೆ: 04 | ಏಪ್ರಿಲ್ 2025 | ಪುಟಗಳು: 28 | ವಾರ್ಷಿಕ ಚಂದ ರೂ. 100/- |


**ಮಾರ್ಚ್–ಏಪ್ರಿಲ್ ತಿಂಗಳಲ್ಲಿ ವಿವಿಧ ಜಿಲ್ಲೆಗಳಲ್ಲಿ ನಡೆದ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿ, ಚಟುವಟಿಕೆಗಳಲ್ಲಿ ತೊಡಗಿರುವ ಕಬ್ಸ್–ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್‌ಗಳ ವಿಹಂಗಮ ನೋಟ.**













ಏಪ್ರಿಲ್ 16 ರಂದು ಕರ್ನಾಟಕ ಸರ್ಕಾರದ ಉಪ ಮುಖ್ಯಮಂತ್ರಿ ಶ್ರೀ ಡಿ.ಕೆ. ಶಿವಕುಮಾರ್ ಅವರ ಬಿ.ಬಿ.ಎಂ.ಪಿ ಅನುದಾನದ ಅಡಿಯಲ್ಲಿ ಕೇಂದ್ರ ಕಛೇರಿ ಆವರಣದಲ್ಲಿ ನೂತನ ಕಟ್ಟಡದ ಕಾಮಗಾರಿಯ ಶಂಕು ಸ್ಥಾಪನೆಯನ್ನು ಮಾನ್ಯ ಶಾಸಕರಾದ ಶ್ರೀ ರಿಜ್ವಾನ್ ಹರ್ಷದ್ ಅವರು ನೆರವೇರಿಸಿದರು.

ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ ಡಾ. ಮುಕ್ತ ಕಾಗಲಿ, ಶ್ರೀಮತಿ ರಾಧಾ ವೆಂಕಟೇಶ್ ಶ್ರೀಮತಿ ಕೃಪಾ ವಿಜಯ್, ಶ್ರೀ ಎಂ.ಎ. ಚೆಲ್ಲಯ್ಯ, ಶ್ರೀ ಮಹಮ್ಮದ್ ಜಾವೇದ್, ಬಿ.ಬಿ.ಎಂ.ಪಿ ಕಾರ್ಯಪಾಲಕ ಅಭಿಯಂತರರು ಶ್ರೀ ಕೃಷ್ಣಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು ಶ್ರೀ ಎಲ್.ಟಿ. ಲೋಕೇಶ್ ಹಾಗೂ ರಾಜ್ಯ ಸಂಸ್ಥೆಯ ಇತರ ಪದಾಧಿಕಾರಿಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.



ಏಪ್ರಿಲ್ 22 ರಂದು ಹಾಸನದ ಡಾ. ಅಂಬೇಡ್ಕರ್ ಭವನದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಏಕಲವ್ಯ ಜೀವ ಜಲ ಫೌಂಡೇಶನ್ ರವರ ಸಹಯೋಗದಲ್ಲಿ 'ವಿಶ್ವಭೂಮಿ ದಿನಾಚರಣೆ ಮತ್ತು ಏಕಲವ್ಯ ಜೀವ ಜಲ ರಾಷ್ಟ್ರೀಯ ಪ್ರಶಸ್ತಿ ಪ್ರಧಾನ' ಸಮಾರಂಭದ ಕಾರ್ಯಕ್ರಮದಲ್ಲಿ ಶ್ರೀ ಶ್ರೀ ಡಾ. ರುದ್ರಮುನಿ ಮಹಾಸ್ವಾಮಿಗಳು, ಷಡಕ್ಷರಿಮಠ, ತಿಪಟೂರು, ಶ್ರೀ ಡಾ. ಮಹೇಶ್ ಶಿವಾಚಾರ್ಯಸ್ವಾಮಿಗಳು, ರಂಭಾಪುರಿ ಶಾಖಾ ಮಠ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಡಾ. ಎಸ್.ಜಿ. ಸುಶೀಲಮ್ಮ, ಅಧ್ಯಕ್ಷರು, ಸುಮಂಗಲಿ ಸೇವಾಶ್ರಮ, ಬೆಂಗಳೂರು, ಡಾ. ವಿ.ಆರ್. ಗುಡ್ಡೇಗೌಡ., ಅಧ್ಯಕ್ಷರು, ಏಕಲವ್ಯ ಜೀವಜಲ ಫೌಂಡೇಶನ್, ಶ್ರೀ ಆರ್. ಜಿ. ಗಿರೀಶ್, ಸಂಸ್ಥಾಪಕ ಅಧ್ಯಕ್ಷರು, ಏಕಲವ್ಯ ಜೀವಜಲ ಫೌಂಡೇಶನ್ ಹಾಗೂ ಏಕಲವ್ಯ ಮುಕ್ತ ದಳದ ನಾಯಕರು ಮತ್ತು ಸಹನಾಯಕರು, ಶ್ರೀಮತಿ ಕಾಂಚನಮಾಲಾ, ಶ್ರೀರಾಜೇಶ್ ಅವಲಕ್ಕಿ, ತರಬೇತಿ ನಾಯಕರು ಮತ್ತು ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಸಾಧಕರಿಗೆ ಗೌರವಿಸಿ ಸನ್ಮಾನಿಸಲಾಯಿತು.

# ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸ ಪತ್ರಿಕೆ

# KARNATAKA Scout & Guide

MONTHLY NEWS MAGAZINE

Vol: 66 Issue: 04 April 2025



**ಪೋಷಕರು**

ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**

ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**

ಕೊಂಡಜ್ಜಿ ಬ. ಷಣ್ಮುಖಪ್ಪ

**ಸಂಪಾದಕರು**

ಕೆ. ಗಂಗಪ್ಪಗೌಡ

**ಸಹಸಂಪಾದಕರು**

ಎನ್. ಶ್ರೀನಿವಾಸನ್

**ಸಂಚಾಲಕರು**

ಬಿ.ಎಸ್. ರವೀಂದ್ರ

**ಸದಸ್ಯರು**

ಮೋಹನ್ ಕೊಂಡಜ್ಜಿ

ಸಿ.ಪಿ. ಪರಮೇಶ್ವರ

ಚಳ್ಳಕೆರೆ ಯರ್ರಿಸ್ವಾಮಿ

ಎಂ.ಎನ್. ಷಡಕ್ಷರಿ

ಸಿ.ವಿ. ತಿರುಮಲರಾವ್

ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ

ಡಾ. ವಸುಂಧರ ಭೂಪತಿ

ಡಾ. ಶಕುಂತಲ

ಪ್ರಭಾವತಿ ಪಾಟೀಲ್



ಸಂಚಿಕೆಯ ವಾರ್ಷಿಕ ಚಂದಾ ರೂ. 100/–

ವಿದ್ಯಾಸಂಸ್ಥೆ ಹಾಗೂ ಸಂಘ–ಸಂಸ್ಥೆಗಳಿಗೆ

ವಾರ್ಷಿಕ ಚಂದಾ ರೂ. 100/–

ಚಂದಾಹಣವನ್ನು

ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ

ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ

#39, ಅರಮನೆ ರಸ್ತೆ, ಬೆಂಗಳೂರು – 560 001

ಇಲ್ಲಿಗೆ ಕಳುಹಿಸಲು ಕೋರಿದೆ.


## ಒಳಪುಟಗಳಲ್ಲಿ...


| | |
|---|---|
| ರಾಜ್ಯ ಮುಖ್ಯ ಆಯುಕ್ತರ ನುಡಿ | ...04 |
| 2025 ಮೇ ತಿಂಗಳ ಕಾರ್ಯಕ್ರಮಗಳ ವಿವರಗಳು | ...05 |
| ಸಂಪಾದಕೀಯ | ...06 |
| ಸಂಘಟಕರುಗಳ ಸಭೆ | ...08 |
| ರಾಜ್ಯಮಟ್ಟದ ಗೈಡ್ಸ್ ಆಯುಕ್ತರುಗಳ ಸಮಾವೇಶ | ...09 |
| 2024–25ನೇ ಸಾಲಿನ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ 90%ಕ್ಕಿಂತ ಹೆಚ್ಚು ಅಂಕಗಳಿಸಿದ ರೋವರ್–ರೇಂಜರ್‌ಗಳು | ...10 |
| ಜಿಲ್ಲಾ ವಾರ್ತೆಗಳು | ...13 |
| ಬೇಸಿಗೆ ಶಿಬಿರ | ...24 |
| ಹೊರ ಸಂಚಾರಗಳಿಗೆ ಪ್ರಕೃತಿ ಒಡ್ಡುವ ಸವಾಲುಗಳು–7 | ...25 |
| ಶ್ರದ್ಧಾಂಜಲಿ | ...26 |


## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಸ್ಕೌಟ್ಸ್ ಮತ್ತು ಗೈಡ್ಸ್‌ನ ಪುಸ್ತಕಗಳನ್ನು ಓದಲು ಕೆಳಗಿನ ಲಿಂಕ್‌ನ್ನು ಉಪಯೋಗಿಸಿ

https://archive.org/details/ServantsOfKnowledge?tab=collection&query=sng.*&sort=-addeddate

– ಸಂಪಾದಕರು



# ರಾಜ್ಯ ಮುಖ್ಯ ಆಯುಕ್ತರ ನುಡಿ

ಸಕಲ ಸ್ಕೌಟ್ಸ್ ಗೈಡ್ಸ್ ಬಂಧುಗಳಿಗೆ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು. 2024ನೇ ಶೈಕ್ಷಣಿಕ ವರ್ಷದಲ್ಲಿ ನಮ್ಮ ಸಂಸ್ಥೆಯ ಕಾರ್ಯಕ್ರಮಗಳು, ಚಟುವಟಿಕೆಗಳು ಮತ್ತು ತರಬೇತಿಗಳಲ್ಲಿನ ಸಾಧನೆ, ಗಣತಿಯಲ್ಲಿ ಸಾಧಿಸಿರುವ ಸಾರ್ವಕಾಲಿಕ ದಾಖಲೆ, ಈ ವರ್ಷದ ನಮ್ಮ ಪಯಣಕ್ಕೆ ಸ್ಪಷ್ಟ ದಿಕ್ಕು ತೋರಿಸುತ್ತಿವೆ. ಈ ಅನುಭವ ಮತ್ತು ಪ್ರೇರಣೆಯ ಆಧಾರದಲ್ಲಿ, 2025ನೇ ಶೈಕ್ಷಣಿಕ ವರ್ಷದ ಕಾರ್ಯಚಟುವಟಿಕೆಗಳನ್ನು ಹೊಸ ದೃಷ್ಟಿಕೋನದಿಂದ, ಹೆಚ್ಚು ಪರಿಣಾಮಕಾರಿಯಾಗಿ ರೂಪಿಸಬೇಕೆಂಬ ದೃಢ ಸಂಕಲ್ಪವನ್ನು ಹೊಂದಿದ್ದೇವೆ. ಈ ನಿಟ್ಟಿನಲ್ಲಿ ಮೈಸೂರಿನಲ್ಲಿ ಏಪ್ರಿಲ್ 26 ರಿಂದ 28ರವರೆಗೆ ನಡೆದ ಸಭೆಯಲ್ಲಿ ವಾರ್ಷಿಕ ಕಾರ್ಯಕ್ರಮಗಳ ಸಂಯೋಜನೆ ಮತ್ತು ಶಿಬಿರಗಳ ರೂಪುರೇಷೆಗಳ ಬಗ್ಗೆ ಚರ್ಚೆ ನಡೆದಿದೆ. ಈ ಪ್ರಕ್ರಿಯೆಯಲ್ಲಿ, ನಮ್ಮ ಸ್ಕೌಟ್–ಗೈಡ್ ಬಂಧುಗಳಿಂದಲೂ ಅಮೂಲ್ಯ ಸಲಹೆಗಳನ್ನು ಸ್ವೀಕರಿಸಲು ನಾವು ಸಿದ್ದರಿದ್ದೇವೆ. ನಿಮ್ಮೆಲ್ಲರ ಸಹಕಾರದಿಂದ ಈ ವರ್ಷವೂ ಹೆಚ್ಚಿನ ಯಶಸ್ಸನ್ನು ಸಾಧಿಸೋಣ ಎಂಬುದು ನನ್ನ ಕಳಕಳಿಯಾಗಿದೆ.

ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ನಮ್ಮ ಸಂಸ್ಥೆಯಿಂದ ರಾಜ್ಯದ ವಿವಿಧ ಭಾಗಗಳಲ್ಲಿ ಆಯೋಜಿಸುತ್ತಿರುವ ಬೇಸಿಗೆ ಶಿಬಿರಗಳು ಯಶಸ್ವಿಯಾಗಿ ನಡೆಯುತ್ತಿದ್ದು, ಎಲ್ಲೆಡೆ ಉತ್ತಮ ಪ್ರತಿಕ್ರಿಯೆಗಳು ದೊರೆಯುತ್ತಿವೆ. ಈಗಾಗಲೇ ಒಂದು ಲಕ್ಷಕ್ಕೂ ಹೆಚ್ಚಿನ ಮಕ್ಕಳು ಈ ಶಿಬಿರಗಳಲ್ಲಿ ಭಾಗವಹಿಸಿರುವುದು ನಮ್ಮೆಲ್ಲರ ಹೆಮ್ಮೆಯಾಗಿದೆ. ಬೇಸಿಗೆ ಬಿಸಿಲಿನ ತಾಪ ಹೆಚ್ಚಿದ್ದರೂ ಸಹ ನಮ್ಮ ಸ್ಕೌಟ್ಸ್–ಗೈಡ್ಸ್‌ಗಳು ಉತ್ಸಾಹದಿಂದ ಶಿಬಿರಗಳಲ್ಲಿ ಭಾಗವಹಿಸುತ್ತಿರುವುದು ಹೆಮ್ಮೆಯ ವಿಷಯ. ಈ ಶಿಬಿರಗಳು ನಮ್ಮ ವಿದ್ಯಾರ್ಥಿಗಳಲ್ಲಿ ಶಿಸ್ತು, ಸೇವಾ ಭಾವನೆ, ಸಾಮಾಜಿಕ ಜವಾಬ್ದಾರಿ ಮತ್ತು ನಾಯಕತ್ವವನ್ನು ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸುತ್ತಿವೆ. ಇದರ ಯಶಸ್ಸಿಗೆ ಕಾರಣಕರ್ತರಾದ ಖಾಸಗಿ ಹಾಗೂ ಸರ್ಕಾರಿ ಶಾಲೆಗಳ ಶಿಕ್ಷಕರುಗಳು, ಆಡಳಿತ ಮಂಡಳಿಗಳು ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ, ಪೋಷಕರಿಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳು.

ಈ ವರ್ಷದ ಆರಂಭದ, ಏಪ್ರಿಲ್ ತಿಂಗಳಲ್ಲಿ ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ ಮತ್ತು ಹಾಸನ ಜಿಲ್ಲೆಗಳಲ್ಲಿ ಪ್ರಾಥಮಿಕ ತರಬೇತಿ ಶಿಬಿರಗಳನ್ನು ಯಶಸ್ವಿಯಾಗಿ ಆಯೋಜಿಸಲಾಗಿದೆ. ಡಾ॥ ಬಿ.ಆರ್. ಅಂಬೇಡ್ಕರ್ ಜಯಂತಿಯ ಪ್ರಯುಕ್ತ ಏಪ್ರಿಲ್ 14 ರಂದು ರಾಜ್ಯ ಸಂಸ್ಥೆ ಆಯೋಜಿಸಿದ್ದ ಜೂಮ್ ಸಭೆಯಲ್ಲಿ ಖ್ಯಾತ ಚಿಂತಕ ಹಾಗೂ ಮಾಜಿ ರಾಜ್ಯ ಸಭಾಸದಸ್ಯರಾದ ಡಾ॥ ಎಲ್. ಹನುಮಂತಯ್ಯ ಅವರು ಭಾಗವಹಿಸಿ ಅತ್ಯಂತ ಪ್ರಭಾವಶಾಲಿಯಾದ ಮಾಹಿತಿಗಳನ್ನು ಹಂಚಿಕೊಂಡರು. ಅವರಿಗೆ ನನ್ನ ಧನ್ಯವಾದಗಳು. ಮೇ ತಿಂಗಳಲ್ಲಿ ನಡೆಯಲಿರುವ ಸಂಸ್ಥೆಯ ಎಲ್ಲ ಕಾರ್ಯಕ್ರಮಗಳ ಯಶಸ್ಸಿಗಾಗಿ, ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳ ಬದ್ದತೆ ಮತ್ತು ಸಕ್ರಿಯ ಭಾಗಿತ್ವವನ್ನು ಅಪೇಕ್ಷಿಸುತ್ತೇನೆ.

ನಮ್ಮ ಸಂಸ್ಥೆಗೆ ಜಿಲ್ಲಾ ಸಂಘಟಕರುಗಳು ಬಲವಾದ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಜ್ಯ ಸಂಸ್ಥೆ ಆಯೋಜಿಸುವ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳನ್ನು ಜಿಲ್ಲೆಗಳ ಮಟ್ಟದಲ್ಲಿ ಯಶಸ್ವಿಯಾಗಿ ಕಾರ್ಯಗತಗೊಳಿಸುವಲ್ಲಿ ಅವರ ಪಾತ್ರ ಮಹತ್ವವಾಗಿದೆ. ಏಪ್ರಿಲ್ 8, 9 ಮತ್ತು 10 ರಂದು ರಾಜ್ಯ ಕೇಂದ್ರ ಕಛೇರಿಯಲ್ಲಿ ಆಯೋಜಿಸಿದ ಮೂರು ದಿನಗಳ ಸಂಘಟಕರುಗಳ ಸಭೆ ಯಶಸ್ವಿಯಾಗಿ ನಡೆಯಿತು. ರಾಜ್ಯಸಂಸ್ಥೆಯ ಪದಾಧಿಕಾರಿಗಳು ಸಕ್ರಿಯವಾಗಿ ಭಾಗವಹಿಸಿ ಸಲಹೆ, ಸೂಚನೆಗಳನ್ನು ಕೊಟ್ಟಿದ್ದಾರೆ. ವಿಶೇಷವಾಗಿ, ರಾಜ್ಯ ಸಂಸ್ಥೆಯ ಹೆಚ್ಚುವರಿ ಮುಖ್ಯ ಆಯುಕ್ತರಾಗಿರುವ ಶ್ರೀ ಯು.ಟಿ. ಖಾದರ್ ಅವರು ಸಭೆಯಲ್ಲಿ ಭಾಗವಹಿಸಿ, ಸಂಘಟಕರುಗಳಿಗೆ ಪ್ರೇರಣಾದಾಯಕ ಮಾರ್ಗದರ್ಶನ ನೀಡಿರುತ್ತಾರೆ. ಇದು ನಮಗೆಲ್ಲ ಸಂತೋಷವನ್ನುಂಟುಮಾಡಿದೆ.

ರಾಜ್ಯ ಸಂಸ್ಥೆಯ ಕೇಂದ್ರ ಕಛೇರಿ ಆವರಣದಲ್ಲಿ, ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ಅವರ ಅನುದಾನದಡಿ ಬಿ.ಬಿ.ಎಂ.ಪಿ ಯಿಂದ ಮಂಜೂರಾಗಿರುವ ನೂತನ ಕಟ್ಟಡದ ಶಂಕುಸ್ಥಾಪನೆಯನ್ನು ಮಾನ್ಯ ಶಾಸಕರಾದ ಶ್ರೀ ರಿಜ್ವಾನ್ ಅರ್ಷದ್ ಅವರು ನೆರವೇರಿಸಿದರು. ಈ ವರ್ಷದಲ್ಲಿ, ಇದು ನಮ್ಮ ಸಂಸ್ಥೆಯ ಮೂಲಭೂತ ಸೌಕರ್ಯಗಳ ಅಭಿವೃದ್ದಿಯ ಹೊಸ ಅಧ್ಯಾಯಕ್ಕೆ ಮುನ್ನುಡಿ ಹಾಕಿದಂತಾಗಿದೆ. ಈ ಮಹತ್ವದ ಯೋಜನೆಗೆ ಸಹಕಾರ ನೀಡಿದ ಮಾನ್ಯ ಉಪಮುಖ್ಯಮಂತ್ರಿಗಳಿಗೆ ಮತ್ತು ಸಂಬಂಧಿಸಿದ ಎಲ್ಲ ಅಧಿಕಾರಿಗಳಿಗೆ ನಮ್ಮ ಸಂಸ್ಥೆ ಆಭಾರಿಯಾಗಿರುತ್ತದೆ.

ಕಳೆದ ಶೈಕ್ಷಣಿಕ ವರ್ಷದಲ್ಲಿ ನಡೆದ ಪಿಯುಸಿ ಪರೀಕ್ಷೆಗಳ ಫಲಿತಾಂಶಗಳಲ್ಲಿ ರಾಜ್ಯಾದ್ಯಂತ ರೋವರ್–ರೇಂಜರ್‌ಗಳು ಗಮನಾರ್ಹವಾದ ಸಾಧನೆ ಮಾಡಿರುವುದು ಹೆಮ್ಮೆಯ ವಿಚಾರ. ಅವರ ಸಾಧನೆಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಮುಂದಿನ ಅವರ ಶೈಕ್ಷಣಿಕ ಹಾದಿಗೆ ಯಶಸ್ಸನ್ನು ಹಾರೈಸುತ್ತೇನೆ. ಇನ್ನೂ ಎಸ್.ಎಸ್.ಎಲ್.ಸಿ. ಪರೀಕ್ಷೆಗಳ ಫಲಿತಾಂಶಗಳು ಹೊರಬರಬೇಕಿದ್ದು, ಅಲ್ಲಿಯೂ ಸಹ ನಮ್ಮ ಸ್ಕೌಟ್–ಗೈಡ್‌ಗಳು ಉತ್ತಮ ಸಾಧನೆ ಮಾಡುವ ನಿರೀಕ್ಷೆಯಿದೆ. ಪಠ್ಯಕ್ರಮದ ಜೊತೆಗೆ ಸ್ಕೌಟಿಂಗ್ ಮತ್ತು ಗೈಡಿಂಗ್ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ವಿದ್ಯಾರ್ಥಿಗಳ ಈ ಸಾಧನೆ ನಮಗೆ ಹೆಮ್ಮೆ ತಂದಿದೆ.

2025ರ ಆರ್ಥಿಕ ವರ್ಷಕ್ಕೆ, ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಶಿಕ್ಷಣ ಸಚಿವರುಗಳು ಹಾಗೂ ಸರ್ಕಾರದ ಹಣಕಾಸು ಮತ್ತು ಶಿಕ್ಷಣ ಇಲಾಖೆ ಅಧಿಕಾರಿಗಳು ನೀಡಿರುವ ಸಹಕಾರ ಹಾಗೂ ಬೆಂಬಲಕ್ಕಾಗಿ ನಾವು ಹೃತ್ಪೂರ್ವಕ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇವೆ. ಇದರೊಂದಿಗೆ, ವಿಧಾನಸಭೆಯ ಮಾನ್ಯ ಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್ ಮತ್ತು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರಾದ ಶ್ರೀ ಬಸವರಾಜ್ ರಾಯರೆಡ್ಡಿ ಅವರು ಸಂಸ್ಥೆಯ ಕಾರ್ಯಚಟುವಟಿಕೆಗಳತ್ತ ತೋರಿಸಿರುವ ವಿಶೇಷ ಆಸಕ್ತಿಯನ್ನು ನಾನು ಗೌರವಪೂರ್ವಕವಾಗಿ ಸ್ಮರಿಸುತ್ತೇನೆ.

ರಾಜ್ಯ ಸಂಸ್ಥೆಯ ಪ್ರಕಟಣಾ ಸಮಿತಿಯ ಗೌರವಾನ್ವಿತ ಅಧ್ಯಕ್ಷರಾದ ನಾಡೋಜ ಡಾ. ಗೊ.ರು. ಚನ್ನಬಸಪ್ಪ ಅವರಿಗೆ 'ಬಸವ ವೇದಿಕೆ'ಯಿಂದ ಮೇ 03, 2025 ರಂದು ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ 2025ನೇ ಸಾಲಿನ 'ಬಸವಶ್ರೀ' ಪ್ರಸಸ್ತಿ ಪ್ರದಾನ ಮಾಡಲಾಗುತ್ತಿದೆ. ಸಂಸ್ಥೆಯ ಮಾರ್ಗದರ್ಶಕರಾದ ಶ್ರೀಯುತರಿಗೆ ಗೌರವ ನಮನಗಳು.

ಇತ್ತೀಚೆಗೆ ಕಾಶ್ಮೀರದಲ್ಲಿ ನಡೆದ ಉಗ್ರದಾಳಿಯಲ್ಲಿ ಕರ್ನಾಟಕದ ಇಬ್ಬರು ಸೇರಿದಂತೆ 26 ಮಂದಿ ಪ್ರಾಣ ಕಳೆದುಕೊಂಡ ದುರಂತ ಘಟನೆ ನಮ್ಮೆಲ್ಲರಿಗೂ ಅತೀವ ನೋವು ಮತ್ತು ದುಃಖವನ್ನುಂಟುಮಾಡಿದೆ. ನಿರಪರಾಧಿ ನಾಗರಿಕರ ಮೇಲೆ ಕೋಮುವಾದಿ ಮನೋಭಾವದಿಂದ ನಡೆದ ಈ ಕ್ರೂರ ದಾಳಿ, ಮಾನವೀಯ ಮೌಲ್ಯಗಳನ್ನು ಕುಗ್ಗಿಸುವಂಥದ್ದು. ಕೋಮುಸೌಹಾರ್ಧತೆ ಮತ್ತು ಶಾಂತಿಯನ್ನು ಪ್ರತಿಪಾದಿಸುವ ನಮ್ಮ ಸಂಸ್ಥೆ ಈ ಅಮಾನುಷ ಕೃತ್ಯವನ್ನು ತೀವ್ರವಾಗಿ ಖಂಡಿಸುತ್ತದೆ. ಮೃತರ ಆತ್ಮಗಳಿಗೆ ಶಾಂತಿ ಸಿಗಲೆಂದು ಪ್ರಾರ್ಥಿಸುತ್ತಾ, ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಿರಲಿ ಎಂಬ ಆಶಯವನ್ನು ಹೊಂದಿದ್ದೇವೆ.

ರೋಮನ್ ಕ್ಯಾಥೋಲಿಕ್ ಚರ್ಚ್‌ನ ಮೊದಲ ಲ್ಯಾಟಿನ್ ಅಮೆರಿಕನ್ ಪೋಪ್ ಆಗಿ ಸೇವೆ ಸಲ್ಲಿಸಿದ ಪೋಪ್ ಫ್ರಾನ್ಸಿಸ್ ಅವರು ನಿಧನ ಹೊಂದಿದ್ದಾರೆ. ಶಾಂತಿ, ಸಹಿಷ್ಣುತೆ ಮತ್ತು ಮಾನವೀಯ ಮೌಲ್ಯಗಳ ಪ್ರಸಾರಕ್ಕಾಗಿ ಅವರು ತೆಗೆದುಕೊಂಡ ನಡಿಗೆಗಳು ಜಗತ್ತಿನಾದ್ಯಂತ ಲಕ್ಷಾಂತರ ಜನರಿಗೆ ಪ್ರೇರಣೆಯಾಗಿ ಪರಿಣಮಿಸಿವೆ. ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಪ್ರಾರ್ಥಿಸುತ್ತೇನೆ.

ಭಾರತದ ಹೆಮ್ಮೆಯ ವಿಜ್ಞಾನಿ, ಇಸ್ರೋನ ಮಾಜಿ ಅಧ್ಯಕ್ಷರು ಹಾಗೂ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡು ಸಮಿತಿಯ ಅಧ್ಯಕ್ಷರಾಗಿದ್ದ ಪದ್ಮವಿಭೂಷಣ ಡಾ. ಕೆ. ಕಸ್ತೂರಿ ರಂಗನ್ ಅವರ ಅಗಲಿಕೆಗೆ ನಮ್ಮ ಸಂಸ್ಥೆಯಿಂದ ಹಾಗೂ ವೈಯಕ್ತಿಕವಾಗಿ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇನೆ. ವಿಜ್ಞಾನ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಅವರು ಸಲ್ಲಿಸಿರುವ ಅಪೂರ್ವ ಸೇವೆ ಮತ್ತು ಕೊಡುಗೆಗಳು ಸ್ಮರಣೀಯವಾಗಿವೆ.

ಅವರು ಕರ್ನಾಟಕ ಸರ್ಕಾರದ ಜ್ಞಾನ ಆಯೋಗದ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ, ನಾನು ಅವರೊಂದಿಗೆ ಆಯೋಗದ ಸದಸ್ಯನಾಗಿ ಕೆಲಸ ಮಾಡಿದ ಅನುಭವ ನನಗೆ ಅತ್ಯಂತ ವಿಶಿಷ್ಟವಾಗಿತ್ತು. ಅವರ ನಿಧನದಿಂದ ಶ್ರೇಷ್ಠ ವಿಜ್ಞಾನಿ ಮಾತ್ರವಲ್ಲ, ದೂರದೃಷ್ಟಿವುಳ್ಳ ಶಿಕ್ಷಣ ತಜ್ಞರೊಬ್ಬರನ್ನು ಕಳೆದುಕೊಂಡಂತಾಗಿದೆ. ಅವರ ಆತ್ಮಕ್ಕೆ ಶಾಂತಿ ದೊರಕಲಿ ಹಾಗೂ ಅವರ ಕುಟುಂಬಕ್ಕೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

ಆಹಾರ ದೈವಿಕ ಸಂಪತ್ತು, ಅದನ್ನು ಸಂರಕ್ಷಿಸೋಣ
ಆಹಾರವನ್ನು ಉಳಿಸಿ, ಭವಿಷ್ಯವನ್ನು ಕಾಪಾಡಿ!

# THE PEOPLE'S POPE
# His Holiness POPE FRANCIS



His Holiness Pope Francis, Supreme Pontiff of the Roman Catholic Church of the World passed away on Monday the 21st April 2025 at Vatican City.

The Bharat Scouts and Guides, Karnataka Condoled the Passing away of His Holiness Pope Francis.

The Government of Karnataka has declared a Three Days State Mourning on Tuesday, Wednesday and on the Day of the funeral as a Mark of Respect. His Affection & Love for the People of India will always be Cherished.

May His Soul find Eternal Peace in God's Embrace.

## ಮೇ 2025ರ ಮಾಹೆಯ ಕಾರ್ಯಕ್ರಮಗಳ ವಿವರಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 1 | ರಾಜ್ಯ ಮಟ್ಟದ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್‌ಗಳ ಮೂಲ ತರಬೇತಿ ಶಿಬಿರ | 14 ರಿಂದ 20 ಮೇ 2025 | ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 2 | ರಾಜ್ಯ ಮಟ್ಟದ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್‌ಗಳ ಮುಂದುವರೆದ ತರಬೇತಿ ಶಿಬಿರ | 14 ರಿಂದ 20 ಮೇ 2025 | ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 3 | ರಾಜ್ಯ ಮಟ್ಟದ ಗಾಯನ ತರಬೇತಿ ಶಿಬಿರ | 6 ರಿಂದ 8 ಮೇ 2025 | ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 4 | ರಾಜ್ಯ ಮಟ್ಟದ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ & ಸಹಾಯಕ ಕಾರ್ಯದರ್ಶಿಯವರ ತರಬೇತಿ ಶಿಬರ | 6 ರಿಂದ 8 ಮೇ 2025 | ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 5 | ರೋವರ್ಸ್–ರೇಂಜರ್ಸ್‌ಗಳಿಗೆ ರಾಜ್ಯ ಮಟ್ಟದ ಪ್ರಕೃತಿ ಅಧ್ಯಯನ ಮತ್ತು ಕುಮಾರ ಪರ್ವತ ಚಾರಣ ಶಿಬಿರ | 09 ರಿಂದ 11 ಮೇ 2025 | ಸುಬ್ರಮಣ್ಯ, ದಕ್ಷಿಣ ಕನ್ನಡ ಜಿಲ್ಲೆ |
| 6 | ರಾಜ್ಯ ಮಟ್ಟದ ಸೇವಾ ಮತ್ತು ಕೌಶಲ್ಯ ತರಬೇತಿ ಶಿಬಿರ | 22 ರಿಂದ 26 ಮೇ 2025 | ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 7 | ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಯಲ್ಲಿ 90%ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭ | – | ಉಡುಪಿ ಜಿಲ್ಲೆ |

# ಸಂಪಾದಕೀಯ



ಮಾನ್ಯರೆ,

ವ್ಯಕ್ತಿಯು ತಾನು ನಿರ್ವಹಿಸುವ ಕಾರ್ಯಗೌರವಗಳ ಜವಾಬ್ದಾರಿಯುತ ನಿರ್ವಹಣೆಯಲ್ಲಿ, ಯಶಸ್ಸುಗಳಿಸಲು, ಮುಖ್ಯವಾಗಿ ಮನಗಾಣಬೇಕಾಗಿರುವುದು, ಆ ಕಾರ್ಯನಿರ್ವಹಣೆಯಲ್ಲಿ ಅವರ ಕಾರ್ಯನಿಷ್ಠೆ (Commitment), ಆ ಕಾರ್ಯವನ್ನು ಕಾರ್ಯಾನುಷ್ಠಾನಗೊಳಿಸುವಲ್ಲಿ ಬೇಕಾಗಿರುವ ಸ್ಪಷ್ಟ ಮಾಹಿತಿ (Clarity) ಮತ್ತು ಅದನ್ನು ನಿರ್ವಹಿಸುವಲ್ಲಿ ಯಾವುದೇ ರೀತಿಯಲ್ಲೂ ಹಿಂಜರಿಕೆ ಆಗುವಂತಹ ಅಹಂಕಾರ ಇಲ್ಲದಿರುವುದು (No ego) - For success one needs commitment, Clarity and No ego ಹೀಗೆ ವ್ಯಕ್ತಿಯು ತನ್ನ ಕಾರ್ಯಕ್ಷೇತ್ರದಲ್ಲಿ ಯಶಸ್ಸುಗಳಿಸುವಲ್ಲಿ ಮೇಲ್ಕಂಡ ಮುಖ್ಯ ಅಂಶಗಳ ಬಗ್ಗೆ ಆದ್ಯ ಗಮನಹರಿಸಿ, ಅದರಂತೆ ಕ್ರಮವಹಿಸುವಲ್ಲಿ ನಿರ್ಧಾರ ಕೈಗೊಂಡು, ತಾಳ್ಮೆಹೊಂದಿ, ಉತ್ಸಾಹದಿಂದ ಮುನ್ನಡೆಯುವಲ್ಲಿ ಶ್ರಮಿಸುವುದು ಅತ್ಯಗತ್ಯ. ಈ ಅಂಶಗಳನ್ನು ಮನಗಂಡು, ರಾಜ್ಯ ಮುಖ್ಯ ಆಯುಕ್ತರ ಮಾರ್ಗದರ್ಶನದಲ್ಲಿ ರಾಜ್ಯ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಂಘಟಕರುಗಳ, ಅಧಿಕಾರಿಗಳ ಚಿಂತನ–ಮಂಥನ ಸಭೆಯನ್ನು ಏಪ್ರಿಲ್ 07 ರಿಂದ 09ರ ವರೆಗೆ ಕೇಂದ್ರ ಕಛೇರಿಯಲ್ಲಿ ಏರ್ಪಡಿಸಿ ನಿರ್ವಹಿಸಿರುವುದು ಬಹಳಷ್ಟು ಫಲಪ್ರದ ಆಗಿರುವುದು ಎಂಬುದನ್ನು ತಿಳಿಸಲು ಹರ್ಷಿಸುತ್ತೇನೆ. ಈ ಸಭೆಯಲ್ಲಿ 2024–25ನೇ ಸಾಲಿನ ಸ್ಕೌಟ್–ಗೈಡ್ ಚಳವಳಿಯ ಸಾಧಕ–ಬಾಧಕಗಳ ಬಗ್ಗೆ ಸ್ಪಷ್ಟವಾಗಿ ಅವಲೋಕಿಸಿರುವುದಲ್ಲದೇ ಸಾಧನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಅಭಿನಂದಿಸಿ, ಬಾಧಕಗಳ ಬಗ್ಗೆ ವಿಮರ್ಶಿಸಿ, ಮುಂದಿನ ವರ್ಷಗಳಲ್ಲಿ ಆ ಭಾಧಕಗಳನ್ನು (ಅಡಚಣೆಗಳನ್ನು) ಪರಿಹರಿಸಿಕೊಂಡು ಕಾರ್ಯಾನುಷ್ಠಾನಗೊಳಿಸುವಲ್ಲಿ ಪ್ರವೃತ್ತರಾಗಲು ತೀರ್ಮಾನಿಸಿರುವುದು ಹರ್ಷದಾಯಕ. ಈ ಸಭೆಯಲ್ಲಿ ಭಾಗವಹಿಸಿದವರೆಲ್ಲರೂ ತಮ್ಮ ನೋವು–ನಲಿವುಗಳನ್ನು ಸ್ಪಷ್ಟಪಡಿಸಿ, ಅವುಗಳ ಬಗ್ಗೆ ಸಂಸ್ಥೆಯ ಕಾರ್ಯಚಟುವಟಿಕೆಗಳ ಯಶಸ್ವಿ ಕಾರ್ಯಾನುಷ್ಠಾನ, ಪರಿಹಾರ ಕ್ರಮಗಳ ಬಗ್ಗೆ ದಿಟ್ಟ–ಸ್ಪಷ್ಟ ನಿಲುವುಹೊಂದಿ, ಇನ್ನೂ ಹೆಚ್ಚು ಉತ್ಸಾಹದಿಂದ ನಿರ್ವಹಿಸುವಲ್ಲಿ ಶ್ರಮಿಸಲು ಸಂಕಲ್ಪಿಸಿ, ಹರ್ಷಿತರಾಗಿ ಹೋಗಿರುವುದು ಆಶಾದಾಯಕ ಆಗಿರುವುದು. ಸದರಿ ಸಭೆಯಲ್ಲಿ ದೊರೆತ ಸ್ಪಷ್ಟ ಮಾಹಿತಿ, ಮಾರ್ಗದರ್ಶನದಂತೆ ಎಲ್ಲಾ ಜಿಲ್ಲಾ ಸಂಘಟಕರುಗಳು, ಅಧಿಕಾರಿಗಳು ತಮ್ಮ–ತಮ್ಮ ಕ್ಷೇತ್ರದಲ್ಲಿ ಕಾಯಾ, ವಾಚಾ, ಮನಸಾ ಶ್ರಮಿಸುತ್ತಾ, ಸ್ಕೌಟ್ಸ್–ಗೈಡ್ಸ್ ಚಳವಳಿಯ ಧ್ಯೇಯೋದ್ದೇಶಗಳ ಯಶಸ್ವಿ ಅನುಷ್ಠಾನದಲ್ಲಿ ಪಾಲ್ಗೊಳ್ಳಲು ಮತ್ತೊಮ್ಮೆ ರಾಜ್ಯ ಸಂಸ್ಥೆಯ ಪರವಾಗಿ ವಿನಂತಿಸುತ್ತೇನೆ.

ವಿದ್ಯಾರ್ಥಿಗಳು ಶಾಲಾ ಬೇಸಿಗೆ ರಜಾ ದಿನಗಳಲ್ಲಿ ಹೆಚ್ಚು–ಹೆಚ್ಚು ಲವಲವಿಕೆಯಿಂದಿರುವಲ್ಲಿ, ಸಂತೋಷದಿಂದ ಕಾಲಕಳೆಯುವಲ್ಲಿ, ತಮ್ಮ ಮಾನಸಿಕ, ದೈಹಿಕ, ಆತ್ಯಾತ್ಮಿಕ, ಸಾಂಸ್ಕೃತಿಕ, ಸಾಂಘಿಕ, ಕಲಾತ್ಮಕ ಇತ್ಯಾದಿ ಪ್ರತಿಭೆಗಳನ್ನು ಅಭಿವೃದ್ಧಿಪಡಿಸಿಕೊಳ್ಳುವಲ್ಲಿ, ಅವರಿಗೆ ವಿಶಿಷ್ಠ–ವಿಶೇಷ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡು ಸಮರ್ಪಕವಾಗಿ ನಿರ್ವಹಿಸುವುದು ಬಹಳ ಅವಶ್ಯಕ ಆಗಿರುವುದು. ಇದನ್ನು ಮನಗಂಡು ಮಾನ್ಯ ರಾಜ್ಯ ಮುಖ್ಯ ಆಯುಕ್ತರವರ ಸಕಾಲಿಕ, ಸಮರ್ಪಕ, ಸಮರ್ಥ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಈಗ್ಗೆ 2 ವರ್ಷಗಳಿಂದಲೂ ಸ್ಕೌಟ್ಸ್–ಗೈಡ್ಸ್ ಮತ್ತು ಇತರೆ ವಿದ್ಯಾರ್ಥಿಗಳು ಸೇರಿದಂತೆ, ಲಕ್ಷಾಂತರ ವಿದ್ಯಾರ್ಥಿಗಳು ಬೇಸಿಗೆ ಶಿಬಿರಗಳಲ್ಲಿ ಭಾಗವಹಿಸಿ ಹರ್ಷಿತರಾಗುವಂತೆ ಕ್ರಮವಹಿಸುತ್ತಿರುವ ಸರ್ವರಿಗೂ ಅನಂತಾನಂತ ಅಭಿನಂದನೆಗಳನ್ನು ತಿಳಿಸಬಯಸುತ್ತೇನೆ.

2024ನೇ ಸಾಲಿನ ಮಾರ್ಚ್ ಅಂತ್ಯದಿಂದ ಮೇ ಅಂತ್ಯದವರೆಗಿನ ಬೇಸಿಗೆ ಶಿಬಿರದಲ್ಲಿ 1,50,000 ಹೆಚ್ಚು ವಿದ್ಯಾರ್ಥಿಗಳು ಈ ಗುಣಾತ್ಮಕ ಶಿಕ್ಷಣದ ಫಲಾನುಭವಿಗಳಾಗಿದ್ದು, ಮಾರ್ಚ್ 2025ರ ಅಂತ್ಯದಿಂದ ಮೇ 2025ರ ಅಂತ್ಯದೊಳಗಿನ ಅವಧಿಯಲ್ಲಿ 2 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸುವಂತಾಗುತ್ತಿರುವುದು ಅಭಿನಂದನಾರ್ಹ.

ಈ ಬೇಸಿಗೆ ಶಿಬಿರದ ಕಾರ್ಯಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಧ್ಯೇಯೋದ್ದೇಶಗಳ ಬಗ್ಗೆ, ಘನ ಚಟುವಟಿಕೆಗಳ ಬಗ್ಗೆ, ಅವರುಗಳ ಸಾಮರ್ಥ್ಯಗಳನ್ನು, ಬದುಕಿನ ಮೌಲ್ಯಗಳನ್ನು ಹೆಚ್ಚಿಸುವ ಬಗ್ಗೆ ಸಂಕ್ಷಿಪ್ತವಾಗಿ ಮನನ ಮಾಡಿಸಿರುವುದಲ್ಲದೇ, ಅವರುಗಳ ಇತರೆ ಸರ್ವಾಂಗೀಣ ಅಭಿವೃದ್ಧಿ ಬಗ್ಗೆಯೂ ಆದ್ಯ ಗಮನ ಹರಿಸಿ, ನಿರ್ವಹಣೆ ಆಗುತ್ತಿರುವುದು ಅಭಿನಂದನಾರ್ಹ. ಈ ಬೇಸಿಗೆ ಶಿಬಿರಗಳ ಯಶಸ್ಸಿಗೆ ಸಹಕರಿಸುತ್ತಿರುವ ಸರ್ವರಿಗೂ, ವಿಶೇಷವಾಗಿ ಶಿಕ್ಷಣ ಇಲಾಖಾ ಎಲ್ಲಾ ಹಂತದ ಅಧಿಕಾರಿಗಳಿಗೆ, ಶಾಲಾ ಮುಖ್ಯಸ್ಥರಿಗೆ, ಶಿಕ್ಷಕ ವೃಂದದವರಿಗೆ ಅನಂತಾನಂತ ಅಭಿನಂದನೆಗಳನ್ನು ತಿಳಿಸಬಯಸುತ್ತೇನೆ.

ಭಾರತ್ ಸ್ಕೌಟ್ಸ್ ಗೈಡ್ಸ್ ಚಳವಳಿಯ ಯಶಸ್ಸು ಇದನ್ನು ಕಾರ್ಯಾನುಷ್ಠಾನ ಮಾಡುವ ದಳನಾಯಕರುಗಳು ನೀಡುವ ಸಮರ್ಥ ಮಾರ್ಗದರ್ಶನವನ್ನು ಒಳಗೊಂಡಿರುವುದು. ಅವರುಗಳ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ರಾಜ್ಯ ಸಂಸ್ಥೆ, ಜಿಲ್ಲಾ ಸಂಸ್ಥೆಗಳಿಂದ ಹಲವಾರು ಅರ್ಹ ತರಬೇತಿ ಶಿಬಿರಗಳನ್ನು ಹಮ್ಮಿಕೊಳ್ಳುತ್ತಿದ್ದು, ಅದರಂತೆ ಏಪ್ರಿಲ್ 2025ರಲ್ಲಿ ಏರ್ಪಡಿಸಿರುವ ಎಲ್ಲಾ ಹಂತದ ತರಬೇತಿಗಳಿಗೆ, ಸೇವಾ ಶಿಬಿರಗಳಿಗೆ ಭಾಗವಹಿಸಿ ಯಶಸ್ವಿಗೊಳಿಸಿರುವ ಸರ್ವರಿಗೂ ಅಭಿನಂದನೆಗಳು. ಸರ್ಕಾರಿ, ಅನುದಾನಿತ ಶಿಕ್ಷಣ ಸಂಸ್ಥೆಗಳೊಂದಿಗೆ ಅನುದಾನ ರಹಿತ ಬಹಳಷ್ಟು ಖಾಸಗಿ ಶಿಕ್ಷಣ ಸಂಸ್ಥೆಗಳವರೂ ಈ ತರಬೇತಿ ಶಿಬಿರಗಳ ಲಾಭವನ್ನು ತಮ್ಮ ಸಂಸ್ಥೆಯ ಶಿಕ್ಷಕರು/ಉಪನ್ಯಾಸಕರು ಹೊಂದುವಂತೆ ಮಾಡಿ, ಪ್ರೋತ್ಸಾಹಿಸುತ್ತಿರುವುದು ನಮ್ಮ ಉತ್ಸಾಹವನ್ನು ಹೆಚ್ಚಿಸಿರುವುದು. ಏಪ್ರಿಲ್ 25ರಂದು ಆನ್‌ಲೈನ್‌ನಲ್ಲಿ ಏರ್ಪಟ್ಟ ರಾಜ್ಯದ ಎಲ್ಲಾ ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷರು, ಕಾರ್ಯದರ್ಶಿಗಳು, ಪದಾಧಿಕಾರಿಗಳು, ಪ್ರಾಂಶುಪಾಲರುಗಳು ಮತ್ತು ಸರ್ಕಾರಿ ಪದವಿ ಕಾಲೇಜುಗಳ ಮತ್ತು ಪದವಿಪೂರ್ವ ಕಾಲೇಜುಗಳ ಮುಖ್ಯಸ್ಥರುಗಳ ಸಭೆಯಲ್ಲಿ 450ಕ್ಕೂ ಹೆಚ್ಚು ಮುಖ್ಯಸ್ಥರುಗಳು ಭಾಗವಹಿಸಿ ತಮ್ಮ ಕಾರ್ಯತತ್ಪರತೆಯನ್ನು ತಿಳಿಸಿ, ಸ್ಕೌಟ್–ಗೈಡ್ ಚಳವಳಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಇನ್ನೂ ಹೆಚ್ಚಾಗಿ ಸಹಕರಿಸುವುದಾಗಿ ತಿಳಿಸಿರುವುದು ಹರ್ಷವನ್ನುಂಟುಮಾಡಿತು. ಈ ಸಂದರ್ಭದಲ್ಲಿ ಡಾ॥ ಎಂ. ಮೋಹನ್ ಆಳ್ವಾ, ಅಧ್ಯಕ್ಷರು, ಆಳ್ವಾಸ್ ಶಿಕ್ಷಣ ಸಂಸ್ಥೆ ಮತ್ತು ಶ್ರೀ ಪಿ.ಜಿ.ಆರ್.ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಇವರುಗಳು ಸ್ಕೌಟ್ಸ್–ಗೈಡ್ಸ್ ಚಳವಳಿಯ ಸಕ್ರಿಯ ಅನುಷ್ಠಾನದ ಮಹತ್ವದ ಬಗ್ಗೆ ನೀಡಿದ ಮಾಹಿತಿಗಳು ಅವರೆಲ್ಲರಿಗೂ ಬಹಳಷ್ಟು ಪ್ರೇರಣೆ ಆಗಿರುವುದು ಶ್ಲಾಘನೀಯ.

ಒಟ್ಟಿನಲ್ಲಿ ಏಪ್ರಿಲ್ 2025ರಲ್ಲಿ ಏರ್ಪಟ್ಟಿರುವ ಎಲ್ಲಾ ಕಾರ್ಯಗೌರವಗಳು, ಕಾರ್ಯಚಟುವಟಿಕೆಗಳು, ತರಬೇತಿಗಳು, ಸಭೆಗಳು ಈ ಹಿಂದಿನ ಸಾಲಿನ ಕಾರ್ಯಚಟುವಟಿಕೆಗಳ ಸಾಧಕ–ಬಾಧಕಗಳ ಚಿಂತನ–ಮಂಥನದೊಂದಿಗೆ ಮುಂಬರುವ ವರ್ಷದಲ್ಲಿನ ಸಕ್ರಿಯ ಕಾರ್ಯಚಟುವಟಿಕೆಗಳ ಬಗ್ಗೆಯ ದಿಟ್ಟ ನಿಲುವನ್ನು ತಿಳಿಸುವ ದಿಕ್ಸೂಚಿ ಆಗಿರುವುದು. ಅವುಗಳನ್ನು 2025–26ನೇ ಸಾಲಿನಲ್ಲೂ ಸಕ್ರಿಯವಾಗಿ ಅನುಷ್ಠಾನಗೊಳಿಸಿ, ಯಶಸ್ಸುಗೊಳಿಸುವಲ್ಲಿಯ ಹೆಚ್ಚು ಕಾರ್ಯಾನುಷ್ಠಾನ ಕ್ರಮಗಳಿಗಾಗಿ ಏಪ್ರಿಲ್ 26 ರಿಂದ 28ರ ವರೆಗೆ ಮೈಸೂರಿನಲ್ಲಿ ವಿಶೇಷ ಕಾರ್ಯಾಗಾರವನ್ನು ಹಮ್ಮಿಕೊಂಡು ನಿರ್ವಹಿಸಲು ಕ್ರಮವಹಿಸಲಾಗಿರುವುದು ಎಂಬುದನ್ನು ತಿಳಿಸಲು ಹರ್ಷಿಸುತ್ತೇನೆ.

ಸ್ಕೌಟ್ಸ್–ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪಗೌಡ)

ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

# NATIONAL LEVEL ADVOCACY WORKSHOP ON SDGS FOR ROVERS AND RANGERS & YOUNG LEADERS

ಮಾರ್ಚ್ 24 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯಾರವರ ಅಧ್ಯಕ್ಷತೆಯಲ್ಲಿ National Level Advocacy Workshop on SDGS for Rovers & Rangers &Young Leaders ಕಾರ್ಯಕ್ರಮವು ದೀಪ ಬೆಳಗಿಸುವುದರ ಮೂಲಕ ಉದ್ಘಾಟನೆಗೊಂಡಿತು. ಮುಖ್ಯ ಅತಿಥಿಗಳಾಗಿ ಡಾ. ಅರುಣ್‌ಕುಮಾರ್ ಶೆಟ್ಟಿ, ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಇವರು ಭಾಗವಹಿಸಿದ್ದರು. ವೇದಿಕೆಯಲ್ಲಿ, ರಾಷ್ಟ್ರೀಯ ಕೇಂದ್ರ ಕಛೇರಿಯ ನಿವೃತ್ತ ನಿರ್ದೇಶಕರಾದ ಶ್ರೀ ಆರ್. ಕೃಷ್ಣಸ್ವಾಮಿ, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಪನ್ಮೂಲ ವ್ಯಕ್ತಿ ಶ್ರೀಮತಿ ಲತಾ, ಕೇರಳ ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಜಿ.ಜಿ. ಚಂದ್ರ, ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ವಸಂತ್‌ರಾವ್, ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್‌ಕುಮಾರ್ ಕೆ.ಎಸ್ ಉಪಸ್ಥಿತರಿದ್ದರು. ಜಿಲ್ಲಾ ಜೊತೆ ಕಾರ್ಯದರ್ಶಿ ಶ್ರೀಮತಿ ಜಯವಂತಿ ಸೋನ್ಸ್ ಸ್ವಾಗತಿಸಿದರು. ಜಿಲ್ಲಾ ಕೋಶಾಧಿಕಾರಿ ಶ್ರೀ ನವೀನ್ ಚಂದ್ರ, ಕಾರ್ಯಕ್ರಮ ನಿರ್ವಹಿಸಿದರು. ಈ ಸಂದರ್ಭದಲ್ಲಿ ಮಾನ್ಯ ಶ್ರೀ ಯು.ಟಿ. ಖಾದರ್, ಕರ್ನಾಟಕ ವಿಧಾನ ಸಭೆಯ ಸ್ಪೀಕರ್ ಹಾಗೂ ಸ್ಕೌಟ್–ಗೈಡ್ ಹೆಚ್ಚುವರಿ ರಾಜ್ಯ ಮುಖ್ಯ ಆಯುಕ್ತರು ಭಾಗವಹಿಸಿದ್ದರು.




ಮಾರ್ಚ್ 28 ರಂದು ಶಿಬಿರದ ಸಮಾರೋಪ ಸಮಾರಂಭವು ರಾಷ್ಟ್ರೀಯ ನಿವೃತ್ತ ನಿರ್ದೇಶಕ ಶ್ರೀ ಕೃಷ್ಣಸ್ವಾಮಿಯವರ ಸಮಾರೋಪ ಭಾಷಣದೊಂದಿಗೆ ನಡೆಯಿತು. ವೇದಿಕೆಯಲ್ಲಿ ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಶ್ರೀನಿವಾಸ ಪೂಜಾರಿ, ಗುರುಪುರ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಸಂತೋಷ್ ಶೆಟ್ಟಿ, ಕೇರಳ ರಾಜ್ಯ ಸಹ ಸಂಘಟನಾ ಆಯುಕ್ತರಾದ ಶ್ರೀ ಜೇಜಿಚಂದ್ರ, ತಮಿಳುನಾಡು ಜಿಲ್ಲಾ ಕಾರ್ಯದರ್ಶಿ ಶ್ರೀ ರಮಿ, ಕರ್ನಾಟಕ ರಾಜ್ಯ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಮಧುಸೂಧನ್ ಅವಾಲ, ಹೆಚ್ಚುವರಿ ಅಂತರಾಷ್ಟ್ರೀಯ ಆಯುಕ್ತರು ಉಪಸ್ಥಿತರಿದ್ದರು. ಶಿಬಿರದ ನಾಯಕರಾದ ಶ್ರೀ ಅನಲೇಂದ್ರ ಶರ್ಮ, ಸಹಾಯಕ ನಿರ್ದೇಶಕರು ಶಿಬಿರದ ಪೂರ್ಣ ಮಾಹಿತಿ ನೀಡಿದರು. ಶಿಬಿರಾರ್ಥಿ ಶ್ರೀಮತಿ ಜಾಯಿನಿ ಸ್ವಾಗತಿಸಿದರು. ರೇಂಜರ್ ಶ್ರೀಮತಿ ಕೋಮಲ ಕಾರ್ಯಕ್ರಮ ನಿರೂಪಿಸಿದರು. ರಾಜ್ಯ ಸಹ ಸಂಘಟನಾ ಆಯುಕ್ತರಾದ ಶ್ರೀಮತಿ ಮಲ್ಲೇಶ್ವರಿ ಜುಜಾರೆ, ರಾಜ್ಯ ಸಂಸ್ಥೆಯ ಪರವಾಗಿ ಧನ್ಯವಾದ ನೀಡಿದರು.



# ಸಂಘಟಕರುಗಳ ಸಭೆ



ರಾಜ್ಯ ಸಂಸ್ಥೆಯ ವತಿಯಿಂದ ಏಪ್ರಿಲ್ 07 ರಿಂದ 09ರ ವರೆಗೆ ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ, ಬೆಂಗಳೂರು ಇಲ್ಲಿ ರಾಜ್ಯ ಸಹಾಯಕ ಸಂಘಟನಾ ಆಯುಕ್ತರು, ಜಿಲ್ಲಾ ಸಂಘಟಕರುಗಳು, ಸಂಘಟನಾ ಶಿಕ್ಷಕರು, ಸ್ಕೌಟ್–ಗೈಡ್ ಸ್ವಯಂ ಸೇವಕರು ಹಾಗೂ ಸ್ಕೌಟ್–ಗೈಡ್ ಸಹಾಯಕರುಗಳ ಸಭೆಯನ್ನು ನೆರವೇರಿಸಲಾಯಿತು.

ಸದರಿ ಸಭೆಯ ಉದ್ಘಾಟನೆಯನ್ನು ಶ್ರೀ ಎಂ.ಎ. ಖಾಲಿದ್, ರಾಜ್ಯ ಆಯುಕ್ತರು (ಸ್ಕೌ) ಇವರು ನೆರವೇರಿಸಿ ಶುಭವನ್ನು ಹಾರೈಸಿ, ಎಲ್ಲಾ ಸಂಘಟಕರುಗಳಿಗೆ ಲೆಕ್ಕಪತ್ರ ಸಲ್ಲಿಕೆ ಮತ್ತು ವ್ಯವಸ್ಥೆ, ಹಣಕಾಸು ಶಿಸ್ತಿನ ವಿಷಯದ ಬಗ್ಗೆ ಮಾಹಿತಿಯನ್ನು ನೀಡಿದರು. ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಆಯುಕ್ತರು (ಗೈ), ವಯಸ್ಕ ಸಂಪನ್ಮೂಲ, ಇವರು ತರಬೇತಿಯಲ್ಲಿ ಪಾಲಿಸಬೇಕಾದ ಹಾಗೂ ಆಗುತ್ತಿರುವ ನ್ಯೂನತೆಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈ) ಇವರು ಮಾತನಾಡಿ ಸ್ಥಳೀಯ ಮತ್ತು ಜಿಲ್ಲಾ ಸಂಸ್ಥೆಗಳನ್ನು ಸಕ್ರಿಯಗೊಳಿಸುವ ಬಗ್ಗೆ ಹಾಗೂ ಅದರಿಂದಾಗುವ ಲಾಭಗಳ ಬಗ್ಗೆ ಮಾಹಿತಿಯನ್ನು ನೀಡಿದರು.

ರಾಜ್ಯ, ರಾಷ್ಟ್ರ, ವಿಭಾಗೀಯ ಮತ್ತು ಅಂತರರಾಷ್ಟ್ರೀಯ ಮಟ್ಟದವರೆಗಿನ ಮಕ್ಕಳು ಮತ್ತು ವಯಸ್ಕ ನಾಯಕರ ನಿಯೋಜನೆ ಬಗ್ಗೆ, ಸಮುದಾಯ ಸೇವೆ ಮತ್ತು ಅಭಿವೃದ್ಧಿಯ ವಿವಿಧ ಪಾರಿತೋಷಕಗಳು, 2025–26ನೇ ಸಾಲಿನ ಬೇಸಿಗೆ ಶಿಬಿರ, ಕಾರ್ಯಕ್ರಮಗಳು, ಚಟುವಟಿಕೆಗಳು ಮತ್ತು ತರಬೇತಿಗಳ ಬಗ್ಗೆ ಹಾಗೂ ಸಂಘಟಕರುಗಳು ಹೆಚ್ಚಿನ ಕಾರ್ಯಕ್ಷಮತೆಯಿಂದ ಹಾಗೂ ಜವಾಬ್ದಾರಿಯಿಂದ ನಿರ್ವಹಿಸುವ ಬಗ್ಗೆ ಚರ್ಚಿಸಲಾಯಿತು.

ಸಂಜೆ 5 ಗಂಟೆಗೆ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳ ಆನ್‌ಲೈನ್ ಸಭೆಯನ್ನು ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಶ್ರೀ ಪಿ.ಜಿ.ಆರ್. ಸಿಂಧ್ಯರವರು ಮಾತನಾಡಿ 2024–25ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ ಗಣತಿ 98% ಅಂದರೆ 7,85,000 ಗುರಿಯನ್ನು ತಲುಪಿರುವುದಕ್ಕಾಗಿ ಎಲ್ಲರನ್ನೂ ಅಭಿನಂದಿಸಿ ಹರ್ಷವನ್ನು ವ್ಯಕ್ತಪಡಿಸಿದರು.

2024–25ನೇ ಸಾಲಿನಲ್ಲಿ ಹೆಚ್ಚಿನ ಯುವ ಕಾರ್ಯಕ್ರಮಗಳು, ಎಲ್ಲಾ ಜಿಲ್ಲೆಗಳಲ್ಲಿ ಮೂಲ ತರಬೇತಿ ಶಿಬಿರಗಳು, ರಾಜ್ಯ ಮಟ್ಟದಲ್ಲಿ ಅನೇಕ ವಿಶೇಷ ತರಬೇತಿ ಶಿಬಿರಗಳು ಹಾಗೂ ಆಯುಕ್ತರ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರವಾಗಿದ್ದು, ಎಲ್ಲಾ ಅಂಶಗಳಲ್ಲಿಯು ಸಹ ಕರ್ನಾಟಕ ರಾಜ್ಯ ಮುಂಚೂಣಿಯಲ್ಲಿದೆ. ರಾಷ್ಟ್ರ ಮಟ್ಟದ 13 ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದೆ. ಸ್ಥಳೀಯ ಮತ್ತು ಜಿಲ್ಲಾ ಪದಾಧಿಕಾರಿಗಳು, ಉಪನಿರ್ದೇಶಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕರ್ನಾಟಕ ಸರ್ಕಾರದ ಶಿಕ್ಷಣ ಮತ್ತು ವಿವಿಧ ಇಲಾಖೆಗಳು ನೀಡಿದ ಸಹಕಾರವನ್ನು ಶ್ಲಾಘಿಸಿ ಕೃತಜ್ಞತೆಗಳನ್ನು ಸಮರ್ಪಿಸಿದರು.

ಏಪ್ರಿಲ್ 08 ರಂದು ಸನ್ಮಾನ್ಯಶ್ರೀ ಯು.ಟಿ. ಖಾದರ್, ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ ಹಾಗೂ ಹೆಚ್ಚುವರಿ ರಾಜ್ಯ ಮುಖ್ಯ ಆಯುಕ್ತರು ಇವರು ಸಭೆಗೆ ಆಗಮಿಸಿ ತಮ್ಮ ಬಾಲ್ಯದ ಸ್ಕೌಟಿಂಗ್ ಅನುಭವಗಳನ್ನು ಹಂಚಿಕೊಂಡು, ಸಂಘಟಕರುಗಳಿಗೆ ಉತ್ತಮವಾಗಿ ಸೇವೆಸಲ್ಲಿಸುವಂತೆ ಶುಭವನ್ನು ಹಾರೈಸಿದರು.





ಶ್ರೀ ಚಿನ್ನಸ್ವಾಮಿರೆಡ್ಡಿ, ರಾಜ್ಯ ಆಯುಕ್ತರು (ಸ್ಕೌಟ್) (ವಯಸ್ಕ ಸಂಪನ್ಮೂಲ) ಇವರು ಮಾತನಾಡಿ ಸಂಘಟಕರುಗಳು ಶಾಲಾ/ಕಾಲೇಜುಗಳಿಗೆ, ಸ್ಥಳೀಯ ಸಂಸ್ಥೆ ಹಾಗೂ ವಿವಿಧ ಕಛೇರಿಗಳಿಗೆ ಭೇಟಿ ನೀಡಿ ಜವಾಬ್ದಾರಿಗಳಿಂದ ಎಲ್ಲಾ ವಿಷಯಗಳಲ್ಲೂ ಕೆಲಸ ನಿರ್ವಹಿಸಿ ಎಲ್ಲಾ ಶಿಬಿರ, ತರಬೇತಿ ಕಾರ್ಯಕ್ರಮಗಳಲ್ಲಿ ಅಚ್ಚುಕಟ್ಟಾಗಿ ನಿರ್ವಹಿಸಿ ಉತ್ತಮ ಫಲಿತಾಂಶ ಬರುವಲ್ಲಿ ಎಲ್ಲರ ಸಹಕಾರವನ್ನು ಕೋರಿದರು.

ಏಪ್ರಿಲ್ 09 ರಂದು ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ರಾಜ್ಯ ಉಪಾಧ್ಯಕ್ಷರು ಮಾತನಾಡಿ ಸಂಘಟಕರುಗಳು ಎ.ಪಿ.ಆರ್.ಓ, ಎಸ್.ಓ.ಟಿ ಹಾಗೂ ಸ್ಕೌಟಿಂಗ್ ಪುಸ್ತಕಗಳನ್ನು ಓದಿ ಹೆಚ್ಚಿನ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು ಹಾಗೂ ಹೆಚ್.ಡಬ್ಲ್ಯೂ.ಬಿ, ಎ.ಎಲ್.ಟಿ ಹಾಗೂ ಎಲ್.ಟಿ. ತರಬೇತಿಯನ್ನು ಪಡೆದು ಇತರರಿಗೆ ಮಾದರಿಯಾಗಬೇಕು. ತಿಂಗಳ ಕಾರ್ಯನಿರ್ವಹಣಾ ವರದಿ, ತಾತ್ಕಾಲಿಕ ಪ್ರವಾಸ ಪಟ್ಟಿ, ಇತ್ಯಾದಿಗಳನ್ನು ಕಾಲ ಕಾಲಕ್ಕೆ ವ್ಯವಸ್ಥಿತವಾಗಿ ರಾಜ್ಯ ಸಂಸ್ಥೆಗೆ ಕಳುಹಿಸುವುದು ಮತ್ತು ಜಿಲ್ಲಾ ಪದಾಧಿಕಾರಿಗಳೊಂದಿಗೆ ಸೌಹಾರ್ದಯುತವಾಗಿ ನಡೆದುಕೊಳ್ಳುವ ಬಗ್ಗೆ ತಿಳಿಸಿದರು.

ಮಧ್ಯಾಹ್ನದ ಅವಧಿಯಲ್ಲಿ ಶ್ರೀಮತಿ ಆರ್. ಸುಗುಣ, ಶ್ರೀ ಎ.ಎಸ್. ಶಿವಕುಮಾರ್ ಹಾಗೂ ಶ್ರೀ ಮೊಹಮ್ಮದ್ ಬಾಷಾ ಇವರು ಮೇ–2025ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಲಿದ್ದು, ಇವರುಗಳ ಸೇವೆಯನ್ನು ಶ್ಲಾಘಿಸಿ ರಾಜ್ಯ ಮುಖ್ಯ ಆಯುಕ್ತರು ಗೌರವಿಸಿ ಅಭಿನಂದಿಸಿದರು.

ನಂತರ 2024–25ನೇ ಸಾಲಿನ ಕಾರ್ಯಚಟುವಟಿಕೆಗಳು ಯಶಸ್ವಿಯಾಗಿ ಮೂಡಿ ಬಂದು ಉತ್ತಮ ಫಲಿತಾಂಶ ಪಡೆದಿರುವುದಕ್ಕಾಗಿ ಹಾಗೂ ಗಣತಿಯ 98% ಗುರಿ ಸಾಧನೆಯನ್ನು ರಾಜ್ಯ ಮುಖ್ಯ ಆಯುಕ್ತರು ಮನಸಾರೆ ಮೆಚ್ಚಿ ಎಲ್ಲಾ ಸಂಘಟಕರುಗಳಿಗೆ, ಅಧಿಕಾರಿಗಳಿಗೆ ಮತ್ತು ವಿವಿಧ ಹಂತದ ಪದಾಧಿಕಾರಿಗಳಿಗೆ ಸನ್ಮಾನಿಸಿ ಅಭಿನಂದಿಸಿ, ಶುಭ ಹಾರೈಸಿದರು. ಸಂಘಟಕರುಗಳು ಸಾಧನೆಯ ಸಂಭ್ರಮವನ್ನು ಅತ್ಯಂತ ಉತ್ಸಾಹ ಹುಮ್ಮಸ್ಸಿನಿಂದ ಹಾಡುಗಳ ಮೂಲಕ ರಾಜ್ಯ ಮುಖ್ಯ ಆಯುಕ್ತರು ಮತ್ತು ರಾಜ್ಯ ಪದಾಧಿಕಾರಿಗಳಿಗೆ ಕೃತಜ್ಞತೆಗಳನ್ನು ಸಮರ್ಪಿಸಿದರು.




## ರಾಷ್ಟ್ರಮಟ್ಟದ ಗೈಡ್ಸ್ ಆಯುಕ್ತರುಗಳ ಸಮಾವೇಶ

ಮಾರ್ಚ್ 27 ರಿಂದ 31ರ ವರೆಗೆ ಸಂಗಮ್ ವರ್ಲ್ಡ್ ಸೆಂಟರ್ ಪುಣೆ, ಮಹಾರಾಷ್ಟ್ರ ಇಲ್ಲಿ ನಡೆದಿರುವ ರಾಷ್ಟ್ರೀಯ ಮಟ್ಟದ ಗೈಡರ್ ಸಮಾವೇಶದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಗೈಡ್ ಆಯುಕ್ತರಾದ ಶ್ರೀಮತಿ ವಿಮಲ ರಂಗಯ್ಯ, ವಯಸ್ಕ ಸಂಪನ್ಮೂಲ ಗೈಡ್ ಆಯುಕ್ತರಾದ ಶ್ರೀಮತಿ ಫೆಲ್ಸಿ ಜೀನಾ ಪೆರ್ನಂಡಿಸ್, ಜಿಲ್ಲಾ ಗೈಡ್ ತರಬೇತಿ ಆಯುಕ್ತರಾದ ಶ್ರೀಮತಿ ಜಯಶ್ರೀ, ಜಿಲ್ಲಾ ಗೈಡ್ ಸ್ಥಾನೀಯ ಆಯುಕ್ತರಾದ ಶ್ರೀಮತಿ ಗೀತಾ ಜೂಡಿಯಟ್ ಸಲ್ದಾನ, ಸುಳ್ಯ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಪ್ರೇಮಲತಾ ಬಿ.ಬಿ.ಎಂ.ಪಿ., ಶ್ರೀಮತಿ ಭುವನೇಶ್ವರಿ, ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ಕುಮುದಾಕ್ಷಿ, ಬಾಗಲಕೋಟೆ ಜಿಲ್ಲೆಯ ಶ್ರೀಮತಿ ಸಪ್ನಾ ಅನಿಗೋಳ್, ಗೈಡ್ ಕ್ಯಾಪ್ಟನ್, ಶ್ರೀಮತಿ ಗೀತಾ ತುರಮರಿ, ಒಟ್ಟು 9 ಗೈಡ್ ಆಯುಕ್ತರು ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಯಶಸ್ವಿಯಾಗಿ ಭಾಗವಹಿಸಿರುತ್ತಾರೆ.



# 2024-25ನೇ ಸಾಲಿನ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ 90% ಕ್ಕಿಂತ ಹೆಚ್ಚು ಅಂಕಗಳಿಸಿದ ರೋವರ್-ರೇಂಜರ್‌ಗಳು



**Pranay Balasaheb Alagouda**
99.5%-597/600 (Commerce)
Alvas Pre University College
Moodubidire, D.K



**Vaishnavi Prasad Bhat**
99.5%-597/600 (Commerce)
Alvas Pre University College
Moodubidire, D.K



**Vismaya Bhat**
99%-595/600 (Commerce)
Alvas Pre University College
Moodubidire, D.K



**Sharel Lavita Rodrigues**
99%-595/600 (Commerce)
Alva's Pre University College
Moodbidri, D.K



**Sannidhi Mangesh Shanbhag**
99%-595/600 (Commerce)
Alva's Pre University College
Moodbidri, D.K



**Vaishnavi Shetty**
99%-594/600 (Commerce)
Alvas Pre University College
Moodubidire, D.K



**Sinchana**
98.8%-593/600 (Commerce)
Vani. P. U. College,
Halekote, Belthangady, D.K.



**Charanraj**
98.6%-592/600 (Commerce)
Christ King PU College
Karkala, Udupi



**Avani Umesha Rao**
98.6%-592/600 (Commerce)
Alva's Pre University College
Moodbidri, D.K



**Nabiha Sayed**
98.6%-592/600 (Commerce)
Alva's Pre University College
Moodbidri, D.K



**Nandish K.A**
98.6%-592/600 (Commerce)
Alvas Pre University College
Moodubidire, D.K



**Krishna Varma**
98.5%-591/600 (Commerce)
Alvas Pre University College
Moodubidire, D.K



**Jatin V. Mundada**
98.5%-591/600 (Commerce)
Alvas Pre University College
Moodubidire, D.K



**Niyathi N Amin**
98.5%-591/600 (Commerce)
Alvas Pre University College
Moodubidire, D.K



**Prakruthi .N**
98.5%-591/600 (Commerce)
Alvas Pre University College
Moodubidire, D.K



**Shravan Khot**
98.5%-591/600 (Commerce)
Alvas Pre University College
Moodubidire, D.K



**Vachan Angadi**
98.5%-591/600 (Commerce)
Alvas Pre University College
Moodubidire, D.K



**Pushpanjali .P**
98%-589/600 (Commerce)
Mahila Sanga PU College
Kolar



**Nakshatra .C**
98%-589/600 (Commerce)
Alva's Pre University College
Moodbidri, D.K



**Shaun Serrao**
98%-589/600 (Commerce)
Alvas Pre University College
Moodubidire, D.K



**J. Basavaraj**
98%-589/600 (Commerce)
Alvas Pre University College
Moodubidire, D.K



**Banavath Mayukha**
98%-589/600 (Arts)
Alvas Pre University College
Moodubidire, D.K



**Aniruddh N. Deshpande**
98%-589/600 (Commerce)
Alvas Pre University College
Moodubidire, D.K



**Sanvi S. Poojary**
98%-589/600 (Commerce)
Excellent Science & Commerce
P.U College, Kallabettu, Moodbidre, D.K



**Poorvi U. Pai**
98%-589/600 (Commerce)
Alvas Pre University College
Moodubidire, D.K



**Ananya**
98%-588/600 (Commerce)
SDM Pre-University College
Ujire, D.K



**Anson John Pinto**
98%-588/600 (Commerce)
Alvas Pre University College
Moodubidire, D.K



**Vrunda Shashank Chandak**
97.8%-587/600 (Commerce)
Alvas Pre University College
Moodubidire, D.K



**Chaitanya B.M**
97.8%-587/600 (Commerce)
Alvas Pre University College
Moodubidire, D.K



**Hruthik Gowda**
97.8%-587/600 (Commerce)
Excellent PU College
Kallabettu, Moodabidri, D.k



**Sanjana Nayak .Y**
97.8%-587/600 (Commerce)
Excellent Science & Commerce
PU College, Kallabettu, Moodabidri, D.K



**Pranav S. Hiremath**
97.8%-587/600 (Commerce)
Excellent PU College
Kallabetu, Moodbidri, D.K



**Aditya Melavanki**
97.5%-585/600 (Arts)
Alvas Pre University College
Moodubidire, D.K



**Nisarg H. Barshi**
97.5%-585/600 (Commerce)
Alvas Pre University College
Moodubidire, D.K



**Satyam**
97%-583/600 (Commerce)
Alvas Pre University College
Moodubidire, D.K



**Nandeesh Anaveri**
97%-583/600 (Commerce)
Alvas Pre University College
Moodubidire, D.K



**Lakshay Patel J.P.**
97%-584/600 (Commerce)
Excellent PU College
Kallabettu, Moodbidri, D.K



**Sanjana V. Kini**
97%-584/600 (Commerce)
Alvas Pre University College
Moodubidire, D.K



**Rithika .R**
97%-584/600 (Commerce)
Alvas Pre University College
Moodubidire, D.K



**Darryl Vinol Moras**
97%-585/600 (Commerce)
Christ King PU College
Karkala, Udupi



**Nishi**
97%-582/600 (Commerce)
Alvas Pre University College
Moodubidire, D.K



**Anvith G. Shetty**
96.8%-581/600 (Commerce)
Alvas Pre University College
Moodubidire, D.K



**Keerthan S. Shetty**
96.6%-580/600 (Commerce)
Alvas Pre University College
Moodubidire, D.K



**Shravya**
96%-579/600 (Commerce)
Christ King PU College
Karkala, Udupi



**Aditya S Patil**
96%-577/600 (Commerce)
Alvas Pre University College
Moodubidire, D.K



**Krithi**
96%-576/600 (Commerce)
Jain Pre University College
Moodbidri, D.K



**Priyadarshini**
96%-578/600 (Commerce)
S.D.M. PU College
Ujire, D.K



**Pavankumar Somashekhar**
96%-577/600 (Commerce)
Alvas Pre University College
Moodubidire, D.K



**Nagaraj Karadi**
96%-579/600 (Commerce)
Alvas Pre University College
Moodubidire, D.K



**Nikhita Prabhu Pattanashetti**
95.5%-573/600 (Commerce)
GPUC, Gadag



**Mohammed Athif**
95.5%-573/600 (Commerce)
Alvas Pre University College
Moodubidire, D.K



**Varsha**
95.3%-572/600 (Commerce)
Pompei P.U. College
Aikala, D.K



**Sakshi R. Pai**
95.3%-572/600 (Commerce)
Alvas Pre University College
Moodubidire, D.K



**Harish S. Malakhed**
95%-571/600 (Science)
Sri Vidyaniketan
PU College, Koppal



**Samarth M. Shetty**
95%-570/600 (Science)
Alvas P.U College
Moodbidri , DK



**Ayush**
93%-555/600 (Commerce)
Christ King PU College
Karkala, Udupi



**Nishmitha Vishwanath Shetty**
92%-553/600 (Commerce)
Christ King PU College
Karkala, Udupi



**Himesh B.G.**
91%-548/600 (Commerce)
Christ King PU College
Karkala, Udupi



**Chris Ronak Dantis**
90%-541/600 (Commerce)
Christ King PU College
Karkala, Udupi



**Suviksha Shetty**
90%-540/600 (Commerce)
Christ King PU College
Karkala, Udupi

# ಅಭಿನಂದನೆಗಳು

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ರಾಜ್ಯ ಕೇಂದ್ರ ಸ್ಥಾನಿಕ ಆಯುಕ್ತರಾದ ಶ್ರೀಮತಿ ಮುಕ್ತಾ ಬಿ. ಕಾಗಲಿ ಅವರು ಸಲ್ಲಿಸಿದ "IMPLEMENTATION OF NATIONAL EDUCATION POLICY: IMPORTANCE OF PERSONALITY DEVELOPMENT" ಎಂಬ ಮಹತ್ವಪೂರ್ಣ ಸಂಶೋಧನಾ ಥೀಸಿಸ್‌ಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ (D.Lit.) ಪದವಿಯನ್ನು ದಿನಾಂಕ 04–04–2025ರಂದು ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್ ಅವರಿಂದ ಸ್ವೀಕರಿಸಿದ್ದಾರೆ. ಈ ಗೌರವವು ಶಿಕ್ಷಣ ಕ್ಷೇತ್ರದಲ್ಲಿ ಅವರ ದೀರ್ಘಕಾಲದ ಸೇವೆ, ವ್ಯಕ್ತಿತ್ವ ವಿಕಾಸದ ಪ್ರಚಾರ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿಯ (NEP 2020) ತತ್ವಗಳನ್ನು ಸಮರ್ಥವಾಗಿ ಅನ್ವಯಿಸಿದ ಅವರ ಪ್ರಯತ್ನಗಳಿಗೆ ಸಲ್ಲುವ ಮಾನ್ಯತೆ ಆಗಿದೆ.



ಡಾ. ಮುಕ್ತಾ ಬಿ. ಕಾಗಲಿ ಅವರ ಈ ಸಾಧನೆಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಹರ್ಷ ವ್ಯಕ್ತಪಡಿಸುತ್ತದೆ. ಅವರ ಸೇವೆ ಮತ್ತು ಸಾಧನೆಗಳು ಸಂಸ್ಥೆಯ ಸದಸ್ಯರಿಗೆ ಪ್ರೇರಣೆಯಾಗಿ, ಸಮಾಜಮುಖಿ ಚಿಂತನೆ ಮತ್ತು ಸೇವಾ ಮನೋಭಾವವನ್ನು ಬೆಳೆಸಲು ಸಹಕಾರಿಯಾಗಲಿ. ಅವರಿಗೆ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.



# ಜಿಲ್ಲಾ ವಾರ್ತೆಗಳು

## ಬಾಗಲಕೋಟೆ

* ಏಪ್ರಿಲ್ 18 ರಂದು ಬಾಗಲಕೋಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನವನಗರದಲ್ಲಿ ಬೇಸಿಗೆ ಶಿಬಿರವನ್ನು ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಎಸ್.ಎಸ್. ದಳವಾಯಿ ಉದ್ಘಾಟಿಸಿ "ವಿದ್ಯಾರ್ಥಿಗಳಲ್ಲಿ ಶಿಸ್ತು ಮೂಡಿಸುವ ಕೆಲಸವನ್ನು ಸ್ಕೌಟ್-ಗೈಡ್ ಮಾಡುತ್ತಿದೆ. ತಾವೆಲ್ಲರೂ ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಳ್ಳಿ" ಎಂದು ಹೇಳಿದರು. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯರಾದ ಡಾ. ಅರುಣಕುಮಾರ್ ಗಾಳಿ ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾದ RSL ಶ್ರೀ ರವಿ ಗಡದನ್ನವರ, ಸಂಘಟಕರಾದ ಕು. ಪ್ರಮೋದ ಚೌಗುಲೆ, ಶ್ರೀ ಪರಸಪ್ಪ ತಳವಾರ, ಶ್ರೀ ಚಂದ್ರಶೇಖರ ಕಾಳನ್ನವರ, RL ಡಾ. ಸುಮಂಗಲಾ ಮೇಟಿ, ಶ್ರೀಮತಿ ಸವಿತಾ ಬಾದಾಮಿ ಮತ್ತು ರೇಂಜರ್-ರೋವರ್ಸ್‌ಗಳು ಉಪಸ್ಥಿತರಿದ್ದರು.



## ಬೆಳಗಾವಿ

* ಏಪ್ರಿಲ್ 05 ರಂದು ಜಿಲ್ಲಾ ಸಂಸ್ಥೆ ಬೆಳಗಾವಿ ವತಿಯಿಂದ ಶ್ರೀ ದೇವೇಂದ್ರ ಜಿನಗೌಡ, ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆಯಲ್ಲಿ ಆಯೋಜಿಸಿದ ಜಿಲ್ಲಾ ಮಟ್ಟದ ಬೇಸಿಗೆ ಶಿಬಿರವನ್ನು ಉಪಾಧ್ಯಕ್ಷರು ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಗಜಾನನ ಮನ್ನಿಕೇರಿ ಉದ್ಘಾಟಿಸಿದರು. ನಂತರ ಅವರು ಮಾತನಾಡಿ "ಮಹಿಳಾ ಶಕ್ತಿ ಬಹಳ ಶ್ರೇಷ್ಠವಾದದ್ದು. ಧನಾತ್ಮಕ ಮನಸ್ಸಿನಿಂದ ಕಾರ್ಯಮಾಡಿದರೆ ಪ್ರತಿಫಲ ಸಿಗುತ್ತದೆ. ಸದರಿ ಶಿಬಿರದಲ್ಲಿ ಪಾಲ್ಗೊಂಡ ನೀವೆಲ್ಲರೂ ಭಾಗ್ಯವಂತರು" ಎಂದು ಹೇಳಿದರು. ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಸಂಘಟನಾ ಶಿಕ್ಷಕರಾದ ಶ್ರೀ ಎನ್.ಜಿ. ಪಾಟೀಲರವರು ಸ್ಕೌಟ್ ಮತ್ತು ಗೈಡ್ ಚಳುವಳಿಯ ಬಗೆಗೆ ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಶಿಬಿರದ ನಾಯಕರಾದ ಶ್ರೀ ಪ್ರಕಾಶ ಪಾಟೀಲ ಭಾಗವಹಿಸಿದ್ದರು. ಶಿಬಿರದಲ್ಲಿ 500ಕ್ಕೂ ಹೆಚ್ಚು ಸ್ಕೌಟ್ ಮತ್ತು ಗೈಡ್‌ಗಳು ಹಾಗೂ 60 ಸ್ಕೌಟರ್ ಮತ್ತು ಗೈಡರ್‌ಗಳು ಭಾಗವಹಿಸಿದ್ದರು.



* ಜಿಲ್ಲಾ ಸಂಸ್ಥೆ ಬೆಳಗಾವಿ ಹಾಗೂ ಶ್ರೀ ರೇಣುಕಾ ಎಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ಎಲ್ಲಮ್ಮನಗುಡ್ಡ ಸವದತ್ತಿ ತಾಲ್ಲೂಕು ಇವರುಗಳ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಮಟ್ಟದ ರೋವರ್ ಮತ್ತು ರೇಂಜರ್‌ಗಳ ಸೇವಾ ಶಿಬಿರವನ್ನು ಮಾರ್ಚ್ 10 ರಿಂದ 13ರ ವರೆಗೆ ಆಯೋಜಿಸಲಾಯಿತು. ಶ್ರೀ ಗಜಾನನ ಮನ್ನಿಕೇರಿ ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ಸಂಸ್ಥೆ, ಬೆಳಗಾವಿ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹುಕ್ಕೇರಿ ಹಾಗೂ ಜಿಲ್ಲಾ ಆಯುಕ್ತರು ಗೈಡ್ ಶ್ರೀಮತಿ ಪ್ರಭಾವತಿ ಪಾಟೀಲ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸವದತ್ತಿ ಹಾಗೂ ಜಿಲ್ಲಾ ಆಯುಕ್ತರು (ಸ್ಕೌಟ್), ಶ್ರೀ ಎಂ.ಎನ್. ದಂಡಿನ ಉಪಸ್ಥಿತರಿದ್ದರು. ಬೆಳಗಾವಿ ಜಿಲ್ಲೆಯ ವಿವಿಧ ಪ್ರಥಮ ದರ್ಜೆ ಕಾಲೇಜುಗಳ ರೋವರ್ಸ್ ಮತ್ತು ರೇಂಜರ್ಸ್‌ಗಳು ಮೊದಲನೇ ದಿನ ಪರಸಗಡ ಕೋಟೆಗೆ ಭೇಟಿ ನೀಡಿ ಆವರಣದಲ್ಲಿ ಪ್ಲಾಸ್ಟಿಕ್ ಕಸ ತೆಗೆಯುವುದರ ಮೂಲಕ ಕೋಟೆ ಸ್ವಚ್ಛಗೊಳಿಸಿದರು. ಎರಡನೇ ದಿನ ಶ್ರೀ ರೇಣುಕಾ ಯಲ್ಲಮ್ಮನ ದೇವಸ್ಥಾನದ ಸುತ್ತಮುತ್ತಲಿನ ಆವರಣವನ್ನು, ವಾಹನ ನಿಲುಗಡೆ ಸ್ಥಳ, ಪರಶುರಾಮ ವಸತಿ ನಿಲಯದ ಒಳ ಆವರಣವನ್ನು, ಯಲ್ಲಮ್ಮಗುಡ್ಡದ ಮುಖ್ಯ ರಸ್ತೆ ಸ್ವಚ್ಛಗೊಳಿಸಿದರು ಸದರಿ ರೋವರ್ ಮತ್ತು ರೇಂಜರ್‌ಗಳು ಸವದತ್ತಿ ಶ್ರೀ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನದ ಹುಂಡಿ ಹಣವನ್ನು ಎಣಿಸುವಲ್ಲಿ ಸೇವೆ ಸಲ್ಲಿಸಿದರು.



ಮಾರ್ಚ್ 13 ರಂದು ನಡೆದ ಶಿಬಿರದ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನದ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳು ಶ್ರೀ ಅಶೋಕ ದುಡುಗುಂಟಿ, ಸವದತ್ತಿ ತಾಲೂಕಿನ ಮಾನ್ಯ ತಹಶೀಲ್ದಾರರಾದ ಶ್ರೀ ಮಲ್ಲಿಕಾರ್ಜುನ ಹೆಗ್ಗನ್ನವರ, ಶ್ರೀ ವೀರೇಶ, ಶ್ರೀಮತಿ ನಾಗರತ್ನ ಚೋಳನ್, ಉಪ ಕಾರ್ಯದರ್ಶಿಗಳು ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ಯಲ್ಲಮ್ಮನ ಗುಡ್ಡ ಇವರುಗಳು ಭಾಗವಹಿಸಿದ್ದರು.



## ಬೆಂಗಳೂರು ಉತ್ತರ

* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ಮಾರ್ಚ್ 25 ರಿಂದ 28ರ ವರೆಗೆ ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ಹರಿಹರ ತಾಲೂಕು, ದಾವಣಗೆರೆ ಜಿಲ್ಲೆ ಇಲ್ಲಿ. "ಬದುಕುಳಿಯುವ ಹಾಗೂ ಚಾರಣ" ಶಿಬಿರವನ್ನು ಅಯೋಜಿಸಲಾಯಿತು. ಶಿಬಿರಾರ್ಥಿಗಳಿಗೆ ಬದುಕುಳಿಯುವ ಕೌಶಲ್ಯಗಳನ್ನು ಕಲಿಸಲಾಯಿತು. ತಮ್ಮದೇ ಆದ ಟೆಂಟ್‌ಗಳನ್ನು ನಿರ್ಮಿಸಿದರು. ಊಟ ಉಪಹಾರವನ್ನು ತಯಾರಿಸಿದರು. ಮತ್ತು ತಮ್ಮ ಕೆಲಸವನ್ನು ತಾವೇ ಮಾಡಿ ಅನೇಕ ಅನುಭವವನ್ನು ಪಡೆದುಕೊಂಡರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ, ಶೇಷಾದ್ರಿ ಇವರು ಎಲ್ಲಾ ರೀತಿಯ ಸಹಕಾರ ನೀಡಿದರು. ಶಿಬಿರದ ರೋವರ್ ನಾಯಕರಾಗಿ ಶ್ರೀ ವಿತೇಶ್ ಕಾಂಚನ್ ಹಾಗೂ ರೇಂಜರ್ ಲೀಡರ್ ಶ್ರೀಮತಿ ಹರಿಣಿ ಇವರು ಸಹಕರಿಸಿದರು. ಕೊಂಡಜ್ಜಿ ಸರೋವರದ ಬಳಿಯಲ್ಲಿ ಶಿಬಿರಾಗ್ನಿ ಮಾಡಲಾಯಿತು.



* ಏಪ್ರಿಲ್ 05 ರಿಂದ 08ರ ವರೆಗೆ ರಾಜ್ಯ ತರಬೇತಿ ಕೇಂದ್ರ ದೊಡ್ಡಬಳ್ಳಾಪುರ ಇಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ 2025–26 ಸಾಲಿನ ತೃತೀಯ ಸೋಪಾನ ಹಾಗೂ ನಿಪುಣ್ ಪರೀಕ್ಷಾ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ಸ್ಕೌಟ್ಸ್ ಶಿಬಿರದ ನಾಯಕರಾಗಿ ಶ್ರೀ ಯೋಗೀಶ್, ಎ.ಎಲ್.ಟಿ, (ಸ್ಕೌ) ಮತ್ತು ಗೈಡ್ಸ್ ವಿಭಾಗದ ನಾಯಕರಾಗಿ ಶ್ರೀಮತಿ ಜ್ಯೋತಿ ರಂಗನಾಥ್ ಕಾರ್ಯನಿರ್ವಹಿಸಿದರು. ನಿಪುಣ್ ಪರೀಕ್ಷಾ ಶಿಬಿರದ ನಾಯಕರಾಗಿ ಶ್ರೀ ವಿತೇಶ್, ಕಾರ್ಯನಿರ್ವಹಿದರು. ಶ್ರೀ ಬಿ.ಕೆ. ಶೇಷಾದ್ರಿ, ಜಿಲ್ಲಾ ಕಾರ್ಯದರ್ಶಿ ಇವರು ಶಿಬಿರವನ್ನು ಸಂಘಟಿಸಿದರು.



* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ "ಸ್ಕೌಟ್ಸ್–ಗೈಡ್ಸ್ ನಡಿಗೆ ಹಳ್ಳಿ ಕಡೆಗೆ" ಎಂಬ ಸಮುದಾಯ ಸೇವಾ ಕಾರ್ಯಕ್ರಮ ದಡಿಯಲ್ಲಿ ಮಾರ್ಚ್ 29 ರಂದು ಗಂಟಿಗಾನಹಳ್ಳಿ ಯಲಹಂಕ ಬೆಂಗಳೂರು ಇಲ್ಲಿ ಸಮುದಾಯ ಸೇವೆ ಮಾಡಲಾಯಿತು. ಗಂಟಿಗಾನಹಳ್ಳಿಯ ನದಿಯ ದಂಡೆಯಲ್ಲಿ ಶೇಖರಣೆಗೊಂಡ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದು ಸ್ವಚ್ಚಗೊಳಿಸಲಾಯಿತು. ಗಂಟಿಗಾನಹಳ್ಳಿಯ ರಸ್ತೆಯಲ್ಲಿರುವ ಸರ್ಕಲ್‌ನ್ನು ಸ್ವಚ್ಛತೆ ಮಾಡಲಾಯಿತು. ಗಿಡಗಳಿಗೆ ನೀರು ಉಣಿಸಲಾಯಿತು ಹಾಗು ಪಿ.ಡಿ.ಒ.ರವರು ತಮ್ಮ



ಸಹಕಾರ ನೀಡಿದರು. ಬೆಂಗಳೂರು ಉತ್ತರಜಿಲ್ಲೆಯ ವಿವಿಧ ವಿವಿಧ ಕಾಲೇಜುಗಳಿಂದ 45 ರೋವರ್ಸ್–ರೇಂಜರ್ಸ್ ಭಾಗವಹಿಸಿದ್ದರು.

## ಬೀದರ್

* ಮಾರ್ಚ್ 22 ರಂದು ಜಿಲ್ಲಾ ಸಂಸ್ಥೆ ಬೀದರ ಹಾಗೂ ಸ್ಥಳೀಯ ಸಂಸ್ಥೆ ಭಾಲ್ಕಿ ಮತ್ತು ಬಿ.ಆರ್.ಎಂ ವಿಶ್ವೇಶ್ವರಯ್ಯ ಶಾಲೆ ಖಾನಾಪೂರ ಇಲ್ಲಿ ಭೂ ದಿನವನ್ನು (Earth Hour) ರಾತ್ರಿ 8.30 ರಿಂದ 9.30 ಗಂಟೆಯವರೆಗೆ ವಿದ್ಯುತ್ ದೀಪಗಳನ್ನು ಆರಿಸಿ ಕ್ಯಾಂಡಲ್ ಮತ್ತು ಎಣ್ಣೆ ದೀಪಗಳನ್ನು ಬಳಸಿ ಪರಿಸರದ ಜಾಗೃತಿಯ ಬಗ್ಗೆ, ಪ್ಲಾಸ್ಟಿಕ್ ನಿಯಂತ್ರಣದ ಬಗ್ಗೆ, ಇ–ವೇಸ್ಟೇಜ್‌ಗಳ ಬಗ್ಗೆ ಮತ್ತು ಇತರೆ ಪುನರ್ ಬಳಕೆಯ ಬಗ್ಗೆ ಮಾಹಿತಿ ನೀಡಿ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಅಂಬಣ್ಣ ನಾಯಕ ಎಸ್.ಜಿ.ವಿ, ಶ್ರೀ ಶಿವಕುಮಾರ ನಾಗೂರೆ ಸ್ಕೌಟ್ ಮಾಸ್ಟರ್, ಶ್ರೀ ಬಾಲಾಜಿ ಕಾಣೆ ಸ್ಕೌಟ್ ಮಾಸ್ಟರ್, ಶ್ರೀಮತಿ ಅಶ್ವಿನಿ ಗೈಡ್ ಕ್ಯಾಪ್ಟನ್, ಶ್ರೀ ಅವಿನಾಶ್ ಮುಖ್ಯ ಗುರುಗಳು ಹಾಗೂ ಪೋಷಕರು ಮತ್ತು ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್‌ಗಳು ಭಾಗವಹಿಸಿದ್ದರು.



* ಏಪ್ರಿಲ್ 03 ರಿಂದ 05ರ ವರೆಗೆ ಜಿಲ್ಲಾ ಸಂಸ್ಥೆ ಬೀದರ ಹಾಗೂ ಸ್ಥಳೀಯ ಸಂಸ್ಥೆ ಭಾಲ್ಕಿ ಮತ್ತು ಬಸವತೀರ್ಥ ವಿದ್ಯಾಪೀಠ ಶಾಲೆ ಬ್ಯಾಲಹಳ್ಳಿ(ಕೆ) ಇವರುಗಳ ಸಂಯುಕ್ತಾಶ್ರಯದಲ್ಲಿ ಸ್ಕೌಟ್ಸ್–ಗೈಡ್ಸ್‌ಗಳಿಗೆ ಶ್ರೀ ರಮೇಶತಿಬಶೆಟ್ಟಿ, ಜಿಲ್ಲಾ ಕಾರ್ಯದರ್ಶಿಗಳು ಹಾಗೂ ಮುಖ್ಯಗುರುಗಳು ಇವರ ಅಧ್ಯಕ್ಷತೆಯಲ್ಲಿ ಬೇಸಿಗೆ ಶಿಬಿರದ ಉದ್ಘಾಟನಾ ಸಮಾರಂಭವನ್ನು ಆಯೋಜನೆ ಮಾಡಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀ ರಾಚಯ್ಯ ನಾಸಿ ಸಹಾಯಕ ಕಾರ್ಯದರ್ಶಿಗಳು ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಶ್ರೀ ಅಂಬಣ್ಣ ನಾಯಕ ಎಸ್.ಜಿ.ವಿ, ಶ್ರೀ ಅರ್ಚನಾ, ಗೈಡ್ ಕ್ಯಾಪ್ಟನ್ ಹಾಗೂ ಸ್ಕೌಟ್ಸ್–ಗೈಡ್ಸ್‌ಗಳು ಭಾಗವಹಿಸಿದ್ದರು.

* ಏಪ್ರಿಲ್ 06ರಂದು ಡಾ. ಎಸ್.ಎಸ್. ಸಿದ್ಧಾರಡ್ಡಿ ಫೌಂಡೇಶನ್, ಬೀದರ ಹಾಗೂ ಜಿಲ್ಲಾ ಸಂಸ್ಥೆ ಬೀದರ ಇವರ ಸಂಯುಕ್ತಾಶ್ರಯದಲ್ಲಿ ಡಾ. ಗುರಮ್ಮ ಸಿದ್ದಾರೆಡ್ಡಿ, ರಾಜ್ಯ ಸಹಾಯಕ ಆಯುಕ್ತರು (ಗೈ)/ ಜಿಲ್ಲಾ ಮುಖ್ಯ ಆಯುಕ್ತರು, ಬೀದರ ಇವರ ಅಧ್ಯಕ್ಷತೆಯಲ್ಲಿ 2023–24ನೇ ಸಾಲಿನ ಲಿಂಗೈಕ್ಯ ಡಾ. ಎಸ್.ಎಸ್ ಸಿದ್ಧಾರಡ್ಡಿಯವರ 9ನೇ ವರ್ಷದ ಸ್ಮರಣಾರ್ಥ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಪುರಸ್ಕಾರ ಪ್ರಶಸ್ತಿ ಪಡೆದ ಮಕ್ಕಳಿಗೆ ಸನ್ಮಾನ ಕಾರ್ಯಕ್ರಮವನ್ನು ಕರ್ನಾಟಕ ಸಾಹಿತ್ಯ ಸಂಘ, ಬೀದರ ಇಲ್ಲಿ ಆಯೋಜನೆ ಮಾಡಲಾಯಿತು. ಶ್ರೀಮತಿ ಬಿ.ಕೆ ಜ್ಯೋತಿ ಬೆಹನಜಿ, ಬ್ರಹ್ಮಕುಮಾರಿ ಕೇಂದ್ರ, ನೌಬಾದ್ ಇವರು ಭಾಗವಹಿಸಿದ್ದರು. ಉದ್ಘಾಟಕರಾಗಿ ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯ, ಮಾಜಿ ಸಚಿವರು ಕರ್ನಾಟಕ ಸರ್ಕಾರ ಹಾಗೂ ರಾಜ್ಯ ಮುಖ್ಯ ಆಯುಕ್ತರು ಆಗಮಿಸಿದ್ದರು. ಶ್ರೀ ರಮೇಶ ತಿಬಶೆಟ್ಟಿ, ಜಿಲ್ಲಾ ಕಾರ್ಯದರ್ಶಿಗಳು ಇವರು ಎಲ್ಲರನ್ನೂ ಸ್ವಾಗತಿಸಿದರು. ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಶ್ರೀ ವಿಕ್ರಮ ಸಿದ್ಧಾರಡ್ಡಿ ಮುಖ್ಯಸ್ಥರು, ಯುನೈಟೆಡ್ ಆಸ್ಪತ್ರೆ, ಕಲಬುರ್ಗಿ



ಇವರು ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸನ್ಮಾನ್ಯ ಶ್ರೀ ಸಲೀಮ್ ಪಾಶಾ, ಉಪನಿರ್ದೇಶಕರು (ಆ) ಶಾಲಾ ಶಿಕ್ಷಣ ಇಲಾಖೆ ಬೀದರ, ಡಾ. ಜಗನ್ನಾಥ ಹೆಬ್ಬಾಳೆ, ಕಲಾನಿಕಾಯದ ಡೀನರು (ನಿ) ಬೀದರ ವಿಶ್ವವಿದ್ಯಾಲಯ, ಬೀದರ, ಶ್ರೀಮತಿ ಲೀಲಾವತಿ ಚಕೋತೆ, ಉಪಾಧ್ಯಕ್ಷರು, ಶ್ರೀಮತಿ ಮಂಗಲಾ ಭಾಗವಾತ್ ಉಪಾಧ್ಯಕ್ಷರು ಇವರು ಆಗಮಿಸಿದ್ದರು. ನಂತರ ಕು. ಭೂಮಿಕಾ, ರೇಂಜರ್ ವಿದ್ಯಾರ್ಥಿನಿಯಿಂದ ಭರತನಾಟ್ಯ ಪ್ರದರ್ಶನ ಮಾಡಲಾಯಿತು.

ಜಿಲ್ಲಾ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವ ಶ್ರೀ ಸೂರ್ಯಕಾಂತ ಕುಲಕರ್ಣಿ, ಜಿಲ್ಲಾ ಖಜಾಂಚಿ, ನಿವೃತ್ತ ಪ್ರಾಂಶುಪಾಲರು, ಶ್ರೀ ಶಿವಕುಮಾರಸ್ವಾಮಿ, ಜಿಲ್ಲಾ ಆಯುಕ್ತರು (ಸ್ಕೌ), ನಿವೃತ್ತ ಶಿಕ್ಷಣಾಧಿಕಾರಿಗಳು. ಮೇಡಲ್ ಆಫ್ ಮೇರಿಟ್ ಪ್ರಶಸ್ತಿ ಪಡೆದ ಶ್ರೀ ಡಾ. ಹೆಚ್.ಬಿ ಭರಶೆಟ್ಟಿ, ಶ್ರೀ ಬಾಬುರಾವ್ ನಿಂಬೂರೆ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌ)/ ಕಾರ್ಯದರ್ಶಿಗಳು, ಹುಮನಾಬಾದ, ಶ್ರೀ ಅನಿಲ್‌ಕುಮಾರ್ ಶಾಸ್ತ್ರಿ, ಕಾರ್ಯದರ್ಶಿಗಳು, ಬಸವಕಲ್ಯಾಣ. ಆಯುಕ್ತರ ಮುಂದುವರೆದ ತರಬೇತಿ ಪಡೆದ ಡಾ. ಸುಜಾತ ಹೊಸಮನಿ. ಆಯುಕ್ತರ ಮೂಲ ತರಬೇತಿ ಪಡೆದ ಶ್ರೀಮತಿ ಮಂಗಲಾ ಭಗವಾತ್, ಉಪಾಧ್ಯಕ್ಷರು, ಶ್ರೀಮತಿ ರಾಣಿ ಸತ್ಯಮೂರ್ತಿ. ಸ್ಕೌಟ್ಸ್ ಮತ್ತು ಗೈಡ್ಸ್ ವಾರ್ಷಿಕ ವಂತಿಗೆ ಅನುದಾನವನ್ನು ನೀಡಿದ ಗ್ರಾಮ ಪಂಚಾಯತ್ ಅಧಿಕಾರಿಗಳು. 2023–24ನೇ ಸಾಲಿನ ರಾಜ್ಯ ಪುರಸ್ಕಾರ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ರೇಂಜರ್ ಮತ್ತು ಮಾರ್ಗದರ್ಶನ ನೀಡಿದ ದಳನಾಯಕರು. ಬಸವ ಬಾಂಧವ್ಯ ಬಳಗ ಬೀದರ, ವೈದ್ಯಕೀಯ ವಿದ್ಯಾರ್ಥಿಗಳು, ರಾಜ ಭವನದಲ್ಲಿ ರಾಜ್ಯ ಪುರಸ್ಕಾರ ಪಡೆದ, ಕು. ಶ್ರೇಯಾ, ಗೈಡ್, ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ ಎಲ್ಲರನ್ನು ಸನ್ಮಾನಿಸಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀಮತಿ ಸಂಧ್ಯಾ ರಾಣಿ ಪಾಟೀಲ್, ಜಿಲ್ಲಾ ಆಯುಕ್ತರು (ಗೈ), ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು, ಪೋಷಕರು, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿದ್ದರು. ಶ್ರೀ ಕಲ್ಯಾಣರಾವ ಚಳಕಾಪೂರೆ ಸಂಚಾಲಕರು ಕಾರ್ಯಕ್ರಮವನ್ನು ನಿರೂಪಿಸಿದರು. ಶ್ರೀ ಅಂಬಣ್ಣ ನಾಯಕ, ಎಸ್.ಜಿ.ವಿ ಎಲ್ಲರಿಗೂ ವಂದಿಸಿದರು.

## ಚಿಕ್ಕಮಗಳೂರು

* "ಶಿಸ್ತು, ಸಮಯ ಪ್ರಜ್ಞೆ, ಹೊರಾಂಗಣ ಚಟುವಟಿಕೆ, ನೈತಿಕ ಕಟ್ಟುಪಾಡು, ಸಾಮಾಜಿಕ ಕಳಕಳಿ ಹೀಗೆ ಹತ್ತು ಹಲವು ಆದರ್ಶಗಳ ಮೂಲಕ ಜವಾಬ್ದಾರಿಯುತ ಯುವಕ–ಯುವತಿಯರನ್ನು ರೂಪಿಸಲು ಶ್ರಮಿಸುತ್ತಿರುವ ಸ್ಕೌಟ್, ಗೈಡ್ ಚಳುವಳಿ ಎಲ್ಲ ಶಾಲೆಗಳಲ್ಲೂ ಕಡ್ಡಾಯವಾಗುವುದು ಸೂಕ್ತ" ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು (ಅಭಿವೃದ್ಧಿ) ಶ್ರೀಮತಿ ಕೆ.ಎಂ. ಸುನಿತಾರವರು ನುಡಿದರು. ಅವರು ಜಿಲ್ಲಾ ಮೈದಾನದಲ್ಲಿರುವ ಜಿಲ್ಲಾ ಭಾರತ್ ಸ್ಕೌಟ್ ಮತ್ತು ಗೈಡ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ರಾಜ್ಯ ಪುರಸ್ಕಾರ ಪ್ರಸಸ್ತಿ ಪತ್ರ ವಿತರಣಾ ಸಮಾರಂಭದ ಉದ್ಘಾಟನೆ ಮಾಡಿ ಮಾತನಾಡುತ್ತಿದ್ದರು. ಕರ್ನಾಟಕ ರಾಜ್ಯ ಸಂಸ್ಥೆ ಉಪಾಧ್ಯಕ್ಷರು ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಶ್ರೀ ಎ.ಎನ್ ಮಹೇಶ್‌ರವರು, ಮಕ್ಕಳು ಪ್ರಶಸ್ತಿ ಪತ್ರ ಸ್ವೀಕರಿಸುವುದನ್ನು ವೀಕ್ಷಿಸಲು ಪೋಷಕರು ಅತೀ ಹೆಚ್ಚು ಸಂಖ್ಯೆಯಲ್ಲಿ ಆಗಮಿಸಿದ್ದನ್ನು ಕಂಡು ಅತ್ಯಂತ ಸಂತಸ ವ್ಯಕ್ತಪಡಿಸುತ್ತಾ, "ಇತ್ತೀಚಿನ ಮಕ್ಕಳು ಅತ್ಯಂತ ಸೂಕ್ಷ್ಮ ಮನಸ್ಥಿತಿಯವರಾಗಿದ್ದು, ಕ್ಷುಲ್ಲಕ ಕಾರಣಗಳಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆ. ಮಕ್ಕಳಿಗೆ ಸೋಲನ್ನು ಸ್ವೀಕರಿಸುವುದನ್ನೂ ಕಲಿಸುವ ಅವಶ್ಯಕತೆಯಿದೆ. ಚೇತೋಹಾರಿ ಹಾಗೂ ದೈಹಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಮೂಲಕ ದೈಹಿಕ ಹಾಗೂ ಮಾನಸಿಕವಾಗಿ ಸದೃಡವಾಗಿ ಸಮಾಜಕ್ಕೆ ಉಪಯೋಗಕಾರಿ ಪ್ರಜೆಗಳಾಗುತ್ತಾರೆ" ಎಂದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಮುಖ್ಯ ಆಯುಕ್ತ ಶ್ರೀ ಎಂ.ಎನ್ ಷಡಕ್ಷರಿ ಮಾತನಾಡಿ, "ಬದುಕಲುಬೇಕಾದ ಕಲೆಗಳನ್ನು ಕಲಿಸುವುದರ ಜೊತೆಗೆ ಸ್ವಲ್ಪಗಟ್ಟಿತನವನ್ನೂ ಕೂಡಾ ಕಲಿಸಲು, ಪೋಷಕರು ಕೂಡಾ ನಮ್ಮ ಕೈ ಜೋಡಿಸಬೇಕು? ವರ್ಜಿನ್ ಏರ್‌ಲೈನ್ಸ್ ಸಂಸ್ಥಾಪಕ ರಿಚರ್ಡ್ ಬ್ರಾನ್ಸ್‌ನ್‌ರ ತಾಯಿ ಹೇಗೆ ಭಾನುವಾರದ ದಿನ ಬಾಲ್ಯದಲ್ಲಿ 10 ಡಾಲರ್ ನೀಡಿಕತ್ತಲಾಗುವ ತನಕ ಮನೆಗೆ ಬರಬೇಡಎಂದು ಹೇಳಿ ಅವನಲ್ಲಿ ಕಷ್ಟ ಸಹಿಷ್ಣುತೆ, ತನ್ನನ್ನು ತಾನು ಹೇಗೆ ನೋಡಿಕೊಳ್ಳುವುದನ್ನು ಕಲಿಸುವ ದೊಡ್ಡ ಜೀವನದ ಪಾಠ ಎಂಬುವುದನ್ನೂ ಉಲ್ಲೇಖಿಸುತ್ತಾ, ಮಕ್ಕಳನ್ನು ಅನುಭವಿಸಿ ಕಲಿಯಲು ಅವಕಾಶ ಕೊಡಿ" ಎಂದು ಪೋಷಕರಿಗೆ ಕಿವಿಮಾತು ಹೇಳಿದರು. ರಾಜ್ಯ ಪುರಸ್ಕಾರ, ಚತುರ್ಥ ಚರಣ್ ಹಾಗೂ ಹೀರಕ್ ಪಂಕ್ ಪುರಸ್ಕಾರ ಪತ್ರಗಳನ್ನು ಮುಖ್ಯಅತಿಥಿ ಶ್ರೀಮತಿ ಕೆ.ಎಂ ಸುನೀತಾ ವಿತರಿಸಿದರು. ಮಕ್ಕಳನ್ನು ಈ ಪ್ರಶಸ್ತಿಗಳಿಗೆ ಸಿದ್ದಗೊಳಿಸಿದ ದಳ ನಾಯಕರುಗಳಿಗೆ "ಮೆಂಟರ್" ಅಭಿನಂದನಾ ಪತ್ರ ನೀಡಲಾಯಿತು. ಜಿಲ್ಲೆಯ ಎಲ್ಲ ತಾಲ್ಲೂಕುಗಳಿಂದ ಆಗಮಿಸಿದ್ದ ಸುಮಾರು 250 ಮಕ್ಕಳು ಮತ್ತು ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಶ್ರೀ ನೀಲಕಂಠಾಚಾರ್ ಸ್ವಾಗತಿಸಿ, ಜಿಲ್ಲಾ ತರಬೇತಿ ಆಯುಕ್ತೆ ಶ್ರೀಮತಿ ಸಂಧ್ಯಾರಾಣಿ ವಂದಿಸಿದರು. ಜಿಲ್ಲಾ ಸ್ಕೌಟ್ ಆಯುಕ್ತ ಶ್ರೀ ಟಿ.ಕೆ. ಫಣಿರಾಜ್, ಗೈಡ್ ಆಯುಕ್ತೆ ಶ್ರೀಮತಿ ಮಮತಾ, ದಳ ನಾಯಕರುಗಳು ಮತ್ತಿತರರು ಹಾಜರಿದ್ದರು.




## ಚಿತ್ರದುರ್ಗ

* 2024–25ನೇ ಸಾಲಿನ ತೃತೀಯ ಚರಣ್ ಕಬ್ಸ್, ಹಿರಕ್ ಪಂಕ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್ ತೃತೀಯ ಸೋಪಾನ ಹಾಗೂ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ನಿಪುಣ್ ಪರೀಕ್ಷಾ ಶಿಬಿರವನ್ನು ಏಪ್ರಿಲ್ 01 ರಿಂದ 03ರ ವರೆಗೆ ಶ್ರೀ ಮುರುಘಾಮಠ ಸ್ಥಳದಲ್ಲಿ ಏರ್ಪಡಿಸಲಾಗಿತ್ತು. ಈ ಶಿಬಿರದಲ್ಲಿ ಕಬ್ ವಿಭಾಗದಲ್ಲಿ 37 ವಿದ್ಯಾರ್ಥಿಗಳು, ಬುಲ್–ಬುಲ್ಸ್ ವಿಭಾಗದಲ್ಲಿ 46 ವಿದ್ಯಾರ್ಥಿಗಳು, ಸ್ಕೌಟ್ಸ್ ವಿಭಾಗದಿಂದ 125 ವಿದ್ಯಾರ್ಥಿಗಳು, ಗೈಡ್ಸ್ ವಿಭಾಗದಿಂದ 169 ವಿದ್ಯಾರ್ಥಿಗಳು, ರೋವರ್ಸ್ ವಿಭಾಗದಿಂದ 34 ವಿದ್ಯಾರ್ಥಿಗಳು, ರೇಂಜರ್ಸ್ ವಿಭಾಗದಿಂದ 18 ವಿದ್ಯಾರ್ಥಿಗಳು ಬಾಗವಹಿಸಿದ್ದರು.

ಶಿಬಿರಾದ ನಾಯಕರಾಗಿ: ಕಬ್ ವಿಭಾಗ – ಶ್ರೀ ಸುಭಾಷ್ ಹೆಚ್ ಡಬ್ಲ್ಯೂ.ಬಿ, ಬುಲ್–ಬುಲ್ ವಿಭಾಗ – ಶ್ರೀಮತಿ ಮಂಗಳ, ಸ್ಕೌಟ್ಸ್ ವಿಭಾಗ – ಶ್ರೀ ಮಹೇಶ ಸಿ.ಎನ್, ಎಲ್.ಟಿ. (ಎಸ್), ಗೈಡ್ಸ್ ವಿಭಾಗ – ಶ್ರೀಮತಿ ಗಿರಿಜಮ್ಮ, ಫ್ರೀ–ಎ.ಎಲ್.ಟಿ., ರೋವರ್ಸ್ ಮತ್ತು ರೇಂಜರ್ಸ್ ವಿಭಾಗ – ಶ್ರೀ ವಿ. ರಾಜೇಶ್ ಅವಲಕ್ಕಿ, ಎಲ್.ಟಿ.(ಆರ್) ಇವರು ಹಾಜರಿದ್ದು, ಶಿಬಿರವನ್ನು ಯಶಸ್ವಿಯಾಗಿ ನೆರವೇರಿಸಿಕೊಟ್ಟರು.

ಏಪ್ರಿಲ್ 02 ರಂದು ಬೆಳಗ್ಗೆ 6 ಗಂಟೆಗೆ (BP SIX) ವ್ಯಾಯಾಮ ಮಾಡಲಾಯಿತು. ನಂತರ ಧ್ವಜಾ ರೋಹಣ ಕಾರ್ಯಕ್ರಮ, ಬೆಳಗ್ಗಿನ ಉಪಾಹರದ ನಂತರ ವಿಭಾಗವಾರು (ತರಗತಿ) ಚಟುವಟಿಕೆಗಳನ್ನು ನಡೆಸಲಾಯಿತು.

ಏಪ್ರಿಲ್ 03ರಂದು ಬೆಳಗ್ಗೆ 06:30ಕ್ಕೆ ಸರ್ವಧರ್ಮ ಪ್ರಾರ್ಥನಾ ಕಾರ್ಯಕ್ರಮ ನಡೆಸಲಾಯಿತು. ನಂತರ ಕಬ್, ತೃತೀಯ ಚರಣ್, ಬುಲ್–ಬುಲ್ಸ್, ಹಿರಕ್ ಪಂಕ್, ಸ್ಕೌಟ್ಸ್ ಮತ್ತು ಗೈಡ್ಸ್, ತೃತೀಯಾ ಸೋಪಾನ, ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ನಿಪುಣ್ ಪರೀಕ್ಷೆಯನ್ನು ನಡೆಸಲಾಯಿತು.

ಏಪ್ರಿಲ್ 03 ರಂದು ಮುಕ್ತಾಯ ಸಮಾರಂಭಕ್ಕೆ ಜಿಲ್ಲೆಯ ಪದಾಧಿಕಾರಿಗಳಾದ ಶ್ರೀ ಜಿ.ಎಸ್. ಉಜ್ಜಿನಪ್ಪ, ಜಿಲ್ಲಾ ಉಪಾಧ್ಯಕ್ಷರು ಶ್ರೀ ಶೀಲಾ ಮಂಜುನಾಥ, ಜಿಲ್ಲಾ ಉಪಾಧ್ಯಕ್ಷರು, ಶ್ರೀಮತಿ ಸವಿತಾ ಶಿವಕುಮಾರ್, ಗೈಡ್ಸ್ ಆಯುಕ್ತರು, ಶ್ರೀ ಬಿ.ಎ. ಲಿಂಗಾರೆಡ್ಡಿ, ಜಿಲ್ಲಾ ಕಾರ್ಯದರ್ಶಿ, ಶ್ರೀ ಅನಂತರೆಡ್ಡಿ, ಸ್ಥಾನಿಕ ಆಯುಕ್ತರು, ಡಾ॥ ರಹಮತುಲ್ಲಾ, ಸಹ ಕಾರ್ಯದರ್ಶಿಗಳು, ರೆಡ್‌ಕ್ರಾಸ್‌ನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಶಿಬಿರಾದ ನಾಯಕಗಳು ಹಾಜರಿದ್ದರು.



* ಮಾರ್ಚ್ 18 ರಂದು ಜಿಲ್ಲಾ ಸಂಸ್ಥೆಗೆ ಕಾನೂನು ತರಬೇತಿ (INTERNSHIP) ವಿಷಯವಾಗಿ ಎಸ್.ಜೆ.ಎಂ ಕಾನೂನು ಮಹಾವಿದ್ಯಾಯದ 5 ವರ್ಷಗಳ ಬಿ.ಎ.ಎಲ್ ಎಲ್.ಬಿಯು 2 ಮತ್ತು 4 ನೇ ಸೆಮಿಸ್ಟರ್  ವಿದ್ಯಾರ್ಥಿಗಳು ಬೇಟಿ ನೀಡಿದರು. ಈ ಸಂದರ್ಭದಲ್ಲಿ ಶ್ರೀಮತಿ ಸವಿತಾ ಶಿವಕುಮಾರ್ ಜಿಲ್ಲಾ ಕಮಿಷನರ್, ಜಿಲ್ಲಾ ಸಂಘಟಿಕರಾದ ಶ್ರೀ ಮಲ್ಲೇಶಪ್ಪ ಕೆ.ಟಿ. ಹಾಗೂ ಡಾ॥ ರಹಮತುಲ್ಲಾ, ಜಿಲ್ಲಾ ಸ್ಥಾನಿಕ ಆಯುಕ್ತರು, ಚಿತ್ರದುರ್ಗ ಜಿಲ್ಲಾ ಇವರು ಉಪಸ್ಥಿತರಿದ್ದರು.

* ಮಾರ್ಚ್ 28 ರಂದು ಜಿಲ್ಲಾ ಸಂಸ್ಥೆಯಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಸಾಕ್ಷರತ ಪ್ರಮಾಣ ಪತ್ರ ಸಾಕ್ಷರತಾ ಬ್ಯಾಡ್ಜ್ ವಿತರಣಾ ಸಮಾರಂಭವನ್ನು ಆಯೋಜಿಸಲಾಗಿತು. ಶ್ರೀಮತಿ ಸವಿತಾ ಶಿವಕುಮಾರ್ ಜಿಲ್ಲಾ ಆಯುಕ್ತರು (ಗೈಡ್) ಜಿಲ್ಲಾ ಸ್ಥಾನಿಕ ಆಯುಕ್ತರು ಡಾ॥ ರಹಮತುಲ್ಲಾ, ಪರೀಕ್ಷಾಧಿಕಾರಿಗಳು ಡಾ. ಗಂಗಾಧರ್, ಜಿಲ್ಲಾ ಸಂಘಟಿಕರು ಶ್ರೀ ಮಲ್ಲೇಶಪ್ಪ ಕೆ.ಟಿ.ರವರು ಉಪಸ್ಥಿತರಿದ್ದರು. ಜಿಲ್ಲಾ ಸಂಘಟಿಕರು ಮಲ್ಲೇಶಪ್ಪ ಕೆ.ಟಿ. ರವರು ಸ್ವಾಗತವನ್ನು ಕೋರಿದರು. ನೀರೂಪಣೆಯನ್ನು ಶ್ರೀ ಎಲ್. ಚಿದಾನಂದರವರು ನಿರ್ವಹಿಸಿದರು. ಶ್ರೀಮತಿ ಸವಿತಾ ಶಿವಕುಮಾರ್, ಜಿಲ್ಲಾ ಆಯುಕ್ತರು (ಗೈಡ್) ಪ್ರಮಾಣ ಪತ್ರ ಸಾಕ್ಷರತಾ ಬ್ಯಾಡ್ಜ್‌ಗಳನ್ನು ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ವಿತರಿಸಿದರು.



* ಏಪ್ರಿಲ್ 14ರಂದು ಜಿಲ್ಲಾ ಸಂಸ್ಥೆಯ ಕಾರ್ಯಾಲಯದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ರವರ 134ನೇ ಜಯಂತಿಯನ್ನು ಆಚರಿಸಲಾಯಿತು ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಜಿ.ಎಸ್. ಉಜ್ಜಿನಪ್ಪನವರು ವಹಿಸಿಕೊಂಡು ಡಾಕ್ಟರ್ ಬಿ.ಆರ್. ಅಂಬೇಡ್ಕರ್‌ರವರ ಸಮಾನತೆಯ ಬೆಳಕು ಶೋಷಿತರ ಧ್ವನಿ ಚಿಂತನಾ ಲಹರಿ, ವಿಚಾರಧಾರೆ ಸಾಮಾಜಿಕ ಹೋರಾಟಗಳ ಹೂರಣವನ್ನು ಪ್ರತಿಯೊಬ್ಬರ ಮನೆ ಮನಗಳಲ್ಲಿ ತಲುಪಿಸುವ ನಿಟ್ಟಿನಲ್ಲಿ ವಿನೂತನ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ರಾಜ್ಯ ಸಂಸ್ಥೆಯ ಅಜೀವ ಸದಸ್ಯರಾದ ಶ್ರೀ ಬಸವರಾಜು, ಜಿಲ್ಲಾ ಸಂಸ್ಥೆಯ ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಎಸ್. ಪರಮೇಶ್ವರ್, ಜಿಲ್ಲಾ ಆಯುಕ್ತರು (ಗೈಡ್) ಶ್ರೀಮತಿ ಎಲ್. ಸವಿತಾ ಶಿವಕುಮಾರ್, ಜಿಲ್ಲಾ ಕೇಂದ್ರ ಸ್ಥಾನಿಕ ಆಯುಕ್ತರು ಶ್ರೀಮತಿ ಗುಲ್ ಶನ್ .ಆರ್, ಜಿಲ್ಲಾ ಜಂಟಿ ಕಾರ್ಯದರ್ಶಿಗಳು ಡಾ. ರಹಮತ್ತುಲ್ಲಾ, ಜಿಲ್ಲಾ ಜಿಲ್ಲಾ ಖಜಾಂಚಿಗಳಾದ ಶ್ರೀ ಅನ್ವರ್ ಪಾಷ, ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಘಟಿಕರಾದ ಶ್ರೀ ಮಲ್ಲೇಶಪ್ಪ ಕೆ.ಟಿ.ರವರು ಸರ್ವರಿಗೂ ಸ್ವಾಗತವನ್ನು ಕೋರಿದರು. ಕೊನೆಯದಾಗಿ ವಂದನಾರ್ಪಣೆ ಕಾರ್ಯಕ್ರಮವನ್ನು ಯುವ ಸಮಿತಿಯ ಕಾರ್ಯದರ್ಶಿಯಾದ ಕು॥ ಚಿದಾನಂದ ಎಲ್. ನಡೆಸಿಕೊಟ್ಟರು.

* ಏಪ್ರಿಲ್ 17 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸದುರ್ಗ ಇಲ್ಲಿ ಸ್ವಾಮಿ ವಿವೇಕಾನಂದ ರೋವರ್ಸ್ ಕ್ರೂವ್ ಮತ್ತು ಸಿಸ್ಟರ್ ನೀವೇದಿತಾ ರೇಂಜರ್ಸ್ ಟೀಂ, ಘಟಕಗಳ ಉದ್ಘಾಟನೆ ಹಾಗೂ ರೋವರ್ಸ್ ರೇಂಜರ್ಸ್‌ಗಳಿಗೆ ಒಂದು ದಿನದ ಮಾಹಿತಿ ಶಿಬಿರವನ್ನು ವಿಶ್ವ ಮಾನವ ಸಭಾಂಗಣ ಹೊಸದುರ್ಗ ಇಲ್ಲಿ ಸಂಘಟಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಕಾಲೇಜಿನ ಪ್ರಾಶುಂಪಾಲರಾದ ಡಾ॥ ಅಶ್ವತ್ ಯಾದವ್ ಜಿ.ಎಸ್ ರವರು ನೆರೆವೆರಿಸಿ ಕಾಲೇಜಿನಲ್ಲಿ ರೋವರ್ಸ್ ರೇಂಜರ್ಸ್‌ಗಳಿಂದ ಆಗುವ ಚಟುವಟಿಕೆಗಳು ಮತ್ತು ಶಿಬಿರಗಳು ಸದಾ ಕಾಲ ನಡೆಯಬೇಕು ಮತ್ತು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಮಕ್ಕಳು ಭಾಗವಹಿಸಿ ಇದರ ಉಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು. ನಂತರ ಜಿಲ್ಲಾ ಸಂಘಟಿಕರಾದ ಶ್ರೀ ಮಲ್ಲೇಶಪ್ಪ




ಕೆ.ಟಿ. ಹಾಗೂ ಶ್ರೀ ರವಿ ಸಿ., ಜಿಲ್ಲಾ ಸಂಘಟನಾ ಶಿಕ್ಷಕರು. ಅನೇಕ ವಿಷಯಗಳ ಬಗ್ಗೆ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಕಾಲೇಜಿನ ಉಪಾನ್ಯಾಸಕರಾದ ಶ್ರೀ ಸತೀಶ್ ಎಂ.ವಿ., ಕೋ–ಆಡಿನೇಟರ್ ಉಪಸ್ಥಿತರಿದ್ದರು, ಕಾಲೇಜಿನ ಆರ್.ಎಸ್.ಎಲ್. ಲೀಡರಾದ ಶ್ರೀ ಮಂಜುನಾಥ್ ಎಸ್. ಸರ್ವರಿಗೂ ಸ್ವಾಗತವನ್ನು ಕೋರಿದರು, ರೇಂಜರ್ಸ್ ಲೀಡರ್‌ರಾದ ಶ್ರೀಮತಿ ಗೀತಾ ಎನ್. ಇವರು ಸರ್ವರಿಗೂ ವಂದನೆಯನ್ನು ತಿಳಿಸಿದರು.

* ಮಾರ್ಚ್ 21 ರಿಂದ 23ರ ವರೆಗೆ ಡಿ.ವಿ.ಎಸ್ ಶಾಲಾ ಆವರಣದಲ್ಲಿ ಸ್ಕೌಟ್ಸ್–ಗೈಡ್ಸ್‌ಗಳಿಗೆ ವಿಶೇಷ ಬೇಸಿಗೆ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.



## ದಕ್ಷಿಣ ಕನ್ನಡ

* ಫೆಬ್ರವರಿ 17 ರಂದು ನಿತ್ಯಾಧರ್ ಆಂಗ್ಲ ಮಾಧ್ಯಮ ಶಾಲೆ, ಪೆರ್ಮನ್ನೂರು ಇಲ್ಲಿ ಚತುರ್ಥ ಚರಣ, ಹೀರಖ್‌ಗರಿ, ರಾಜ್ಯ ಪುರಸ್ಕಾರ ಸ್ಕೌಟ್ಸ್–ಗೈಡ್ಸ್‌ಗಳಿಗೆ ಅಭಿನಂದನಾ ಕಾರ್ಯಕ್ರಮ ನಡೆಯಿತು. ಶಾಲಾ ಸಂಚಾಲಕರಾದ ಶ್ರೀ ಅಂತೋನಿ ಲಸ್ರಾದೊ ದೀಪವನ್ನು ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ಲಯನ್ ಶ್ರೀ ಪ್ರಶಾಂತ್ ಡಿಸೋಜರವರು ಉಪಸ್ಥಿತರಿದ್ದರು. ಜಿಲ್ಲಾ ವಯಸ್ಕ ಸಂಪನ್ಮೂಲ ಆಯುಕ್ತರಾದ ಶ್ರೀ ಎಂ.ಜಿ. ಕಜೆ ಅವರನ್ನು ಈ ಕಾರ್ಯಕ್ರಮದಲ್ಲಿ ಗುರುತಿಸಿ ಸನ್ಮಾನಿಸಲಾಯಿತು. ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ. ತುಂಬೆ, ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್, ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಭಗಿನಿ ಪ್ರಮೀಳಾ ರೋಡ್ರಿಗಸ್ ಮುಂತಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಲೇಡಿ ಸ್ಕೌಟ್ ಮಾಸ್ಟರ್ ಶ್ರೀಮತಿ ರೀನಾ ವಿಲ್ಮ ಡಿಸೋಜರವರು ಸ್ವಾಗತಿಸಿದರು. ಕಬ್ ಮಾಸ್ಟರ್ ಶ್ರೀಮತಿ ಪ್ರೀತಡಿಸೋಜ ವಂದನಾರ್ಪಣೆ ಮಾಡಿದರು. ಗೈಡ್ ಕ್ಯಾಪ್ಟನ್ ಶ್ರೀಮತಿ ನಯನಾ ಕಾರ್ಯಕ್ರಮವನ್ನು ನಿರೂಪಿಸಿದರು.



* ಏಪ್ರಿಲ್ 02 ರಂದು ಶ್ರೀ ವೆಂಕಟರಮಣ ಸ್ವಾಮಿ ಆಂಗ್ಲ ಮಾಧ್ಯಮ ಶಾಲೆ. ವಿದ್ಯಾಗಿರಿಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ತೃತೀಯ ಚರಣ ಕಬ್ ಮತ್ತು ಸುವರ್ಣಗರಿ ಬುಲ್‌ಬುಲ್ ವಿಭಾಗದ ಪರೀಕ್ಷಾ ಶಿಬಿರವು ನಡೆಯಿತು. ಜಿಲ್ಲಾ ಸ್ಕೌಟ್ ಆಯುಕ್ತರು ಶ್ರೀ ಬಿ.ಎಂ ತುಂಬೆರವರು ಸಮಾರಂಭವನ್ನು ಉದ್ಘಾಟಿಸಿ ಶಿಭಿರಾರ್ಥಿಗಳನ್ನು ಉದ್ದೇಶಿಸಿ ಶುಭ ಹಾರೈಸಿದರು. ಕಬ್ ವಿಭಾಗದ ನಾಯಕರಾದ ಶ್ರೀ ಎಮ್. ರಾಮ್‌ರಾವ್ ಹಾಗೂ ಬುಲ್‌ಬುಲ್ ವಿಭಾಗದ ನಾಯಕಿ ಶ್ರೀಮತಿ ಸೇವಂತಿ, ಪ್ರಿ–ಎಎಲ್‌ಟಿ (ಫ್ಲಾಕ್) ಹಾಗೂ ಎಸ್.ವಿ.ಎಸ್. ಆಂಗ್ಲ ಮಾಧ್ಯಮ ಶಾಲೆ, ವಿದ್ಯಾಗಿರಿಯ ಮುಖ್ಯೋಪಾಧ್ಯಾಯರಾದ ಶ್ರೀ ಹರಿಪ್ರಸಾದ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಬ್ ಮಾಸ್ಟರ್ ಶ್ರೀಮತಿ ಗೌತಮಿ ಕೆ. ಕಾರ್ಯಕ್ರಮ ನಿರೂಪಿಸಿದರು. ಫ್ಲಾಕ್ ಲೀಡರ್ ಶ್ರೀಮತಿ ಚಿತ್ರಾ ಕೆ. ಸ್ವಾಗತಿಸಿದರು ಮತ್ತು ಗೈಡ್ ಕ್ಯಾಪ್ಟನ್ ಶ್ರೀಮತಿ ಪದ್ಮಾವತಿ ವಂದನಾರ್ಪಣೆ ಮಾಡಿದರು.



* ಮಾರ್ಚ್ 25 ರಂದು ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ವತಿಯಿಂದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಾಲೆ, ಅಶೋಕನಗರ ಇಲ್ಲಿ ಕಬ್–ಬುಲ್‌ಬುಲ್‌ಗಳಿಗೆ ತೃತೀಯ ಚರಣ ಮತ್ತು ಸುವರ್ಣಗರಿ ಪರೀಕ್ಷೆಯು ನಡೆಯಿತು. ಪರೀಕ್ಷಕರಾಗಿ ಶ್ರೀಮತಿ ವೀಣಾ ಮತ್ತು ಪೂರ್ಣಿಮ ಪರೀಕ್ಷೆಯನ್ನು ನಡೆಸಿಕೊಟ್ಟರು.



* ಏಪ್ರಿಲ್ 05 ರಂದು ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ವತಿಯಿಂದ ತೃತೀಯ ಚರಣ ಕಬ್ ಮತ್ತು ಸುವರ್ಣಗರಿ ಬುಲ್‌ಬುಲ್ ಪರೀಕ್ಷೆಯನ್ನು ಸಾಂದೀಪನಿ ವಿದ್ಯಾಸಂಸ್ಥೆ, ನರಿಮೊಗರು, ಪುತ್ತೂರು ಇಲ್ಲಿ ನಡೆಸಲಾಯಿತು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಜಿಲ್ಲಾ ಗೈಡ್ ಉಪ ಆಯುಕ್ತರಾದ ಶ್ರೀಮತಿ ಜಯಮಾಲಾ ವಿ.ಎನ್. ಮತ್ತು ಗೈಡ್ ಶಿಕ್ಷಕಿಯಾದ ಶ್ರೀಮತಿ ಮೆಬಲ್, ಸಾಂದೀಪನಿ ಸ್ಕೌಟ್ ಶಿಕ್ಷಕ ಶ್ರೀ ಮುರಳಿ ಕೃಷ್ಣ ಹಾಗೂ ಫ್ಲಾಕ್ ಲೀಡರ್ ಶ್ರೀಮತಿ ಅನಿತಾರವರು ಉಪಸ್ಥಿತರಿದ್ದರು. ಶ್ರೀಮತಿ ಅನಿತಾರವರು ಸ್ವಾಗತಿಸಿದರು. ಶ್ರೀಮತಿ ಭಾರತಿ ಮತ್ತು ಚೇತನಾ ಜಿಲ್ಲಾ ಸಂಸ್ಥೆಯಿಂದ ಪರೀಕ್ಷಕರಾಗಿ ಭಾಗವಹಿಸಿದ್ದರು. ಶ್ರೀ ಮುರಳಿಕೃಷ್ಣರವರು ವಂದನಾರ್ಪಣೆ ಮಾಡಿದರು.



* ಏಪ್ರಿಲ್ 07 ರಂದು ಇಂದ್ರಪ್ರಸ್ಥ ವಿದ್ಯಾಲಯ, ಉಪ್ಪಿನಂಗಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ವತಿಯಿಂದ ಸುವರ್ಣಗರಿ ಬುಲ್‌ಬುಲ್ ಹಾಗೂ ತೃತೀಯ ಚರಣಕಬ್ ಪರೀಕ್ಷಾ ಶಿಬಿರವನ್ನು ನಡೆಸಲಾಯಿತು. ಸಭಾ ಕಾರ್ಯಕ್ರಮದಲ್ಲಿ ಇಂದ್ರಪ್ರಸ್ಥ ವಿದ್ಯಾಲಯದ ಮುಖ್ಯ ಶಿಕ್ಷಕಿ ಶ್ರೀಮತಿ ವೀಣಾ ಆರ್. ಪ್ರಸಾದ್, ಮೇಲ್ವಿಚಾರಕರಾಗಿ ಶ್ರೀಮತಿ ಮೋಹಿನಿ ರಾಮಚಂದ್ರ, ಪ್ರಿ–ಎ.ಎಲ್.ಟಿ, ಸೀನಿಯರ್ ಲೇಡಿಕಬ್ ಮಾಸ್ಟರ್ ಹಿಲ್ಡಾ ತಾವ್ರೋ, ಹೆಚ್.ಡಬ್ಲ್ಯೂ.ಬಿ., ಸೀನಿಯರ್ ಫ್ಲಾಕ್ ಲೀಡರ್ ಸಿಸ್ಟರ್ ಲೊರಿನಾ, ಎಲ್.ಟಿ. ಉಪಸ್ಥಿತರಿದ್ದರು. ಪರೀಕ್ಷಾ ಶಿಬಿರದಲ್ಲಿ 36 ಬುಲ್‌ಬುಲ್, 21 ಕಬ್ಸ್ ಹಾಗೂ ವಿವಿಧ ಶಾಲೆಗಳಿಂದ 14 ಕಬ್ ಹಾಗೂ ಫ್ಲಾಕ್ ಲೀಡರ್ಸ್ ಭಾಗವಹಿಸಿದ್ದರು.



* ಏಪ್ರಿಲ್ 08 ರಂದು ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳದಲ್ಲಿ ಚತುರ್ಥ ಚರಣ ಕಬ್, ಹೀರಖ್‌ಗರಿ ಬುಲ್‌ಬುಲ್, ರಾಜ್ಯ ಪುರಸ್ಕಾರ ಸ್ಕೌಟ್ಸ್–ಗೈಡ್ಸ್, ರೋವರ್–ರೇಂಜರ್ಸ್ ಹಾಗೂ ಗೋಲ್ಡನ್ ಆರೋ ಕಬ್–ಬುಲ್‌ಬುಲ್ ಪ್ರಮಾಣ ಪತ್ರ ಪ್ರಶಸ್ತಿ ಪ್ರಧಾನ ಸಮಾರಂಭವು ನಡೆಯಿತು. ಈ ಕಾರ್ಯಕ್ರದಲ್ಲಿ ಅಧ್ಯಕ್ಷತೆಯನ್ನು ವಹಿಸಿದಂತಹ ಶ್ರೀ ಕೆ.ವಿ. ರಾವ್‌ರವರು ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ನೀಡಿದರು. ಈ ಸಂಧರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರುಗಳಾದ ಶ್ರೀ ವಸಂತ್‌ರಾವ್, ಶ್ರೀ ಶ್ರೀನಿವಾಸ್ ಪೂಜಾರಿ, ಕಾರ್ಯದರ್ಶಿಯಾದ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್. ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಜಯಶ್ರೀ, ಎಲ್.ಟಿ.(ಗೈ) ಇವರು ನಡೆಸಿಕೊಟ್ಟರು.

* ಏಪ್ರಿಲ್ 05 ರಂದು ಬೆಳ್ತಂಗಡಿ ಸ್ಥಳೀಯ ಕಬ್–ಬುಲ್‌ಬುಲ್ ಉತ್ಸವ, ಸ್ಕೌಟ್–ಗೈಡ್ ಮೇಳ, ರೋವರ್ಸ್–ರೇಂಜರ್ಸ್ ಸಮಾಗಮವು ಬೆಳ್ತಂಗಡಿ ಶ್ರೀ ಮಂಜುನಾಥೇಶ್ವರ ಆಂಗ್ಲ, ಮಾಧ್ಯಮ ಶಾಲೆಯಲ್ಲಿ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ನೆರವೇರಿಸಿದರು. ಬೆಳ್ತಂಗಡಿ ಶಾಸಕರಾದ ಶ್ರೀ ಹರೀಶ್ ಪೂಂಜ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸದ್ದರು. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ತು ಸದಸ್ಯ ಕೆ. ಪ್ರತಾಪ್ ಸಿಂಹ ನಾಯಕ್, ಬೆಳ್ತಂಗಡಿ ಶ್ರೀ ಧರ್ಮಸ್ಥಳ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕರು ಶ್ರೀಮತಿ ಹೇಮಲತಾ ಎಂ.ಆರ್., ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ. ತುಂಬೆ, ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ವಿಮಲಾ ರಂಗಯ್ಯ, ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್., ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್ ರಾಜ್ ಕೆ., ರೋವರ್ ಸ್ಕೌಟ್ ಲೀಡರ್ ಡಾ. ರವಿ. ಬೆಳ್ತಂಗಡಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಪ್ರಮೀಳಾ, ಕೋಶಾಧಿಕಾರಿ ಶ್ರೀ ಬೆಳ್ಳಿಯಪ್ಪ ಕೆ. ಹಾಗೂ ಸ್ಥಳೀಯ ಸಂಸ್ಥೆಯ ಸದಸ್ಯರುಗಳು ಉಪಸ್ಥಿತರಿದ್ದರು. ಬೆಳ್ತಂಗಡಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಶ್ರೀ ಎಚ್. ಪದ್ಮಕುಮಾರ್ ಪ್ರಾಸ್ತಾವಿಕ ಮಾತನಾಡಿ ಸ್ವಾಗತಿಸಿದರು. ರೋವರ್ ಸ್ಕೌಟ್ ಲೀಡರ್ ಶ್ರೀ ಲಕ್ಷ್ಮೀಶ, ಕಾರ್ಯಕ್ರಮ ನಿರೂಪಿಸಿದರು.



* ಏಪ್ರಿಲ್ 07 ರಿಂದ 09ರ ವರೆಗೆ ಜಿಲ್ಲಾ ಸಂಸ್ಥೆಯ ತೃತೀಯ ಸೋಪಾನ ಸ್ಕೌಟ್-ಗೈಡ್ ಪರೀಕ್ಷಾ ಶಿಬಿರವು ಜಿಲ್ಲಾ ತರಬೇತಿ ಕೇಂದ್ರ, ಪಿಲಿಕುಳದಲ್ಲಿ ನಡೆಯಿತು. ಸ್ಕೌಟ್ ವಿಭಾಗದ ನಾಯಕರುಗಳಾಗಿ ಶ್ರೀ ವೆಂಕಟರಾವ್, ಶ್ರೀ ವಿನ್ಸೆಂಟ್, ಶ್ರೀಲಕ್ಷ್ಮಿ ಭಾಗವಹಿಸಿದ್ದರು. ಜಿಲ್ಲೆಯ 16 ಸ್ಕೌಟ್ ಮಾಸ್ಟರ್‌ಗಳು ಹಾಗೂ ಲೇಡಿ ಸ್ಕೌಟ್ ಮಾಸ್ಟರ್‌ಗಳ ಸಹಕಾರದಿಂದ 408 ಗೈಡ್ಸ್‌ಗಳು ಹಾಗೂ 247 ಸ್ಕೌಟ್ಸ್‌ಗಳು ಹಾಜರಾಗಿದ್ದರು. ಶ್ರೀಮತಿ ಸ್ವರ್ಣಲತಾ, ಶ್ರೀಮತಿ ಪ್ರಫುಲ್ಲಾ, ಶ್ರೀಮತಿ ನಯನ, ಶ್ರೀಮತಿ ಹರಿಣಾಕ್ಷಿ, ಶ್ರೀಮತಿ ಅನುರಾಧ ರವರ ನಾಯಕತ್ವದಲ್ಲಿ 30 ಗೈಡರ್‌ಗಳ ಸಹಕಾರದಿಂದ ಗೈಡ್ ತರಬೇತಿ ಆಯುಕ್ತರಾದ ಶ್ರೀಮತಿ ಜಯಶ್ರೀ, ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್ ರವರ ಮಾರ್ಗದರ್ಶನದಲ್ಲಿ ಪರೀಕ್ಷೆಯು ನಡೆಯಿತು. ಈ ಸಂದರ್ಭದಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಮ್ ತುಂಬೆ, ಜಿಲ್ಲಾ ಗೈಡ್ ಸಂಘಟನಾ ಆಯುಕ್ತರಾದ ಶ್ರೀಮತಿ ಸುನೀತಾ, ಜಿಲ್ಲಾ ಕೋಶಾಧಿಕಾರಿ ಶ್ರೀ ನವೀನ್ ಚಂದ್ರ ಬೇಟಿ ನೀಡಿದರು.



* ಏಪ್ರಿಲ್ 08 ರಂದು ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳದಲ್ಲಿ ಚತುರ್ಥ ಚರಣ ಕಬ್, ಹೀರಖ್ ಗರಿ ಬುಲ್‌ಬುಲ್, ರಾಜ್ಯ ಪುರಸ್ಕಾರ ಸ್ಕೌಟ್ಸ್-ಗೈಡ್ಸ್, ರೋವರ್-ರೇಂಜರ್ಸ್ ಹಾಗೂ ಗೊಲ್ಡನ್ ಆರೋ ಕಬ್-ಬುಲ್‌ಬುಲ್ ಪ್ರಮಾಣ ಪತ್ರ ಪ್ರಶಸ್ತಿ ಪ್ರಧಾನ ಸಮಾರಂಭವು ನಡೆಯಿತು. ಈ ಕಾರ್ಯಕ್ರದಲ್ಲಿ ಅಧ್ಯಕ್ಷತೆಯನ್ನು ವಹಿಸಿದಂತಹ ಶ್ರೀ ಕೆ.ವಿ ರಾವ್‌ರವರು ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ನೀಡಿದರು. ಈ ಸಂಧರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರುಗಳಾದ ಶ್ರೀ ವಸಂತ್ ರಾವ್, ಶ್ರೀ ಶ್ರೀನಿವಾಸ್ ಪೂಜಾರಿ ಉಪಸ್ಥಿತರಿದ್ದರು. ಶ್ರೀ ವೆಂಕಟ್ ರಾವ್‌ರವರು ಪ್ರಮಾಣ ಪತ್ರ ವಿತರಣಾ ಪಟ್ಟಿಯನ್ನು ಓದಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಜಯಶ್ರೀ, ಎಲ್.ಟಿ(ಗೈ) ಇವರು ನಡೆಸಿಕೊಟ್ಟರು.





## ದಾವಣಗೆರೆ

* ಮಾರ್ಚ್ 21 ರಿಂದ 22ರ ವರೆಗೆ ಸಿದ್ಧಗಂಗಾ ಸ್ಥಳೀಯ ಸಂಸ್ಥೆ ವತಿಯಿಂದ ಬೇಸಿಗೆ ಶಿಬಿರವನ್ನು ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್‌ಗಳಿಗಾಗಿ ಆಯೋಜಿಸಲಾಗಿತ್ತು. ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರಕ್ಕೆ ಅರ್ಜಿ ಸಲ್ಲಿಸುವ ಸ್ಕೌಟ್ ಗೈಡ್‌ಗಳಿಗೆ ಕಾರ್ಯಾಗಾರ ಮತ್ತು ದೇಸಿ ಆಟಗಳಾದ ಗೋಲಿ ಆಟ, ಬಗುರಿ, ಚಿನ್ನಿದಾಂಡು, ಲಗೋರಿ ಇನ್ನು ಮುಂತಾದವುಗಳನ್ನು ಆಡಿಸಲಾಯಿತು. ಕಬ್ಸ್ ಮತ್ತು ಬುಲ್‌ಬುಲ್ಸ್‌ಗಳು ವೃದ್ದಾಶ್ರಮಕ್ಕೆ ತೆರಳಿ ಅಲ್ಲಿರುವವರಿಗೆ ಹಣ್ಣುಗಳನ್ನು ವಿತರಿಸಿ ನೃತ್ಯ ಹಾಡುಗಳ ಮೂಲಕ ರಂಜಿಸಿದರು. ಈ ಸಂದರ್ಭದಲ್ಲಿ ಶಾಲೆಯ ಸ್ಕೌಟ್ ಮಾಸ್ಟರ್‌ಗಳು ಗೈಡ್ ಕ್ಯಾಪ್ಟನ್ಸ್‌ಗಳು ಭಾಗವಹಿಸಿದ್ದರು. ಶ್ರೀ ಮಹೇಶ್ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.



ಏಪ್ರಿಲ್ 12 ರಂದು ಅಕ್ಕಮಹಾದೇವಿ ಸಮಾಜದ ವತಿಯಿಂದ ಅಕ್ಕಮಹಾದೇವಿ ಜಯಂತಿ ಪ್ರಯುಕ್ತ ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀಮತಿ ಶಾಂತಾ ಎಸ್. ಯಾವಗಲ್ ರವರನ್ನು 2025ನೇ ಸಾಲಿನ ಅಕ್ಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ಶಾರದಾ ಮಾಗನಹಳ್ಳಿ, ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ರತ್ನ .ಎಂ, ಜಿಲ್ಲಾ ಕಾರ್ಯದರ್ಶಿಗಳು ಇನ್ನು ಮುಂತಾದ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಏಪ್ರಿಲ್ 14 ರಿಂದ 18ರ ವರೆಗೆ ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ವತಿಯಿಂದ ರಾಜ್ಯ ಪುರಸ್ಕಾರ ಪೂರ್ವಭಾವಿ ತರಬೇತಿ ಶಿಬಿರ, ಪ್ರಕೃತಿ ಅಧ್ಯಯನ ಶಿಬಿರ ಮತ್ತು ಚಾರಣ ಶಿಬಿರವನ್ನು ಭಾಗಮಂಡಲ, ಕೊಡಗು ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ಶಿಬಿರದಲ್ಲಿ ಶ್ರೀ ತರಳಬಾಳು ಜಗದ್ಗುರು ವಸತಿಯುತ ಶಾಲೆ, ಬಾಪೂಜಿ ಎಸ್.ಬಿ.ಎಸ್.ಸಿ ಶಾಲೆ, ಮಾಗನೂರು ಬಸಪ್ಪ ಶಾಲೆ, ಪಟೇಲ್ ವೀರಪ್ಪ ಶಾಲೆಯ 110 ಸ್ಕೌಟ್ಸ್-ಗೈಡ್ಸ್ ಮಕ್ಕಳು ಭಾಗವಹಿಸಿದ್ದರು. ಶ್ರೀ ರವೀಂದ್ರಸ್ವಾಮಿ .ಟಿ.ಎಂ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಶಿಬಿರದ ನಾಯಕತ್ವ ವಹಿಸಿದ್ದರು ಶಾಲೆಗಳ ಸ್ಕೌಟರ್ಸ್-ಗೈಡರ್ಸ್‌ಗಳು ಭಾಗವಹಿಸಿದ್ದರು. ಜಿಲ್ಲಾಸಂಸ್ಥೆ ವತಿಯಿಂದ ಶ್ರೀಮತಿ ಅಶ್ವಿನಿ .ಜೆ, ಎಸ್.ಜಿ.ವಿ ಭಾಗವಹಿಸಿದ್ದರು.



## ಕೊಡಗು

* ಏಪ್ರಿಲ್ 05 ರಿಂದ 07ರ ವರೆಗೆ ಕೊಡಗು ಜಿಲ್ಲಾ ಸಂಸ್ಥೆ ಹಾಗೂ ಶಾಲಾ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಕುಶಾಲನಗರ ಸ್ಥಳೀಯ ಸಂಸ್ಥೆಯ ವತಿಯಿಂದ ಮುಳ್ಳುಸೋಗೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ಕೌಟ್ಸ್–ಗೈಡ್ಸ್, ಕಬ್ಸ್–ಬುಲ್‌ಬುಲ್ಸ್‌ಗಳ ಬೇಸಿಗೆ ಶಿಬಿರ ನಡೆಸಲಾಯಿತು. ಶಿಬಿರಕ್ಕೆ ಚಾಲನೆ ನೀಡಿದ ಸೋಮವಾರಪೇಟೆ ಉಪವಿಭಾಗದ ಡಿವೈಎಸ್ಪಿ ಶ್ರೀ ಆರ್.ವಿ. ಗಂಗಾಧರಪ್ಪ ಮಾತನಾಡಿ "ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮ, ಉತ್ತಮ ವ್ಯಕ್ತಿತ್ವ ಹಾಗೂ ಸಮಯ ಪ್ರಜ್ಞೆಯನ್ನು ಮೈಗೂಡಿಸಿಕೊಳ್ಳಲು ಸ್ಕೌಟ್ಸ್–ಗೈಡ್ಸ್ ಉತ್ತಮ ವೇದಿಕೆ ಆಗಿದೆ" ಎಂದು ಹೇಳಿದರು. ಜಿಲ್ಲಾ ಸಂಸ್ಥೆಯ ಮುಖ್ಯ ಆಯುಕ್ತರಾದ ಶ್ರೀ ಕೆ.ಟಿ ಬೇಬಿಮ್ಯಾಥ್ಯು ಹಾಗೂ ಕುಶಾಲನಗರ ಅನುಗ್ರಹ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಹೆಚ್.ಬಿ. ಲಿಂಗಮೂರ್ತಿ ಮಾತನಾಡಿದ್ದರು. ಕುಶಾಲನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಡಾ. ಪ್ರವೀಣ್ ದೇವರಗೊಂಡ ಸೋಮಪ್ಪ ಅಧ್ಯಕ್ಷತೆ ವಹಿಸಿದರು. ಕುಶಾಲನಗರ ಸ್ಥಳೀಯ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು, ಲಯನ್ಸ್ ಕಬ್ಲಿನ ಪದಾಧಿಕಾರಿಗಳು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಜಿಲ್ಲಾ ಸಂಘಟಕಿ ಶ್ರೀಮತಿ ದಮಯಂತಿ ಉಪಸ್ಥಿತರಿದ್ದರು. ವಿವಿಧ ಶಾಲೆಗಳಿಂದ ಆಗಮಿಸಿದ 400 ವಿಧ್ಯಾರ್ಥಿಗಳು ಮತ್ತು ಶಿಕ್ಷಕ/ ಶಿಕ್ಷಕಿಯರು ಈ ಶಿಬಿರದಲ್ಲಿ ಭಾಗವಹಿಸಿದ್ದರು. ಸಮಾರೋಪ ಸಮಾರಂಭದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು ಹಾಗೂ ಗೈಡ್ ಆಯುಕ್ತರು ಆಗಿರುವ ಶ್ರೀಮತಿ ರಾಣಿ ಮಾಚಯ್ಯನವರು ವಿಧ್ಯಾರ್ಥಿಗಳು ಜೀವನದಲ್ಲಿ ಶಿಸ್ತು, ಸಂಯಮ ಹಿರಿಯರಿಗೆ ಗೌರವ ಕೊಡುವುದನ್ನು ಬೆಳೆಸಿಕೊಳ್ಳುವಂತೆ ಕರೆ ನೀಡಿದ್ದಾರು.



* ಏಪ್ರಿಲ್ 14 ರಂದು ಕೊಡಗು ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್ ಮತ್ತು ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಅಂಬೇಡ್ಕರ್ ದಿನಾಚರಣೆಯನ್ನು ಆಚರಿಸಲಾಯಿತು. ಮೊದಲಿಗೆ ಮಡಿಕೇರಿ ನಗರದಲ್ಲಿ ಜಾಥವನ್ನು ಆಯೋಜಿಸಲಾಗಿದ್ದು. ಜಿಲ್ಲಾಧಿಕಾರಿಗಳು ಅಂಬೇಡ್ಕರ್ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಚಾಲನೆ ನೀಡಿದ್ದರು.

ನಂತರ ಗಾಂಧಿ ಭವನದಲ್ಲಿ ಸಭಾ ಕಾರ್ಯಕ್ರಮ ನಡೆಯಿತು. ಮಡಿಕೇರಿ ಸ್ಥಳೀಯ ಶಾಸಕರಾದ ಡಾ. ಮಂಥರ್ ಗೌಡರವರು ಆಗಮಿಸಿದ್ದರು. ಈ ಸಂರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ಟಿ ಬೇಬಿಮ್ಯಾಥ್ಯೂ ಹಾಗೂ ಇತರೆ ಪದಾಧಿಕಾರಿಗಳು ಆಗಮಿಸಿದ್ದರು. ಕ್ರೆಸೆಂಟ್ ಶಾಲೆ, ಸಂತ ಮೈಕಲರ ಆಂಗ್ಲ ಮಾಧ್ಯಮ ಶಾಲೆ, ಸಂತ ಜೋಸೆಫರ ಆಂಗ್ಲ ಮಾಧ್ಯಮ ಶಾಲೆ ಹಾಗೂ ಬ್ಲಾಸಂ ಶಾಲೆಯ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.



* ಏಪ್ರಿಲ್ 16 ರಂದು ಸೋಮವಾರಪೇಟೆ ಸ್ಥಳೀಯ ಸಂಸ್ಥೆಯ ನೂತನ ಅಧಕ್ಷರು, ಕಾರ್ಯದರ್ಶಿಗಳು ಹಾಗೂ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಸಂಕಪ್ಪ ಸಭಾಂಗಣದಲ್ಲಿ ನಡೆಯಿತು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ಟಿ ಬೇಬಿಮ್ಯಾಥ್ಯೂರವರು ಮಾತನಾಡುತ್ತ "ಯುವ ಪ್ರತಿಭೆಗಳನ್ನು ಮುಖ್ಯ ವಾಹಿನಿಗೆ ತರುವುದು ಮತ್ತು ಜೀವನ ಮೌಲ್ಯಗಳನ್ನು ಕಲಿಸುವ ಮಹತ್ವದ ಕಾರ್ಯವನ್ನು ಸ್ಕೌಟ್ಸ್ ಮತ್ತು ಗೈಡ್ಸ್ ಮಾಡುತ್ತದೆ" ಎಂದು ಹೇಳಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಟಿ.ಪಿ ರಮೇಶ್ ಮಾತನಾಡುತ್ತ "ಯುವ ಪೀಳಿಗೆಯ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಈ ಚಳುವಳಿಯ ಉದ್ದೇಶವಾಗಿದೆ ಸ್ಕೌಟ್ಸ್ ಮತ್ತು ಗೈಡ್ಸ್ ಹಲವಾರು ಸಮಾಜಮುಖಿ ಕೆಲಸಗಳನ್ನು ಮಾಡುತ್ತದೆ" ಎಂದು ನುಡಿದರು. ಸ್ಕೌಟ್ ಆಯುಕ್ತರಾದ ಶ್ರೀ ಜಿಮ್ಮಿ ಸಿಕ್ವೇರಾರವರು ಸ್ಕೌಟ್–ಗೈಡ್ ಸಂಸ್ಥೆ ಬೆಳೆದು ಬಂದ ದಾರಿ ಮತ್ತು ಅದರಲ್ಲಿರುವ ಮೌಲ್ಯತೆಯನ್ನು ತಿಳಿಸಿದರು. ಈ ಸಮಾರಂಭದಲ್ಲಿ ನೂತನ ಅಧ್ಯಕ್ಷರಾಗಿ ಶ್ರೀ ಎಸ್.ಡಿ ವಿಜೇತ್, ಉಪಾಧ್ಯಕ್ಷರಾಗಿ ಶ್ರೀಮತಿ ಶೀಲಾ ಡಿಸೋಜಾ, ಕಾರ್ಯದರ್ಶಿಯಾಗಿ ಶ್ರೀಮತಿ ಜ್ಯೋತಿ ಅರುಣ್, ಖಜಾಂಜಿ ಆಗಿ ಶ್ರೀ ಕೆ.ಪಿ ದಿನೇಶ್ ಮತ್ತು ಪದಾಧಿಕಾರಿಗಳಾಗಿ ಶ್ರೀ ಎ.ಪಿ ವೀರಾರಾಜು, ಶ್ರೀಮತಿ ಜೇಸಿ ಶೇಖರ್, ಶ್ರೀಮತಿ ಎಸ್.ಎಂ ದಿಸಿಲ್ವಾ, ಶ್ರೀಮತಿ ಜೋಕಿಂಮ್ ವಾಸ್, ಶ್ರೀಮತಿ ವಸಂತಿ, ಶ್ರೀ ರವೀಂದ್ರ ಇವರುಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ವೇದಿಕೆಯಲ್ಲಿ ಸಂಸ್ಥೆಯ ನಿಕಟ ಪೂರ್ವ ಅಧಕ್ಷ ಶ್ರೀ ಬಿ.ಎ. ಭಾಸ್ಕರ್, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು ಶ್ರೀಮತಿ ರಾಣಿ ಮಾಚಯ್ಯ, ಮುಂತಾದವರು ಇದ್ದರು.



## ಕೋಲಾರ

* ಮಾರ್ಚ್ 22 ರಂದು ವಿಶ್ವಜಲ ದಿನಾಚರಣೆಯನ್ನು ನಗರದ ಸ್ಕೌಟ್ ಭವನದಲ್ಲಿ ಆಯೋಜನೆ ಮಾಡಲಾಗಿತ್ತು. "ನೀರು ಮಾನವನ ಜೀವನದಲ್ಲಿ ಅತ್ಯಗತ್ಯ ಹಾಗೂ ನೀರಿನ ಬದಲಿ ವಸ್ತು ಭೂಮಿಯ ಮೇಲೆ ಸಿಗದೆ ಇರುವುದರಿಂದ ನೀರನ್ನು ಮಿತವಾಗಿ ಬಳಸಿ ಮುಂದಿನ ಪೀಳಿಗೆಗೆ ನೀರು ಉಳಿಸುವ ಮಹಾನ್ ಕಾರ್ಯದಲ್ಲಿ ಯುವಶಕ್ತಿ ತೊಡಗಬೇಕಾಗಿದೆ" ಎಂದು ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ನವೀನಾರವರು ಕರೆ ನೀಡಿದರು. ನಗರದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ, ಸರ್ಕಾರಿ ಮಹಿಳಾ ಕಾಲೇಜು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೋಲಾರ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಬೀವೃದಿ ಸಂಘ ಕೋಲಾರ ವತಿಯಿಂದ ನಗರದ ಸ್ಕೌಟ್ ಭವನದಲ್ಲಿ ಆಯೋಜಿಸಿದ್ದ ವಿಶ್ವ ಜಲ ದಿನಾಚರಣೆಯನ್ನು ಉದ್ಘಾಟಿಸಿ ಮಾತಾನಾಡಿದರು. ಧರ್ಮಸ್ಥಳ ಸಂಘದ ನಿರ್ದೇಶಕರಾದ ಶ್ರೀಮತಿ ಪದ್ಮಯ್ಯರವರು ಮಾತನಾಡಿ "ಭೂಮಿಗೆ ಮಳೆ ಬಂದಾಗ ಆ ನೀರನ್ನು ಸಂರಕ್ಷಿಸಿ ಬಳಸುವುದನ್ನು ಎಲ್ಲರೂ ಕಡ್ಡಾಯವಾಗಿ ಮಾಡಬೇಕು ಹಾಗೂ ಸಂರಕ್ಷಿಸಿದ ನೀರನ್ನು ಮಿತವಾಗಿ ಬಳಸುವ ಅಭ್ಯಾಸ ಮಾಡಿಕೊಳ್ಳಬೇಕು", ಈ ನಿಟ್ಟಿನಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಸದಸ್ಯರು ನೀರಿನ ಸಂರಕ್ಷಣೆ ಎಂಬ ಪದಕವನ್ನು ಗಳಿಸಲು ಹೆಚ್ಚಿನ ಸಂಖ್ಯೆಯಲ್ಲಿ ಪ್ರಯತ್ನಿಸಿದಾಗ ಮತ್ತಷ್ಟು ನೀರಿನ ಮಹತ್ವ ಸಾರ್ವಜನಿಕರಿಗೆ ತಿಳಿಯಲಿದೆ. ಈ ಸಮಾರಂಭದಲ್ಲಿ ತಾಲ್ಲೂಕು ಯೋಜನಾಧಿಕಾರಿ



ಶ್ರೀ ಸಿದ್ದಗಂಗಯ್ಯ, ಸಮನ್ವಾಯಾಧಿಕಾರಿ ಶ್ರೀ ಮಧು, ಜಿಲ್ಲಾ ಆಯುಕ್ತರಾದ ಶ್ರೀ ಸುರೇಶ್, ಜಿಲ್ಲಾ ಸಹ ಕಾರ್ಯದರ್ಶಿ ಸ್ಕೌಟ್ ಶ್ರೀ ಬಾಬು, ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ನವೀನ್, ಶ್ರೀಮತಿ ಸೌಮ್ಯರವರು ಮಾತನಾಡಿದರು.

* ಮಾರ್ಚ್ 21, 22 ಮತ್ತು 23 ರಂದು ನಗರದ ಸ್ಕೌಟ್ ಭವನದಲ್ಲಿ ಸರ್ಕಾರಿ ಮಹಿಳಾ ಕಾಲೇಜು ಕೋಲಾರ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೋಲಾರ ವತಿಯಿಂದ ಆಯೋಜನೆ ಮಾಡಿದ್ದ ಸ್ಕೌಟ್ಸ್ ಗೈಡ್ಸ್ ಬೇಸಿಗೆ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ಭಾಗವಹಿಸಿ ಮಾತನಾಡುತ್ತಾ "ಮನುಷ್ಯನು ಆರೋಗ್ಯವಂತನಾಗಿರಬೇಕಾದರೆ ಪರಿಸರದಲ್ಲಿ ಸಿಗುವ ಹಣ್ಣು, ತರಕಾರಿ, ಹಸಿರು ಸೊಪ್ಪುಗಳನ್ನು ತಿನ್ನುವ ಮೂಲಕ ಯಾವುದೇ ವೈದ್ಯರನ್ನು ಸಂಪರ್ಕಿಸದೇ ನಾವು ನಮ್ಮ ಆರೋಗ್ಯವನ್ನು ಸುಧಾರಿಸಿಕೊಳ್ಳಬಹುದು" ಎಂದು ತಿಳಿಸಿದರು. ರೋವರ್ ಲೀಡರ್ ಶ್ರೀ ನವೀನ್‌ರವರು ಮಾತನಾಡಿ "ಸ್ಕೌಟ್ಸ್-ಗೈಡ್ಸ್ ಸಂಸ್ಥೆಯ ಮೂಲಕ ವಿದ್ಯಾರ್ಥಿಗಳಿಗೆ ಉತ್ತಮವಾದ ತರಬೇತಿಗಳನ್ನು ಆಯೋಜಿಸಿದ್ದು, ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ ಜಿವನ ಕೌಶಲಗಳನ್ನು ಮೈಗೂಡಿಸಿಕೊಳ್ಳುವ ಮೂಲಕ ತಮ್ಮ ಜೀವನದಲ್ಲಿ ಸಂತಸವನ್ನು ಕಾಣಬಹುದಾಗಿದೆ, ಸಮಯವನ್ನು ಸದುಪಯೋಗಪಡಿಸಿಕೊಳ್ಳುವ ಸಮಾಜಕ್ಕೆ ಸೇವಾ ಕರ್ತರಾಗಿ ಬೆಳೆಯಬೇಕು" ಎಂದು ತಿಳಿಸಿದರು. ರೇಂಜರ್ ಲೀಡರ್ ಶ್ರೀಮತಿ ಸೌಮ್ಯರವರು ಮಾತನಾಡಿ "ಒಂದನೇ ತರಗತಿಯಿಂದ ಪರಿಸರ ಅಧ್ಯಯನ ಎಂಬ ವಿಷಯವನ್ನು ನಾವು ಓದಿಕೊಂಡು ಬಂದಿದ್ದೇವೆ, ಇದು ಕೇವಲ ಅಂಕಗಳಿಕೆಗಾಗಿ ಮಾತ್ರವಲ್ಲ ತಮ್ಮ ಸುತ್ತಲಿನ ಸಮಾಜದ ಪರಿಸರವನ್ನು ಎಲ್ಲರೂ ಕಾಪಾಡಲು, ಈ ಸಂಸ್ಥೆಯ ಪಠ್ಯಕ್ರಮದಲ್ಲಿ ಪರಿಸರ ಉಳಿವಿಗೆ ಸಾಕಷ್ಟು ಚಟುವಟಿಕೆಗಳು ಅಳವಡಿಸಿದ್ದು, ಎಲ್ಲರೂ ಸೇರಿ ಪರಿಸರವನ್ನು ಉಳಿಸಿ ಬೆಳೆಸೋಣ ಹಾಗೂ ಶಿಬಿರದಲ್ಲಿ ಕಲಿತ ಅಂಶಗಳನ್ನು ತಮ್ಮ ಸ್ನೇಹಿತರ ಬಳಿ ಹಂಚಿಕೊಳ್ಳಬೇಕು" ಎಂದು ತಿಳಿಸಿದರು. ಈ ಸಮಾರಂಭದಲ್ಲಿ ಸ್ಕೌಟ್ ಆಯುಕ್ತರಾದ ಶ್ರೀ ಸುರೇಶ್ ಮುಂತಾದವರು ಉಪಸ್ಥಿತರಿದ್ದರು.



* ಏಪ್ರಿಲ್ 1 ರಿಂದ 8ರ ವರೆಗೆ 14ನೇ ವರ್ಷದ ಬೇಸಿಗೆ ಶಿಬಿರವನ್ನು ನಗರದ ಸ್ಕೌಟ್ ಭವನದಲ್ಲಿ ಆಯೋಜನೆ ಮಾಡಲಾಗಿತ್ತು. "ಸಂತಸದಿಂದ ಹಾಗೂ ಧನಾತ್ಮಕವಾಗಿ ಪಡೆದ ಶಿಕ್ಷಣದಿಂದ ಮಾತ್ರ ಜೀವನ ಕೌಶಲಗಳನ್ನು ವೃದ್ದಿಸಿಕೊಳ್ಳಬಹುದಾಗಿದೆ" ಎಂದು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಶಂಕರಪ್ಪ ಅಭಿಪ್ರಾಯ ಪಟ್ಟರು. ಸ್ಥಳೀಯ ಸಂಸ್ಥೆ ಪರಿಷತ್ ಅಧ್ಯಕ್ಷರಾದ ಶ್ರೀ ಕಾಡಹಳ್ಳಿ ಶಶಿಕುಮಾರ್‌ರವರು ಮಾತನಾಡಿ "ಮೌಲ್ಯ ಶಿಕ್ಷಣ ಹಾಗು ಜೀವನ ಆಧಾರಿತ ಶಿಕ್ಷಣವನ್ನು ಎಲ್ಲರೂ ಪಡೆಯಬೇಕಾಗಿದೆ, ಉತ್ತಮ ಸಂಸ್ಕಾರವನ್ನು ಎಲ್ಲರೂ ಬೆಳಸಿಕೊಂಡು ತಮ್ಮ ಮುಂದಿನ ಪೀಳಿಗೆಗೆ ನಮ್ಮ ಪೂರ್ವಜರು ಹಾಕಿಕೊಟ್ಟ ಸಂಪ್ರದಾಯ ಮತ್ತು ಆಚಾರ ವಿಚಾರಗಳನ್ನು ಮುಂದುವರೆಸಿಕೊಂಡು ಹೋಗಬೇಕು" ಎಂದು ತಿಳಿಸಿದರು. ರೋಟರಿ ಕೋಲಾರ ನಂದಿನಿ ಸಂಸ್ಥೆಯ ಸಮುದಾಯ ಅಭಿವೃದ್ದಿ ಸಮಿತಿ ಅಧ್ಯಕ್ಷರಾದ ಶ್ರೀ ಪುಟ್ಟರಾಜುರವರು ಮಾತನಾಡಿ "ಈ ಎಂಟು ದಿನಗಳ ಶಿಬಿರದಲ್ಲಿ ಸ್ಕೌಟ್ಸ್-ಗೈಡ್ಸ್ ಸಂಸ್ಥೆಯ ಮೂಲ ಆಶಯಗಳನ್ನು ತಮಗೆ



ತಿಳಿಸಲಾಗುವುದರ ಜೊತೆಗೆ ಜೀವನ ಕೌಶಲಗಳನ್ನು ರೂಡಿಸಿಕೊಳ್ಳಲು ಮತ್ತು ತಮ್ಮ ಸುತ್ತಲಿನ ಜನರಿಗೆ ಯಾವುದಾದರು ಸಹಾಯ ಬೇಕಾದರೆ ತಾವು ಹೇಗೆ ಸಹಾಯ ಮಾಡಬಹುದು ಎಂಬ ವಿಚಾರಗಳನ್ನು ಕಲಿಸಲಾಗುವುದು" ಎಂದು ತಿಳಿಸಿದರು. ಈ ಸಂದರ್ಭದಲ್ಲಿ ನಿವೃತ್ತ ಶಿಕ್ಷಣಾಧಿಕಾರಿ ಶ್ರೀ ಸಿ.ಆರ್. ಅಶೋಕ್, ಜಿಲ್ಲಾ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್, ಜಿಲ್ಲಾ ಜಂಟಿ ಕಾರ್ಯದರ್ಶಿ ಉಮಾದೇವಿ,ಜಿಲ್ಲಾ ಸಹಾಯಕ ಆಯುಕ್ತ ಶ್ರೀ ವಿಠಲ್‌ರಾವ್ ಮುಂತಾದವರು ಉಪಸ್ಥಿತರಿದ್ದರು.

* ಏಪ್ರಿಲ್ 9 ರಂದು ಜಿಲ್ಲಾ ಸಂಸ್ಥೆ ಕೋಲಾರ ಮತ್ತು ರೋಟರಿ ಕೋಲಾರ ನಂದಿನಿ ವತಿಯಿಂದ ನಡೆಯುತ್ತಿರುವ 14ನೇ ವರ್ಷದ ಬೇಸಿಗೆ ಶಿಬಿರದಲ್ಲಿ ಶಿಬಿರಾರ್ಥಿಗಳಿಂದ 5000 ಬೀಜದ ಉಂಡೆಗಳನ್ನು ತಯಾರಿಸುವ ಕಾರ್ಯಾಗಾರಕ್ಕೆ ಮಾಲೂರು ತಾಲ್ಲೂಕು ಸ್ಕೌಟ್ಸ್ ಗೈಡ್ಸ್ ಸಮಿತಿಯ ಉಪಾಧ್ಯಕ್ಷರಾದ ಶ್ರೀ ನಂಜುಂಡ ಗೌಡರವರು ಚಾಲನೆ ನೀಡಿ ಶುಭಕೋರಿದರು. ಈ ಸಂದರ್ಭದಲ್ಲಿ ರೋಟರಿ ಕೋಲಾರ ಶ್ರೀಮತಿ ನಂದಿನಿಯ ಅಧ್ಯಕ್ಷರಾದ ಸ್ಕೌಟ್ ಶ್ರೀ ಬಾಬು, ಜಿಲ್ಲಾ ಯುವ ಸಮಿತಿ ಅಧ್ಯಕ್ಷರಾದ ಶ್ರೀ ತೇಜಾನಂದ ಮುಂತಾದವರು ಉಪಸ್ಥಿತರಿದ್ದರು.



* ಏಪ್ರಿಲ್ 12 ರಿಂದ 14ರ ವರೆಗೆ ಜಿಲ್ಲಾ ಸ್ಕೌಟ್ ಭವನದಲ್ಲಿ ರಾಜ್ಯ ಪುರಸ್ಕಾರ ಸ್ಕೌಟ್ಸ್-ಗೈಡ್ಸ್, ಕಬ್ಸ್-ಬುಲ್ಸ್‌ಗಳಿಗೆ ಒಂದನೇ ಹಂತದ ಪೂರ್ವ ಸಿದ್ದತಾ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು.

* ಏಪ್ರಿಲ್ 14 ರಂದು ಜಿಲ್ಲಾ ಸ್ಕೌಟ್ಸ್ ಭವನದಲ್ಲಿ ಡಾ॥ ಅಂಬೇಡ್ಕರ್‌ರವರ 134ನೇ ಜಯಂತಿಯನ್ನು ಆಚರಣೆ ಮಾಡಲಾಯಿತು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ಭಾಗವಹಿಸಿ ಮಾತನಾಡಿದರು.

* ಏಪ್ರಿಲ್ 14 ರಂದು ಕೋಲಾರ ನಗರದ ಪ್ರಮುಖ ರಸ್ತೆಗಳ ಬದಿಗಳಲ್ಲಿ ಡಾ॥ ಅಂಬೇಡ್ಕರ್‌ರವರ 134ನೇ ಜಯಂತಿಯ ಅಂಗವಾಗಿ ಗಿಡಗಳನ್ನು ನೆಡಲಾಯಿತು. ಚತುರ್ಥ ಚರಣ್ ಪ್ರಶಸ್ತಿ ಪುರಸ್ಕೃತ ಶ್ರೀ ವೆಂಕಟ್ ನಾರಾಯಣಗೌಡರವರ ತಂದೆ ಶ್ರೀ ಪ್ರಶಾಂತ್‌ಗೌಡರವರು ಸ್ಕೌಟ್ ಭವನಕ್ಕೆ 25 ಸಾವಿರ ಮೌಲ್ಯದ ಟಿ.ವಿ.ಯನ್ನು ಕೊಡುಗೆಯಾಗಿ ನೀಡಿರುತ್ತಾರೆ.

* ಏಪ್ರಿಲ್ ತಿಂಗಳಲ್ಲಿ ಬಂಗಾರಪೇಟೆ ಪ್ರಥಮ ದರ್ಜೆ ಕಾಲೇಜು, ಯಲ್ದೂರು ಗ್ರಾಮ ಪ್ರೀತಿ ವಿದ್ಯಾ ಮಂದಿರ, ವಿದ್ಯಾ ದೀಪ್ತಿ ಶಾಲೆ, ಸೋಮಯಾಜಲಹಳ್ಳಿಯ ಕೆ.ಪಿ.ಎಸ್. ಶಾಲೆ, ಕೂಳಗೂರ್ಕಿಯ ಇಂಟರ್ ನ್ಯಾಷನಲ್ ಪಬ್ಲಿಕ್ ಶಾಲೆ, ಮಾಲೂರಿನ ಗೊಲ್ಲಹಳ್ಳಿ ಶಾಲೆಗಳಲ್ಲಿ ಬೇಸಿಗೆ ಶಿಬಿರಗಳನ್ನು ಆಯೋಜನೆ ಮಾಡಲಾಗಿತ್ತು.

## ಮಧುಗಿರಿ

* ಮಾರ್ಚ್ 01 ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆ, ಕೊರಟಗೆರೆ ಇಲ್ಲಿ ರಾಷ್ಟ್ರೀಯ ವಿಜ್ಞಾನ್ ದಿವಸ್ ಕಾರ್ಯಕ್ರಮವನ್ನು ಸ್ಕೌಟ್ಸ್ ಮತ್ತು ಗೈಡ್ಸ್



ಮಕ್ಕಳಿಂದ ವಿಜ್ಞಾನಕ್ಕೆ ಸಂಬಂಧಿಸಿದ ಚಟುವಟಿಕೆಗಳು ಮಾಡುವ ಮುಖಾಂತರ ಆಚರಿಸಿದರು.

* ಮಾರ್ಚ್ 14 ರಂದು ಯೋಗಿ ನಾರಾಯಣ ಯತೀಂದ್ರ ಶ್ರೀ ಕೈವಾರ ತಾತಯ್ಯನವರ ಜಯಂತಿ ಹಾಗೂ ಶಾರದ ಪೂಜೆಯನ್ನು ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆ ಗೌರಿ ನಿಲಯ ಕೊರಟಗೆರೆಯಲ್ಲಿ ಆಚರಿಸಲಾಯಿತು.

* ಮಾರ್ಚ್ 19 ರಿಂದ 21ರ ವರೆಗೆ ಮಧುಗಿರಿ ಗ್ರಾಮ ದೇವತೆ ಶ್ರೀ ದಂಡಿನ ಮಾರಮ್ಮ ದೇವಿಯ ಜಾತ್ರಾ ಮಹೋತ್ಸವದಲ್ಲಿ ರೋವರ್ ರೇಂಜರ್‌ಗಳು ಸೇವೆ ಸಲ್ಲಿಸಿದರು. ಶ್ರೀ ಕರಿಸಿದ್ದಪ್ಪ, ಎ.ಎಸ್.ಒ.ಸಿ ಶ್ರೀ ಕೃಷ್ಣಮೂರ್ತಿ ಹಾಗೂ ಇತರೆ ಪದಾಧಿಕಾರಿಗಳು ರೋವರ್–ರೇಂಜರ್, ದಳನಾಯಕರುಗಳು ಉಪಸ್ಥಿತರಿದ್ದರು.



* ಮಾರ್ಚ್ 21 ರಂದು ಶಿರಾ ಸ್ಥಳೀಯ ಸಂಸ್ಥೆ ಜಿಎಫ್‌ಜಿಸಿ ಕಾಲೇಜ್ ರೋವರ್ ಲೀಡರ್ ಶ್ರೀ ತಿಪ್ಪೇಸ್ವಾಮಿ ಇವರ ನೇತೃತ್ವದಲ್ಲಿ ರಕ್ತದಾನ ಶಿಬಿರವನ್ನು ಆರೋಗ್ಯ ಇಲಾಖೆ ಅಧಿಕಾರಿ ಶ್ರೀ ಪ್ರಸನ್ನ ಇವರ ಉಪಸ್ಥಿತಿಯಲ್ಲಿ ನಡೆಸಲಾಯಿತು. ಈ ಶಿಬಿರದಲ್ಲಿ ರೋವರ್ ಮತ್ತು ರೇಂಜರ್‌ಗಳು ರಕ್ತದಾನ ಮಾಡಿದರು.

ಮಾರ್ಚ್ 26 ರಂದು ಕೊರಟಗೆರೆ ತಾಲ್ಲೂಕು ಜಿಎಚ್‌ಪಿಎಸ್ ಕಪಿಕೆರೆ ಶಾಲೆಯಲ್ಲಿ ಸ್ಕೌಟ್ ಗೈಡ್‌ಗಳು 2024–25ನೇ ಸಾಲಿನ ಬೇಸಿಗೆ ಶಿಬಿರವನ್ನು ಪ್ರಾರಂಭ ಮಾಡಿದರು ಈ ಶಿಬಿರದ ಉದ್ಘಾಟನಾ ಕಾರ್ಯಕ್ರಮಕ್ಕೆ ಎಸ್.ಡಿ.ಎಂ.ಸಿ. ಅಧ್ಯಕ್ಷರು ಶ್ರೀ ಶಿವಪ್ಪ ಹಾಗೂ ಸದಸ್ಯರು ಪಾಲ್ಗೊಂಡಿದ್ದರು.

ಏಪ್ರಿಲ್ 01 ರಿಂದ 05ರ ವರೆಗೆ ಮಧುಗಿರಿ ಸ್ಥಳೀಯ ಸಂಸ್ಥೆ ಚಿರಾಗ್ ಪಬ್ಲಿಕ್ ಶಾಲೆ ಆವರಣದಲ್ಲಿ ಐದು ದಿನಗಳ ಕಾಲ ಬೇಸಿಗೆ, ಶಿಬಿರ ಈ ಶಿಬಿರದ ನಾಯಕರಾಗಿ ಶ್ರೀಮತಿ ಸಾಯಿರಾಬಾನು, ಡಿಟಿಸಿ (ಗೈಡ್) ಶ್ರೀ ಅಶ್ವಥ್, ಸ್ಕೌಟ್ ಮಾಸ್ಟರ್ ಸೇವೆ ಸಲ್ಲಿಸಿದರು. ಸುಮಾರು 40 ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ರಾಯಚೂರು

* ಜಿಲ್ಲಾ ಸಂಸ್ಥೆ, ಸ್ಥಳೀಯ ಸಂಸ್ಥೆ ಮಾನ್ವಿ, ಶಾಂತಿ ನಿಕೇತನ ಪ್ರಾಥಮಿಕ ಮತ್ತು ಪ್ರೌಢಶಾಲೆ ಸಿರವಾರ ಇವರುಗಳ ಸಂಯುಕ್ತ ಆಶ್ರಯದಲ್ಲಿ ಏಪ್ರಿಲ್ 01 ರಿಂದ 06ರ ವರೆಗೆ ಬೇಸಿಗೆ ಶಿಬಿರ ಆಯೋಜಿಸಲಾಗಿತ್ತು. ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡ ಮಾನ್ವಿ ಸ್ಥಳೀಯ ಸಂಸ್ಥೆಯ ಜಂಟಿ ಕಾರ್ಯದರ್ಶಿ ಶ್ರೀ ನರಸಿಂಹಮೂರ್ತಿ ದೇಸಾಯಿ ಅವರು ಮಾತನಾಡಿ ಉತ್ತಮ ಭವಿಷ್ಯ ನಿರ್ಮಾಣಕ್ಕೆ ಸ್ಕೌಟ್ಸ್–ಗೈಡ್ಸ್ ಚಟುವಟಿಕೆ ಅತಿ ಅವಶ್ಯಕ. ಮಕ್ಕಳು ಬೇಸಿಗೆ ಶಿಬಿರದ ಸದುಪಯೋಗ ಪಡೆಯಬೇಕು ಎಂದರು. ಶಿಬಿರದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತ ಸ್ಕೌಟ್–ಗೈಡ್‌ಗಳಿಗೆ ಪ್ರಮಾಣ ಪತ್ರ ಹಾಗೂ ಪಾರಿತೋಷಕಗಳನ್ನು ಮತ್ತು ಶಿಬಿರದ ಉಸ್ತುವಾರಿಯನ್ನು ಗೈಡ್ ಕ್ಯಾಪ್ಟನ್ ಹಾಗೂ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಅನುರಾಧ ಯು. ವಹಿಸಿಕೊಂಡಿದ್ದರು.






ಶಿಬಿರದ 3ನೇ ದಿನದಂದು “ತಂಬಾಕು ಮುಕ್ತ ಸಮಾಜಕ್ಕಾಗಿ ಜಾಗೃತಿ ಜಾಥಾ” ಮಾಡಲಾಯಿತು. ದಂತ ವೈದ್ಯ ಡಾ. ಹನುಮಂತರಾಯ ಅವರು ಮಕ್ಕಳಿಗೆ ದಂತ ಪರೀಕ್ಷೆಯನ್ನು ನಿರ್ವಹಿಸಿ, ಹಲ್ಲು ಮತ್ತು ಬಾಯಿಯ ಆರೋಗ್ಯದ ಬಗ್ಗೆ ಅರಿವು ಮೂಡಿಸಿದರು. ತಂಬಾಕಿನ ಸೇವೆಯಿಂದಾಗುವ ದುಷ್ಪರಿಣಾಮಗಳ ಬಗೆಗೆ ವಿವರಣೆ ನೀಡಿದರು.

## ರಾಮನಗರ

* ಏಪ್ರಿಲ್ 05 ಮತ್ತು 06 ರಂದು ರಾಮನಗರ ಜಿಲ್ಲಾ ಮಟ್ಟದ ತೃತೀಯ ಸೋಪಾನ್ ಮತ್ತು ನಿಪುಣ್ ಪರೀಕ್ಷಾ ತರಬೇತಿ ಶಿಬಿರವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಚನ್ನಪಟ್ಟಣದಲ್ಲಿ ಆಯೋಜಿಸಲ್ಲಾಗಿತ್ತು. ಶಿಬಿರದಲ್ಲಿ ತೃತೀಯ ಸೋಪಾನ್ ಮತ್ತು ನಿಪುಣ್ ಪರೀಕ್ಷಾರ್ಥಿಗಳು ಸೇರಿದಂತೆ ದಳನಾಯಕರು ಮತ್ತು ಅಧಿಕಾರಿ ವರ್ಗದವರು ಸೇರಿ 200 ಮಂದಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಉಷಾಮಾಲಿನಿ ಮತ್ತು ರಾಮನಗರ ಜಿಲ್ಲಾ ಕಾರ್ಯದರ್ಶಿ ಶ್ರೀ ಶಿವನಂಜಪ್ಪ, ಸ್ಥಳೀಯ ಕಾರ್ಯದರ್ಶಿ ಡಾ. ಈರಾ ನಾಯ್ಕ, ಕೇಂದ್ರ ಕಛೇರಿಯ ಆಯುಕ್ತೆ ಶ್ರೀಮತಿ ಕುಮಾರಿ ಹೊನ್ನಮ್ಮ, ಕಾಲೇಜು ಘಟಕದ ದಳನಾಯಕರುಗಳಾದ ಪ್ರೊ. ಪ್ರಭು ವಿ. ಉಪಾಸೆ ಮತ್ತು ಡಾ. ಚನ್ನಮ್ಮ ಎಂ. ಸೇರಿದಂತೆ ಇತರ ಅಧಿಕಾರಿಗಳು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟನೆಯನ್ನು ನೆರವೇರಿಸಿದರು. ಸಂಜೆ 7.30ಕ್ಕೆ ಶಿಬಿರಾಗ್ನಿ ಕಾರ್ಯಕ್ರಮ ಪ್ರಾರಂಭವಾಯಿತು. ಇದರಲ್ಲಿ ಸ್ಥಳೀಯ ಘಟಕದ ಗೌರವಾಧ್ಯಕ್ಷರಾದ ಶ್ರೀ ಸು.ತ. ರಾಮೇಗೌಡ ಅವರು ಮತ್ತು ಮಹಿಳಾ ಉಪಾಧ್ಯಕ್ಷರಾದ ಶ್ರೀಮತಿ ರಾಧಾರಾಣಿ ರವಿಕುಮಾರ್ ಗೌಡ ಅವರು ಸೇರಿದಂತೆ ವಿವಿಧ ಗಣ್ಯರು ಭಾಗವಹಿಸಿದ್ದರು. ಶಿಬಿರದ ಎರಡನೇ ದಿನ ಬೆಳಿಗ್ಗೆ 6 ಗಂಟೆಗೆ ಬಿ.ಪಿ. 6 ಕಾರ್ಯಕ್ರಮ ನಂತರ ಧ್ವಜಾರೋಹಣ ನೆರವೇರಿಸಲಾಯಿತು. 9 ಗಂಟೆಗೆ ಎಲ್ಲಾ ಶಿಬಿರಾರ್ಥಿಗಳನ್ನು ಜಾತಾ ಕರೆದೊಯ್ಯಲಾಯಿತು. ಈ ಸಂದರ್ಭದಲ್ಲಿ ಜನರಲ್ಲಿ ನೀರಿನ ಮಹತ್ವ, ಗಿಡ ನೆಡುವಿಕೆ, ಪ್ಲಾಸ್ಟಿಕ್ ನಿಷೇಧ, ಧೂಮಪಾನ ನಿಷೇಧ, ಉಗುಳದಿರುವಿಕೆ ಮತ್ತು ಶುಚಿತ್ವ ಕುರಿತು ಸ್ಲೋಗನ್‌ಗಳನ್ನು ಹೇಳುವ ಮೂಲಕ ಜಾಗೃತಿ ಮೂಡಿಸಲಾಯಿತು. ಅಪರಾಹ್ನದ ವರೆಗೆ ವಿವಿಧ ಪರೀಕ್ಷೆ ಮತ್ತು ಚಟುವಟಿಕೆಗಳು ನಡೆಸಿ ಮಧ್ಯಾಹ್ನ ಭೋಜನದ ನಂತರ ಸಮಾರೋಪ ಸಮಾರಂಭವನ್ನು ಆಯೋಜಿಸಲಾಯಿತು. ಸಮಾರಂಭದಲ್ಲಿ ಮಾಜಿ ಶಾಸಕರು ಹಾಗೂ ಭಾರತ್ ಸ್ಕೌಟ್ಸ್–ಗೈಡ್ಸ್‌ನ ರಾಮನಗರ ಜಿಲ್ಲಾ ಗೌರವಾಧ್ಯಕ್ಷರಾದ ಶ್ರೀ ಸಿ.ಎಂ. ಲಿಂಗಪ್ಪ ಅವರು, ಸ್ಥಳೀಯ ಘಟಕದ ಗೌರವಾಧ್ಯಕ್ಷರಾದ ಶ್ರೀ ಸು.ತ. ರಾಮೇಗೌಡರವರು ಹಾಗೂ ಶ್ರೀಮತಿ ವಿದ್ಯಾರಾಣಿ ರವಿಕುಮಾರ್ ಗೌಡ ಅವರು ಉಪಸ್ಥಿತರಿದ್ದರು. ಪ್ರಾಂಶುಪಾಲರಾದ ಪ್ರೊ. ಉಷಾಮಾಲಿನಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಪರೀಕ್ಷಾ ಶಿಬಿರ ಯಶಸ್ವಿಗೊಳಿಸಿದ ಸ್ಕೌಟ್–ಗೈಡ್ಸ್ ಹಾಗೂ ರೋವರ್ಸ್–ರೇಂಜರ್ಸ್‌ಗಳಿಗೆ ಪ್ರಮಾಣ



ಪತ್ರಗಳನ್ನು ನೀಡಲಾಯಿತು. ಅಧ್ಯಕ್ಷತೆ ವಹಿಸಿದ ಪ್ರಾಂಶುಪಾಲೆ ಪ್ರೊ. ಉಷಾಮಾಲಿನಿ ಮಾತನಾಡಿ ಕಾರ್ಯಕ್ರಮದ ಯಶಸ್ಸಿಗೆ ಶುಭಕೋರಿ ಇಂತಹ ಕಾರ್ಯಕ್ರಮಗಳನ್ನು ನಮ್ಮ ಕಾಲೇಜಿನಲ್ಲಿ ಆಯೋಜಿಸಲಿಕ್ಕೆ ಸಹಕಾರ ನೀಡುವುದಾಗಿ ಘೋಷಿಸಿದರು. ಕಾರ್ಯಕ್ರಮವನ್ನು ಪ್ರೊ. ಪ್ರಭು ಉಪಾಸೆ ನಿರ್ವಹಿಸಿದರು. ಡಾ. ಚನ್ನಮ್ಮ ಎಂ. ವಂದನಾರ್ಪಣೆ ಮಾಡಿದರು. ಸ್ಥಳೀಯ ಮೀಡಿಯಾದ ಶ್ರೀ ಗೊ.ರಾ. ಶ್ರೀನಿವಾಸ ಅವರು ವಿಡೀಯೋ ಮತ್ತು ಪ್ರಚಾರ ಕಾರ್ಯನಿರ್ವಹಿಸಿದರು.

* ಏಪ್ರಿಲ್ 06 ರಿಂದ 08ರ ವರೆಗೆ ಪ್ರಗತಿ ನಿಕೇತನ ಹಾರೋಹಳ್ಳಿ ಶಾಲೆ ಆವರಣದಲ್ಲಿ ಬೇಸುಗೆ ಶಿಬಿರ ಹಮ್ಮಿಕೊಳ್ಳಲಾಗಿತ್ತು. 184 ಮಂದಿ ಸ್ಕೌಟ್ಸ್-ಗೈಡ್ಸ್ ಹಾಗೂ 12 ಸ್ಕೌಡರ್ ಮತ್ತು ಗೈಡರ್ಸ್ ಹಾಗೂ 122 ಇತರೆ ವಿದ್ಯಾರ್ಥಿಗಳು ಒಟ್ಟು 379 ಮಂದಿ ಭಾಗವಹಿಸಿದ್ದರು. ಈ ಶಿಬಿರದಲ್ಲಿ ಸ್ಕೌಟ್-ಗೈಡ್ ಚಟುವಟಿಕೆಗಳ ಜೊತೆಯಲ್ಲಿ, ಗೀತ ಗಾಯನ, ರಸಪ್ರಶ್ನೆ, ಏಕ ಪಾತ್ರಾಭಿನಯ, ನೃತ್ಯ, ಸಮುದಾಯ ಚಟುವಟಿಕೆ, ಪರಿಸರ ಸಂರಕ್ಷಣೆ, ಆಟೋಟಗಳು ಇತ್ಯಾದಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಭವ್ಯ ಶಿಬಿರಾಗ್ನಿ ಕಾರ್ಯಕ್ರಮದಲ್ಲಿ ಮಕ್ಕಳು, ಪೋಷಕರು, ಶಾಲಾ ಶಿಕ್ಷಕರು, ಸ್ಥಳೀಯ ಶಿಕ್ಷಕರು, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಗೋಪಾಲ್ ಕಾಂಬ್ಳೆ, ಜಿಲ್ಲಾ ಕಾರ್ಯದರ್ಶಿ ಭಾಗವಹಿಸಿ ಶಿಬಿರ ಯಶಸ್ವಿಗೊಳಿಸಿದರು. ಏಪ್ರಿಲ್ 08 ರಂದು ಸರ್ವಧರ್ಮ ಪ್ರಾರ್ಥನೆಯೊಂದಿಗೆ ಶಿಬಿರ ಮುಕ್ತಾಯ ಮಾಡಲಾಯಿತು.



## ಶಿವಮೊಗ್ಗ

* "ಭಾರತದಲ್ಲಿನ ಬಹುತ್ವವುಳ್ಳ ಸಮಾಜದಲ್ಲಿ ಹೆಚ್ಚಿನವರು ಎಲ್ಲ ಕ್ಷೇತ್ರಗಳಲ್ಲಿ ಅಸಮಾನತೆಯಿಂದ ಬಳಲುತ್ತಿದ್ದರು. ಇಂತಹ ಕಾಲಘಟ್ಟದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದಂತಹ ಶ್ರೇಷ್ಠ ಗ್ರಂಥವನ್ನು ರಚಿಸಿ ಸಾಮಾಜಿಕ ಪರಿವರ್ತನೆಗೆ ನಾಂದಿ ಹಾಡಿದ ಮಹಾನ್ ನಾಯಕ" ಎಂದು ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಎಸ್.ಜಿ. ಆನಂದ್ ಹೇಳಿದರು. ಭಾರತ್ ಸ್ಕೌಟ್-ಗೈಡ್ಸ್ ಜಿಲ್ಲಾ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ 135ನೇ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು. ಸ್ಕೌಟ್ ಕೇಂದ್ರ ಸ್ಥಾನಿಕ ಆಯುಕ್ತರಾದ ಶ್ರೀ ಬಿ. ವಿಜಯಕುಮಾರ್ ಅವರು ಮಾತನಾಡುತ್ತಾ, ಎಲ್ಲಾ ದೇಶದ ಸಂವಿಧಾನಕ್ಕಿಂತ ನಮ್ಮ ದೇಶದ ಸಂವಿಧಾನ ತುಂಬಾ ವಿಶೇಷವಾದದ್ದು ಅಂಬೇಡ್ಕರ್ ಅವರ ತತ್ವ ಆದರ್ಶ ಗುಣಗಳು ಹಾಗೂ ಆಡಳಿತಾತ್ಮಕ ಧೋರಣೆಯನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು" ಎಂದು ನುಡಿದರು. ಕಾರ್ಯಕ್ರಮದಲ್ಲಿ ಕೇಂದ್ರ ಸ್ಥಾನಿಕ ಆಯುಕ್ತರಾದ ಶ್ರೀ ಮಲ್ಲಿಕಾರ್ಜುನ್ ಕಾನೂರು, ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಚಂದ್ರಶೇಖರಯ್ಯ, ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ನಗರಾಭಿವೃದ್ಧಿ ಮಂಡಳಿ, ಬೆಂಗಳೂರು ಆದ ಡಾಕ್ಟರ್ ನಾಗೇಂದ್ರ ಹೊನ್ನಾಳಿ, ಜಿಲ್ಲಾ ಸಂಸ್ಥೆಯ ಕೇಂದ್ರ ಕಚೇರಿಯ ಸಿಬ್ಬಂದಿಗಳು, ವಿವಿಧ ಶಾಲೆಯ ಸ್ಕೌಟ್, ಕ್ಲಬ್, ಗೈಡ್, ಬುಲ್‌ಬುಲ್, ರೋವರ್ಸ್-ರೇಂಜರ್ಸ್ ಮೊದಲಾದವರು ಹಾಜರಿದ್ದರು.



* "ಮಕ್ಕಳಲ್ಲಿ ಸಕಾರಾತ್ಮಕ ಭಾವನೆಗಳನ್ನು ಮೂಡಿಸಿ ಉತ್ತಮ ವ್ಯಕ್ತಿತ್ವ ರೂಪಿಸುವಲ್ಲಿ ಬೇಸಿಗೆ ಶಿಬಿರಗಳು ಸಹಕಾರಿಯಾಗುತ್ತವೆ" ಎಂದು ಭಾರತ್ ಸ್ಕೌಟ್ಸ್-ಗೈಡ್ಸ್‌ನ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಶಕುಂತಲಾ ಚಂದ್ರಶೇಖರ್ ಹೇಳಿದರು. ಈಸೂರು ಸರ್ಕಾರಿ ಶಾಲೆಯಲ್ಲಿ ಭಾರತ್ ಸ್ಕೌಟ್ಸ್-ಗೈಡ್ಸ್ ಹಾಗೂ ಸ್ಥಳೀಯ ಸಂಸ್ಥೆಗಳ ಸಹಕಾರದಿಂದ ಆಯೋಜಿಸಿದ್ದ ಬೇಸಿಗೆ ಶಿಬಿರ ಉದ್ಘಾಟಿಸಿ ಮಾತನಾಡಿದರು. ಕೇಂದ್ರ ಸ್ಥಾನಿಕ ಆಯುಕ್ತ ಶ್ರೀ ಜಿ. ವಿಜಯಕುಮಾರ್ ಮಾತನಾಡಿ, "ಬೇಸಿಗೆ ರಜೆಯಲ್ಲಿ ಮಕ್ಕಳು ಅಮೂಲ್ಯವಾದ ಸಮಯವನ್ನು ಮೊಬೈಲ್, ಟಿ.ವಿ. ಹಾವಳಿಯಿಂದ ಹಾಳು ಮಾಡಿಕೊಳ್ಳುತ್ತಾರೆ. ಇಂತಹ ಶಿಬಿರಗಳಲ್ಲಿ ಪಾಲ್ಗೊಳ್ಳುವುದರಿಂದ ಧ್ಯಾನ, ಯೋಗ, ಗ್ರಾಮೀಣ ಕ್ರೀಡೆ ಸೇರಿದಂತೆ ವೈವಿಧ್ಯ ವಿಷಯಗಳ ಕಲಿಕೆಯಲ್ಲಿ ತೊಡಗಿಸಿಕೊಳ್ಳಬಹುದು. ಮಕ್ಕಳ ದೈಹಿಕ ಮತ್ತು ಮಾನಸಿಕ ಶಕ್ತಿ ವೃದ್ಧಿಯಾಗುತ್ತದೆ" ಎಂದು ಹೇಳಿದರು. ಶಿಕಾರಿಪುರ ತಾಲ್ಲೂಕು ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ ಶ್ರೀ ಪರಮೇಶ್ವರಯ್ಯ ಮಾತನಾಡಿ, "ಭಾರತ್ ಸ್ಕೌಟ್ಸ್-ಗೈಡ್ಸ್ ವತಿಯಿಂದ ಎಲ್ಲ ಕಡೆ ಬೇಸಿಗೆ ಶಿಬಿರಗಳು ಆಯೋಜನೆಗೊಂಡಿದ್ದು, ಶಾಲೆಯ ಎಸ್.ಡಿ.ಎಂ.ಸಿ. ಸಮಿತಿ, ಪೋಷಕರ ಸಹಕಾರ ಅತ್ಯಂತ ಮುಖ್ಯ" ಎಂದು ತಿಳಿಸಿದರು. ಎಸ್.ಡಿ.ಎಂ.ಸಿ. ಅಧ್ಯಕ್ಷ ಶ್ರೀ ಚಂದ್ರಶೇಖರ್, ಬುಲ್‌ಬುಲ್ ತರಬೇತಿ ಆಯುಕ್ತೆ ಶ್ರೀಮತಿ ಮೀನಾಕ್ಷಮ್ಮ ವಿವಿಧ ಕ್ಷೇತ್ರಗಳಲ್ಲಿ ವಿಜೇತರಾದವರಿಗೆ ಬಹುಮಾನ ನೀಡಿ ಗೌರವಿಸಿದ್ದರು. ಕೇಂದ್ರ ಸ್ಥಾನಿಕ ಆಯುಕ್ತ ಶ್ರೀ ಮಲ್ಲಿಕಾರ್ಜುನ್ ಕಾನೂರು ಹಾಗೂ ವಿದ್ಯಾರ್ಥಿಗಳು ಇದ್ದರು.



## ಶಿರಸಿ (ಉ.ಕ.)

* ತಾಲ್ಲೂಕಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಸುಗಾವಿಯಲ್ಲಿ ಸುಗಾವಿ ಮತ್ತು ನೆಹರು ಪ್ರೌಢ ಶಾಲೆ ಓಣಿಕೇರಿಯ ಸಂಯುಕ್ತ ಆಶ್ರಯದಲ್ಲಿ ಇತ್ತೀಚಿಗೆ ಬೇಸಿಗೆ ಶಿಬಿರ ನಡೆಯಿತು. ಮುಖ್ಯೋಪಾಧ್ಯಾಪಕ ಶ್ರೀ ಯಶವಂತ ಹೊನ್ನಾವರ್, ಗೈಡ್ ಕ್ಯಾಪ್ಟನ್ ಶ್ರೀಮತಿ ಸುಧಾ ಪಟಗಾರ, ಸ್ಕೌಟ್ ಮಾಸ್ಟರ್ ಶ್ರೀ ಬಿ.ಬಿ. ಮಾಲಿ ಪಾಟೀಲ್ ಶಿಬಿರ ಸಂಘಟಿಸಿದ್ದರು. ರಾಜ್ಯಪಾಲ ಪುರಸ್ಕಾರ ಪಡೆದ ಊರಿನ ವಿದ್ಯಾರ್ಥಿನಿ ಕು|| ದೀಪ್ತಿ ಭಾಗ್ವತ್ ಅವಳನ್ನು ಗೌರವಿಸಲಾಯಿತು. ಈ ಲರ್ನಿಂಗ್ ಮೂಲಕ ಸ್ಕೌಟ್ಸ್-ಗೈಡ್ಸ್‌ಗಳಿಗೆ ತರಬೇತಿ ನೀಡಲಾಯಿತು.

ಮಿಯಾರ್ಡ್ಸ್ ಚಂದನ ಆಂಗ್ಲ ಮಾಧ್ಯಮ ಶಾಲೆ ನರೇಬೈಲ್ ಶಿರಸಿಯಲ್ಲಿ ವಿಜಯಲಕ್ಷ್ಮಿ ಪಂಡಿತ್ ಗೈಡ್ ದಳದ ಜೊತೆಗೆ, ನೂತನವಾಗಿ ಕದಂಬ ಮತ್ತು ಮಯೂರವರ್ಮ ಸ್ಕೌಟ್ ದಳಗಳು ಹಾಗೂ ವರದಾ ಗೈಡ್ಸ್‌ದಳ ಇತ್ತೀಚೆಗೆ ಪ್ರಾರಂಭಗೊಂಡಿತು. ಜಿಲ್ಲಾ ಮುಖ್ಯ ಆಯುಕ್ತ ಶ್ರೀ ವಿ.ಹೆಚ್. ಭಟ್ಕಳ್, ಜಿಲ್ಲಾ ಗೈಡ್ಸ್ ಆಯುಕ್ತೆ ಶ್ರೀಮತಿ ಅಂಜನ ಹೆಗಡೆ, ಶಿರಸಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ



ಶ್ರೀ ಎನ್.ಎಸ್. ಭಾಗ್ವತ್, ಎ.ಎಸ್.ಓ.ಸಿ. ಶ್ರೀ ವೀರೇಶ್ ಮಾದರ್, ಆಡಳಿತ ಸಮಿತಿಯ ಕಾರ್ಯದರ್ಶಿ ಶ್ರೀ ಎಲ್.ಎಂ. ಹೆಗಡೆ, ಪ್ರೌಢ ಶಾಲಾ ಮುಖ್ಯಾಧ್ಯಾಪಕ ಶ್ರೀ ಸಿಂಧೂರ ಭಟ್, ಪ್ರಾಥಮಿಕ ಶಾಲಾ ಮುಖ್ಯಾಧ್ಯಾಪಕಿ ಶ್ರೀಮತಿ ಕಲ್ಪನಾ ಹೆಗಡೆ, ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ಶಶಿಕಲಾ ಧೀರನ್, ಶ್ರೀಮತಿ ಚಂದ್ರಾವತಿ ಪೂಜಾರಿ, ಸ್ಕೌಟ್ಸ್ ಮಾಸ್ಟರ್ ಶ್ರೀ ಆನಂದ ಹೆಗಡೆ, ಶ್ರೀ ರವೀಂದ್ರ ಹೆಗಡೆ ಉಪಸ್ಥಿತರಿದ್ದರು. ಗೌರವಾನ್ವಿತ ರಾಜ್ಯಪಾಲರಿಂದ ರಾಜ್ಯಪಾಲ ಪುರಸ್ಕಾರ ಪಡೆದ ವಿದ್ಯಾರ್ಥಿನಿ ಶ್ರೀಮತಿ ದೀಪ್ತಿ ಭಾಗ್ವತ್, ಸ್ಕೌಟ್ಸ್ ರಾಜ್ಯ ಪ್ರಶಸ್ತಿ ಪಡೆದ ಶ್ರೀ ವಿ.ಹೆಚ್. ಭಟ್ಕಳಾ ಹಾಗೂ ಶ್ರೀ ಎನ್.ಎಸ್. ಭಾಗ್ವತ್ ಅವರನ್ನು ಆಡಳಿತ ಸಮಿತಿ ಹಾಗೂ ಶಾಲೆಯ ವತಿಯಿಂದ ಗೌರವಿಸಲಾಯಿತು.

* ಏಪ್ರಿಲ್ 04 ರಿಂದ 05ರ ವರೆಗೆ ಶ್ರೀ ನಿಕೇತನ ಶಾಲೆಯಲ್ಲಿ 2024–25ನೇ ಸಾಲಿನ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಬೇಸಿಗೆ ಶಿಬಿರವನ್ನು ನಡೆಸಲಾಯಿತು. ಈ ಶಿಬಿರದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಬಿ.ಎಚ್. ಭಟ್ಕಳ, ಜಿಲ್ಲಾ ಮುಖ್ಯ ಆಯುಕ್ತರು (ಸ್ಕೌಟ್ಸ್) ಮತ್ತು ಗೈಡ್ಸ್‌ನ ಶ್ರೀಮತಿ ಅಂಜನಾ ಹೆಗಡೆ, ಜಿಲ್ಲಾ ಆಯುಕ್ತರು (ಗೈಡ್ಸ್) ಉಪಸ್ಥಿತರಿದ್ದರು. ಶ್ರೀ ಎನ್.ಎಸ್. ಭಾಗವತ್ ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ಶಿರಸಿ. ಶ್ರೀ ವಸಂತ್ ಭಟ್ಟ, ಪ್ರಾಂಶುಪಾಲರು ಶ್ರೀ ನಿಕೇತನ ಶಾಲೆ. ಶ್ರೀಮತಿ ವಸುಧಾ ಹೆಗಡೆ, ಉಪಪ್ರಾಂಶುಪಾಲರು ಶ್ರೀ ನಿಕೇತನ ಶಾಲೆ ಉಪಸ್ಥಿತರಿದ್ದರು. ಈ ಶಿಬಿರಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಚಂದ್ರಶೇಖರ್ ಎಸ್.ಸಿ., ಜಿಲ್ಲಾ ತರಬೇತಿ ಆಯುಕ್ತರು ಡಾ. ನವೀನ್ ಕುಮಾರ್ ಎ.ಜಿ., ರಾಜ್ಯ ಪ್ರತಿನಿಧಿ (ಸ್ಕೌಟ್) ಶ್ರೀಮತಿ ಚೇತನಾ ಪಾವಸ್ಕರ್, ಗೈಡ್ ಕ್ಯಾಪ್ಟನ್, ಶ್ರೀ ರಾಘವೇಂದ್ರ ಹೊಸೂರ್, ಸ್ಕೌಟ್ ಮಾಸ್ಟರ್, ಎಚ್‌ಡಬ್ಲ್ಯೂಬಿ, ಶ್ರೀ ಕಮಲಾಕರ್ ಪಟಗಾರ, ಸ್ಕೌಟ್ ಮಾಸ್ಟರ್ ಮತ್ತು ಶ್ರೀ ಹೇಮಂತ್ ಭಂಡಾರಿ ಅಡ್ವಾನ್ಸ್ ಸ್ಕೌಟ್ ಮಾಸ್ಟರ್ ಮಾಹಿತಿ ನೀಡಿದರು. ಶಾಲಾ ಆಡಳಿತ ಮಂಡಳಿಯವರು. ಈ ಶಿಬಿರಕ್ಕೆ ಎರಡು ದಿನದ ಮಧ್ಯಾಹ್ನದ ಉಪಹಾರದ ವ್ಯವಸ್ಥೆ ಮತ್ತು ಬಸ್ಸಿನ ವ್ಯವಸ್ಥೆಯನ್ನು ನೀಡಿ ಸಹಕರಿಸಿದ್ದರು. ಶಾಲಾ ಸಿಬ್ಬಂದಿ ವರ್ಗದವರು ಶಿಬಿರಾರ್ಥಿಗಳಿಗೆ ತಂಪು ಪಾನೀಯ, ಹಣ್ಣು, ಬಿಸ್ಕೆಟ್ ನೀಡಿ ಸಹಕರಿಸಿದರು. ಈ ಶಿಬಿರದ ಬಗ್ಗೆ ವಿದ್ಯಾರ್ಥಿಗಳಾದ ಶ್ರೀಮತಿ ಮೇಘನಾ, ಶ್ರೀ ಜಗದೀಶ್, ಶ್ರೀ ತೇಜಸ್ ಹಾಗೂ ಪ್ರಾರ್ಥನಾ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಶ್ರೀ ಬಸವರಾಜ್ ಹೊಸಮನಿ, ಸ್ಕೌಟ್ ಮಾಸ್ಟರ್ ಶ್ರೀ ನಿಕೇತನ ಶಾಲೆ ಶ್ರೀಮತಿ ದೀಪಾ ಜಿ. ಮಡಗಾಂಕರ, ಗೈಡ್ ಕ್ಯಾಪ್ಟನ್ ಶ್ರೀ ನಿಕೇತನ ಶಾಲೆ ಶಿಬಿರದ ಉಸ್ತುವಾರಿಯನ್ನು ವಹಿಸಿದ್ದರು.



* ಮಿಯಾರ್ಡ್ಸ್ ಚಂದನ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಏಪ್ರಿಲ್ 10 ಹಾಗೂ 11 ರಂದು ಸ್ಕೌಟ್ಸ್–ಗೈಡ್ಸ್‌ಗಳ ಬೇಸಿಗೆ ಶಿಬಿರ ನಡೆಯಿತು. ಏಪ್ರಿಲ್ 10 ರಂದು ಬೆಳಗ್ಗೆ 9.30ಕ್ಕೆ ನೊಂದಣಿ ನಂತರ ಧ್ವಜಾರೋಹಣದ ಮೂಲಕ ಶಿಬಿರ ಪ್ರಾರಂಭಗೊಂಡಿತು. ಸ್ಕೌಟ್ಸ್ ಜಿಲ್ಲಾ ಆಯುಕ್ತರಾದ ಶ್ರೀ ವಿ.ಎಚ್. ಭಟ್ಕಳ, ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಚಂದ್ರಶೇಖರ ಸಿ., ಮಿಯಾರ್ಡ್ಸ್ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಹೆಗಡೆ ಚಂದನ ಪ್ರೌಢ ಶಾಲೆಯ ಮುಖ್ಯಾಧ್ಯಾಪಕರಾದ ಶ್ರೀ ಸಿಂಧೂರ ಭಟ್ ಪ್ರಾಥಮಿಕ ವಿಭಾಗದ ಮುಖ್ಯ ಗುರುಮಾತೆಯರಾದ ಶ್ರೀಮತಿ ಕಲ್ಪನಾ ಹೆಗಡೆ ಶಿಕ್ಷಣ ಪ್ರೇಮಿ ಶ್ರೀ ವಿನಾಯಕ ಧೀರನ್ ಉಪಸ್ಥಿತರಿದ್ದರು. ಶಿಬಿರದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಶ್ರೀ ವಿ.ಎಚ್. ಭಟ್ಕಳರವರು "ಇಂತಹ ಶಿಬಿರದ ಮೂಲಕ ಮಕ್ಕಳಲ್ಲಿ ಸೇವಾ ಮನೋಭಾವ, ಉತ್ತಮ ವ್ಯಕ್ತಿತ್ವ ರೂಪುಗೊಳ್ಳಲು ಸಹಾಯಕವಾಗುತ್ತದೆ. ಶಿಬಿರ ಯಶಸ್ವಿಯಾಗಲಿ" ಎಂದು ಶುಭ ಹಾರೈಸಿದರು. ಶ್ರೀ ಚಂದ್ರಶೇಖರ ಸಿ.ಯವರು ನಾಯಕತ್ವ ಸಹಕಾರ ಮನೋಭಾವ ಬೆಳೆಸಿಕೊಂಡ ವ್ಯಕ್ತಿ ತನ್ನ ವ್ಯಕ್ತಿತ್ವದ ಮೂಲಕವೇ ಸಮಾಜದಲ್ಲಿ ಗುರುತಿಸಿಕೊಳ್ಳುತ್ತಾನೆ. ಹಣಕ್ಕಿಂತ ಗುಣಮೇಲು ಅಂತಹ ಗುಣಗಳನ್ನು ಎಳವೆಯಲ್ಲೇ ರೂಢಿಸಿಕೊಳ್ಳಲು ಸ್ಕೌಟ್ಸ್–ಗೈಡ್ಸ್ ತಿಳಿಸಿಕೊಡುತ್ತದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಶಾಲೆಯ ಮುಖ್ಯಾಧ್ಯಾಪಕರಾದ ಶ್ರೀ ಸಿಂಧೂರ ಭಟ್‌ರವರು, ಮಕ್ಕಳು ಶಿಸ್ತಿನಿಂದ ಜೀವನವನ್ನು ನಡೆಸುವ ಸಮಾಜದಲ್ಲಿ ಸತ್ಪ್ರಜೆಯಾಗಿ ರೂಪುಗೊಳ್ಳಲು ಶಿಬಿರ ಸಹಕಾರಿಯಾಗಲಿ ಎಂದು ಹಾರೈಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಚಂದ್ರಶೇಖರ, ಶ್ರೀ ಕಿರಣ್ ಫೆರ್ನಾಂಡಿಸ್ ಆಗಮಿಸಿದ್ದರು. ಸಾಯಂಕಾಲ ಪರಿಸರ ವೀಕ್ಷಣೆಗಾಗಿ ಹೊರ ಸಂಚಾರ ಏರ್ಪಡಿಸಲಾಗಿತ್ತು. ಸಂಜೆ ಶಿಬಿರಾಗ್ನಿ ಕಾರ್ಯಕ್ರಮ ನಡೆಯಿತು. ಹಿರಿಯ ಶಿಕ್ಷಕಿಯರಾದ ಶ್ರೀಮತಿ ದಿವ್ಯಾ ಹೆಗಡೆ, ಶ್ರೀಮತಿ ಕಲ್ಪನಾ ಹೆಗಡೆ ಭಾಸ್ಕರ ಹೆಗಡೆ, ಪಾಲುದಾರ ಶ್ರೀ ವಿಶ್ವನಾಥ ಹಿರೇಮಠ ಉಪಸ್ಥಿತರಿದ್ದರು. ಮರುದಿನ ಮುಂಜಾನೆ (ಏಪ್ರಿಲ್ 11 ರಂದು) 5.30ಕ್ಕೆ ಎದ್ದು ಬಿಪಿ ವ್ಯಾಯಾಮ ಯೋಗ ಮುಗಿಸಿ ಸ್ನಾನ ಮಾಡಿ ಉಪಹಾರ ಸೇವಿಸಿ ಬೆಳಗಿನ ತರಗತಿಗೆ ಹಾಜರಾದರು. ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ನವೀನಕುಮಾರ ಎ.ಜಿ., ಶ್ರೀಮತಿ ಚೇತನಾ ಪಾವಸ್ಕರ್ ಭಾಗವಹಿಸಿದ್ದರು. ಸಾಯಂಕಾಲ ಸಮಾರೋಪ ಸಮಾರಂಭದಲ್ಲಿ ಮಿಯಾರ್ಡ್ಸ್ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿಗಳಾದ ಶ್ರೀ ಎಲ್.ಎಂ. ಹೆಗಡೆ ಮುಖ್ಯಾಧ್ಯಾಪಕರಾದ ಶ್ರೀ ಸಿಂಧೂರ ಭಟ್ ಶ್ರೀಮತಿ ಕಲ್ಪನಾ ಹೆಗಡೆ, ಡಾ. ನವೀನ್ ಕುಮಾರ್, ಶ್ರೀಮತಿ ಚೇತನಾ ಪಾವಸ್ಕರ್, ಶ್ರೀ ವಿನಾಯಕ ಧೀರನ್ ಉಪಸ್ಥಿತರಿದ್ದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಎಲ್.ಎಂ. ಹೆಗಡೆಯವರು ಮಾತನಾಡಿ, "ಸ್ಕೌಟ್ಸ್ ಅಂದರೆ ಸೇವೆ, ನಿಷ್ಠೆ, ಆತ್ಮವಿಶ್ವಾಸಕ್ಕೆ ಪ್ರತೀಕ. ಮಕ್ಕಳು ಒಳ್ಳೆಯ ವಿದ್ಯಾಭ್ಯಾಸ ಪಡೆದು ಉತ್ತಮ ಕೆಲಸಕ್ಕೆ ಸೇರಿ ಸ್ವಾಭಿಮಾನದಿಂದ ಬದುಕುತ್ತಾ ಮಾಡುವ ಕೆಲಸದಲ್ಲಿ ಹಾಗೂ ಸಮಾಜದಲ್ಲಿ ಸೇವೆಗೆ ಮುಂದಾಗಬೇಕು ಯಾವುದೇ ಕೆಲಸವನ್ನಾದರೂ ನಿಷ್ಠೆಯಿಂದ ಮಾಡಬೇಕು ಎಂದು ಕಿವಿ ಮಾತು ಹೇಳಿದರು." ಸ್ಕೌಟ್ಸ್ ಮಾಸ್ಟರ್‌ಗಳಾದ ಶ್ರೀ ಆನಂದ ಹೆಗಡೆ ಶ್ರೀ ರವೀಂದ್ರ ಭಟ್ ಹಾಗೂ ಗೈಡ್ಸ್ ಕ್ಯಾಪ್ಟನ್‌ಗಳಾದ ಶ್ರೀಮತಿ ಶ್ರೀಕಲಾ ಧೀರನ್, ಶ್ರೀಮತಿ ಚಂದ್ರಾವತಿ ಪೂಜಾರಿ ಶಿಬಿರವನ್ನು ವ್ಯವಸ್ಥಿತವಾಗಿ ಆಯೋಜಿಸಿದ್ದರು.



## ಉಡುಪಿ

* ಫೆಬ್ರವರಿ 25 ರಂದು ಕಾಪು ಹೊಸ ಮಾರಿಗುಡಿಯ ಬ್ರಹ್ಮಕಲಶೋತ್ಸವದಲ್ಲಿ ದಿನದ ಸೇವಾ ಶಿಬಿರದಲ್ಲಿ 101 ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿ ಸೇವೆಯನ್ನು ಮಾಡಿರುತ್ತಾರೆ.



* ಫೆಬ್ರವರಿ 26 ರಂದು ಕಾಪು ಹೊಸ ಮಾರಿಗುಡಿಯ ಬ್ರಹ್ಮಕಲಶೋತ್ಸವದಲ್ಲಿ ಎರಡನೇ ದಿನದ ಸೇವಾ ಶಿಬಿರದಲ್ಲಿ 95 ವಿದ್ಯಾರ್ಥಿಗಳು ಭಾಗವಹಿಸಿ ಸೇವೆಯನ್ನು ಮಾಡಿರುತ್ತಾರೆ.

* ಮಾರ್ಚ್ 05 ರಂದು ಕಾಪು ಹೊಸ ಮಾರಿಗುಡಿಯ ಬ್ರಹ್ಮಕಲಶೋತ್ಸವದಲ್ಲಿ 9ನೇ ದಿನದ ಸೇವಾ ಶಿಬಿರದಲ್ಲಿ 270 ರೋವರ್ಸ್, ರೆಂಜರ್ಸ್‌ಗಳು ಸೇವೆಯನ್ನು ಮಾಡಿರುತ್ತಾರೆ.

* ಏಪ್ರಿಲ್ 13 ರಂದು ಮಲ್ಪೆ ಬೀಚ್‌ನಲ್ಲಿ ರೋಟರೆಕ್ಟ್ ಕ್ಲಬ್ ಹಾಗೂ ಲಿಯೋ ಕ್ಲಬ್ ಅವರ ಸಹಯೋಗದಲ್ಲಿ ಸ್ವಚ್ಛತಾ ಕಾರ್ಯಕ್ರಮವು ನಡೆಯಿತು. ಈ ಕಾರ್ಯಕ್ರಮದಲ್ಲಿ



ಮಹಿಳಾ ಕಾಲೇಜಿನ ರಾಜ್ಯ ಪುರಸ್ಕಾರ್ ರೇಂಜರ್‌ಗಳು ಹಾಗೂ ಶಿಕ್ಷಕರು ಭಾಗವಹಿಸಿದ್ದರು.

## ವಿಜಯನಗರ

* ಜಿಲ್ಲಾ ಸಂಸ್ಥೆ ವಿಜಯನಗರ ಹಾಗೂ ಡಿಎವಿ ಪಬ್ಲಿಕ್ ಶಾಲೆ ಇವರ ಸಂಯುಕ್ತ ಆಶ್ರಯದಲ್ಲಿ ಬೇಸಿಗೆ ಶಿಬಿರವನ್ನು ಉದ್ಘಾಟಿಸಲಾಯಿತು. ಡಾ. ಹರಿಪ್ರಸಾದ್ ಆನೆಗುಂದಿ, ಪ್ರಭಾರಿ ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ, ಆಸ್ಪತ್ರೆ, ವಿಜಯನಗರ ಇವರು ಗಿಡಕ್ಕೆ ನೀರುಣಿಸುವ ಮೂಲಕ ಉದ್ಘಾಟಿಸಿದರು. ಅವರು ತಮ್ಮ ಉದ್ಘಾಟನಾ ನುಡಿಯಲ್ಲಿ ಶಿಸ್ತಿಗೆ ಹೆಸರುವಾಸಿಯಾದ ಸ್ಕೌಟ್ ಸಂಸ್ಥೆ ಮತ್ತು ಅದರ ಕಾರ್ಯಚಟುವಟಿಕೆಗಳ ಬಗ್ಗೆ ಮಾತನಾಡಿ ಶುಭಕೋರಿದರು. ಶ್ರೀ ವಾಲಿಪ್ರಮೋದ್, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಉಪಕರಣಗಳನ್ನು ತಂದು ಅವುಗಳನ್ನು ಹೇಗೆ ಉಪಯೋಗಿಸಬೇಕು ಎಂಬ ಪ್ರಾತ್ಯಕ್ಷಿಕೆಗಳನ್ನು ಮಾಡಿ ತೋರಿಸಿದರು. ನಾವು ಮನೆಯಲ್ಲಿ ಬಳಸುವ ಎಲ್‌ಪಿಜಿ ಗ್ಯಾಸ್ ಸಿಲಿಂಡರ್‌ಗೆ ಬೆಂಕಿ ತಗುಲಿದಾಗ ಅದನ್ನು ಹೇಗೆ ನಂದಿಸಬೇಕು ಎಂಬುದನ್ನು ಸ್ವತ ಸ್ಕೌಟ್ಸ್–ಗೈಡ್ಸ್ ಗಳಿಂದಲೇ ಮಾಡಿಸಿ ಮಕ್ಕಳಲ್ಲಿ ಧೈರ್ಯ ತುಂಬಿದರು. ನಂತರ ಅಗ್ನಿಶಾಮಕ ಸಿಬ್ಬಂದಿಗಳು ಎಲ್ಲಾರು ಸೇರಿ ಫೈರ್ ಇಂಜಿನ್ ಸಹಾಯದಿಂದ ದೊಡ್ಡ ಬೆಂಕಿಗಳನ್ನು ಆರಿಸುವ ಪ್ರಾತ್ಯಕ್ಷಕೆಯನ್ನು ತೋರಿಸಿದರು. ಅತಿಥಿಗಳಾಗಿ ಆಗಮಿಸಿದ ಶ್ರೀ ಟಿ.ಎಂ. ಚಂದ್ರಶೇಖರ್, ನಿರ್ದೇಶಕರು, ಟಿಎಂಎಇಎಸ್ ಅಕಾಡೆಮಿ ಆಫ್ ಸೈನ್ಸ್ ಅಂಡ್ ಕಾಮರ್ಸ್ ಇವರು ಮಾತನಾಡಿ, ಸ್ಕೌಟ್ ಶಿಕ್ಷಣದಿಂದ ದೊರಕುವ ಲಾಭಗಳ ಬಗ್ಗೆ ತಿಳಿಸಿದರು. ಪ್ರಾರಂಭದಲ್ಲಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಪಿ. ಮಂಜುನಾಥಪ್ಪ ಇವರು ಮಾತನಾಡಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಈ ಶಾಲೆಯ ಪ್ರಾಚಾರ್ಯರಾದ ಶ್ರೀ ಅಶುತೋಷರವರು ತಮ್ಮ ಅಧ್ಯಕ್ಷತೆಯ ನುಡಿಯಲ್ಲಿ ಮಕ್ಕಳ ಪ್ರಗತಿಗೆ ಸಂತೋಷ ವ್ಯಕ್ತಪಡಿಸಿದರು. ಕೊನೆಯಲ್ಲಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ತಿಪ್ಪೇಸ್ವಾಮಿ ವಂದಿಸಿದರು.





## BBMP District

The BBMP District Association of the Bharat Scouts and Guides organised a meeting of Heads of Institution and the Unit Leaders on 24th April 2025 at Kondajji Basappa Auditorium, Bengaluru.

Sri Lokesh, Deputy Director(Education) BBMP and the District Chief Commissioner BBMP District Association presided over the Meeting in the presence of Sri M.A. Chellaiah, Programme Advisor.

Sri Kumar, District Secretary, Sri Venkata Krishnaiah, District Treasurer, Sri M. Munishamappa, Senior Asst. Director and other officers were present.

The meeting was organised in connection with enrolling more students in the Scout-Guide Movement and to review the activities, to strengthen the District for the all-round development, to introduce Scouts-Guides Units to more Schools and Colleges in BBMP, to organise Information Course for the Heads of Institution and Basic Course for Bunny, Cub, Bulbul, Scout, Guide, Rover and Ranger Sections during the Academic year 2025-26 and also to organise a Summer Camp from 22nd to 25th May 2025 at Doddaballapura, Bengaluru Rural District.



## ಬೇಸಿಗೆ ಶಿಬಿರ

ಕೈಯಲಿ ಕೋಲು ಹೆಗಲಲಿ ಚೀಲ
ಹೊರಟೆವು ಶಿಸ್ತಿನಲಿ ಕಲಿಯಲು ಕೌಶಲ
ಮನಸಲಿ ದೃಢತೆ, ದೇಹದಲಿ ಬಲ
ಸಾಧಿಸುವೆವು ಕೈಲಾದಷ್ಟು ಆತ್ಮವಿಶ್ವಾಸದಲಿ
ಕಿರಿಯ ಮರಿಗಳು ನಾವೇ ಕಬ್ಸ್– ಬುಲ್‌ಬುಲ್ಸ್ ॥

ಕಂಪಾಸ್, ಮ್ಯಾಪಿಂಗ್ ಅಂದಾಜು ಅಳತೆ
ಕುಕ್ಕಿಂಗ್ ಸಿಂಗಿಂಗ್ ಪರಿಸರ ಮಾನ್ಯತೆ
ಟವರ್ ಬ್ರಿಡ್ಜ್ ಗ್ಯಾಡ್ಜೆಟ್ ಅಗ್ರಗಾಮಿತ್ವತೆ
ದೇಶಭಕ್ತಿ ಭಾವೈಕ್ಯತೆ ಪರಸ್ಪರ ಭ್ರಾತೃತ್ವತೆ
ಸ್ಕೌಟ್ಸ್–ಗೈಡ್ಸ್ ಸದಾ ಸಿದ್ಧ ನಮ್ಮ ವಿನಯತೆ ॥

ಚಿಂತನ ಮಂಥನ ಉತ್ತಮ ನಿರ್ಧಾರ ಯೌವ್ವನದಲಿ
ಹೈಕಿಂಗ್ ಸೈಕ್ಲಿಂಗ್ ಟ್ರಕ್ಕಿಂಗ್ ಸಾಹಸದ ದಾರಿಯಲಿ
ಯೋಗತ್ಯಾಗ ಆರೋಗ್ಯ ಸುಕೃತ ಪಥದಲಿ
ರೋವರ್ಸ್–ರೇಂಜರ್ಸ್ ನಾವು ಭ್ರಾತೃತ್ವದಲಿ
ಸೇವೆಯೇಧ್ಯೇಯ ಪರೋಪಕಾರ ವಿನಯದಲಿ ॥

ನನ್ನ ನಾಯಕ ಶಿಕ್ಷಕರೇ ಆದರ್ಶ
ಅವರಿಂದಲೇ ಕಲಿತದ್ದು ನಗುನಗುತಾ ಮಾನವ ಮೌಲ್ಯಗಳ
2025ರ ಬೇಸಿಗೆ ಶಿಬಿರದ ಹೊಂಬೆಳಕಿನ ಅಂಗಳ ॥

**ಮಂಜುಳ .ಸಿ**
ರಾಜ್ಯ ಸಂಘಟನಾ ಆಯುಕ್ತರು (ಗೈಡ್)
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

# ಹೊರಸಂಚಾರಗಳಿಗೆ ಪ್ರಕೃತಿ ಒಡ್ಡುವ ಸವಾಲುಗಳು-7

## ಕಂಪಾಸ್ : ದಿಕ್ಕುಕೆಡಲು ಬಿಡದ ಮಿತ್ರ

– ಎಂ.ಎನ್. ಷಡಕ್ಷರಿ
ಜಿಲ್ಲಾ ಮುಖ್ಯ ಆಯುಕ್ತರು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಚಿಕ್ಕಮಗಳೂರು



**"Afool and light hear tired I take to the open road, Healthy, free, the world before me, the long brown path before me leading wherever I choose".**
**Walt Whitman.**

**ಎಳೆಯರೊಡನೆ ಮೊದಲ ಹೊರಸಂಚಾರ:**

ಕೊಂಡಜ್ಜಿಯ ತರಬೇತಿ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರಕ್ಕೆ ನಮ್ಮ ಶಾಲೆಯಿಂದ ಎಂಟು ಸ್ಕೌಟ್‌ಗಳನ್ನು ಕಳುಹಿಸಲಾಗಿತ್ತು. ಟೆಂಟ್‌ನಲ್ಲಿ ಮಲಗುವ ಮೊದಲ ಅನುಭವವಾದ್ದರಿಂದ ಎಲ್ಲರಿಗೂ ಒಂದು ರೀತಿಯ ಉತ್ಸಾಹ, ಆದರೆ ಒಬ್ಬ ಮಾತ್ರ ಹೆದರಿಕೊಂಡು ಅಳುತ್ತಾ ಕುಳಿತಿದ್ದ. ಅಪ್ಪನಿಗೆ ದೂರವಾಣಿ ಕರೆ ಮಾಡಿ, ನನಗೆ ಇಲ್ಲಿರಲಿಕ್ಕೆ ಆಗಲ್ಲ ಅಂತ ಹಟಮಾಡಿದ, ಅವರಪ್ಪ ರಾತ್ರೋರಾತ್ರಿ ಚಿಕ್ಕಮಗಳೂರಿನಿಂದ ಕೊಂಡಜ್ಜಿಗೆ ಬಂದು ಅವನನ್ನು ವಾಪಾಸ್ ಕರೆದುಕೊಂಡು ಹೋದರು.

ಶಾಲಾ ಮಟ್ಟದಲ್ಲಿ ಪ್ರತಿ ವರ್ಷ ಮಕ್ಕಳನ್ನು ಮೂರು ದಿನಗಳ ಬೇಸಿಗೆ ಶಿಬಿರಕ್ಕಾಗಿ ಕರೆದೊಯ್ಯುವುದು ವಾಡಿಕೆ. ಈ ಬಗ್ಗೆ ಸುತ್ತೋಲೆ ಕಳುಹಿಸಿದ ಕೂಡಲೇ ಕೆಲವು ಪೋಷಕರು "ನಾನು ನನ್ನ ಮಗಳನ್ನು/ಮಗನನ್ನು ಕಳುಹಿಸುವುದಿಲ್ಲ ಏಕೆಂದರೆ ಅವನು ಯಾವತ್ತೂ ಮನೆಯಿಂದ, ನಮ್ಮಿಂದದೂರ ಹೋಗಿಲ್ಲ ಎನ್ನುವ ಅವಲತ್ತು ಯಾವಾಗಲೂ ಒಂದು ಮೊದಲ ಪ್ರಯತ್ನವಾಗಲೇ ಬೇಕಲ್ಲವೇ? ಅವರು ಒಂದು ಅರ್ಥವಾಗಲೇ? ಅವರು ಒಂದು ಅರ್ಥಕೊಳ್ಳುವುದಿಲ್ಲ. ಒಬ್ಬ ಸ್ಕೌಟ್ ಮಾಸ್ಟರ್ ಅಥವಾ ಗೈಡ್ ಕ್ಯಾಪ್ಟನ್ ಇಷ್ಟೊಂದು ಮಕ್ಕಳ ಜವಾಬ್ದಾರಿ ಹೊತ್ತುಕೊಂಡು ಅವರಿಗೆ ಒಂದು ಹೊಸ ಅನುಭವ ನೀಡುವ ಧೈರ್ಯ ಮಾಡುತ್ತಿರುವುದು ಅದೆಂತಹ ಸಾಹದ ಎನ್ನುವುದು.

"A successful man is one who has failed several times" ಅನ್ನುವ ಹಾಗೆ ಧೈರ್ಯವಂತರಿಗೆ ಹಾಗೂ ತನ್ನನ್ನು ಅಪಾಯಕ್ಕೆ ಒಡ್ಡಿಕೊಳ್ಳದವರು ಜೀವನದ್ಲಿ ಏನೂ ಸಾಧಿಸಲಾರ.

**ಮಕ್ಕಳೊಂದಿಗೆ ಮೊದಲ ಪಯಣ (ಕ್ಯಾಂಪ್ ಹೈಕ್):** ಎಳೆಯರ ಮೊದಲ ಹೊರಸಂಚಾರ ಅತ್ಯಂತ ಸಂತೋಷಭರಿತವಾಗಿರಬೇಕು. ಈ ಕೆಳಕಂಡ ಕೆಲವು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳುವುದು ಉತ್ತಮ.



* ಎಳೆಯ ಶಕ್ತಿಗೆ ಅನುಸಾರವಾಗಿ ಹಾಗೂ ಕಡಿಮೆ ಸಮಯದ್ದಕ್ಕೂ ಕುತೂಹಲಕಾರಿ ವಿಷಯಗಳನ್ನು ಗಮನಿಸಿಕೊಂಡು ನಿಧಾನವಾಗಿ ಸಾಗಬೇಕು. ಉದಾ : ಮೀನು ಹಿಡಿಯುತ್ತಿರುವ ಮಿಂಚುಳ್ಳಿ (King Fisher), ಹಣ್ಣು ತಿನ್ನುತ್ತಿರುವ ಗಿಳಿಗಳು ಹೀಗೆ.
* ಪ್ರಾರಂಭಕ್ಕೆ ಮುಂಚೆ ಕ್ರಮಿಸಲಿರುವ ಜಾಗದ ಒಂದು ನಕಾಶೆ ತೋರಿಸಿ ಮಾರ್ಗವನ್ನು ವಿವರಿಸಿ, ಗಮನಿಸಬೇಕಾದ ಹೆಗ್ಗುರುತು (Land Mark) ಗಳನ್ನು ತಿಳಿಸುವುದು ಸೂಕ್ತ.
* ಮಕ್ಕಳಿಗೆ ಅವರದೇ ನಿಧಾನಗತಿಯಲ್ಲಿ ಸುತ್ತಲಿನ ಸೊಭಗನ್ನು ಸವಿಯುತ್ತಾ ಸಾಗಲು ಅವಕಾಶವಿರಬೇಕು (ಅವಕಾಶಬೇಡ)
* ಕೆಲವು ಮಕ್ಕಳು ಹಿಂದುಳಿರೆ ಅವರಿಗೆ ವೇಗವಾಗಿ ಸಾಗಿ ಎಂದು ಹೇಳುವುದರ ಬದಲು ಇತರರನ್ನು ನಿಧಾನವಾಗಿ ಗುಂಪಿಪನಲ್ಲಿ ಚಲಿಸಲು ಹೇಳುವುದು ಸೂಕ್ತ. ಸಮಯ ಎಷ್ಟು ಬೇಕಾದ ಬಹುದೆಂದು ಮೊದಲೇ ಆಲೋಚಿಸಿ ಕತ್ತಲಾಗುವುದರೊಳಗೆ ಗುರಿತಲುಪುವುದು ಅವಶ್ಯಕ.
* ಮಕ್ಕಳ ಸುರಕ್ಷತೆ ಬಗ್ಗೆ ಸದಾ ಎಚ್ಚರವಿರಲಿ. ಕೈಗೊಳ್ಳಲಾಗುವ ಎಲ್ಲ ಚಟುವಟಿಕೆಗಳನ್ನೂ ಹಾಗೂ ದಾರಿಯಲ್ಲಿ ಇರಬಹುದಾದ ಅಪಾಯಗಳ ಬಗ್ಗೆ ಎಳೆಯರಿಗೆ ಮೊದಲೇ ತಿಳಿಹೇಳಬೇಕು. ಉದಾಹರನೆಗೆ ದಾರಿಯಲ್ಲಿ ದಾಟಬೇಕಾದ ಹಳ್ಳ, ಬೆಂಕಿಯ ಸಾಧ್ಯತೆಗಳು, ಬಂಡೆಗಳ ಮೇಲೆ ಸಾಗುವಾಗ ತೆಗೆದುಕೊಳ್ಳಬೇಕಾದ ಜಾಗರೂಕತೆ ಇತ್ಯಾದಿ. ಇವೆಲ್ಲವನ್ನೂ ಅವರ ಗಮನಕ್ಕೆ ತರಬೇಲೇ ಹೊರತು ಹೆದರಿಕೆ ಹುಟ್ಟಿಸಬಾರದು.
* ದಾರಿಯುದ್ದಕ್ಕೂ ಆಸಕ್ತಿ ಹುಟ್ಟಿಸುವಂತಹ ಆಟಗಳನ್ನು ಅಳವಡಿಸಿಕೊಳ್ಳುವುದು ಒಬ್ಬ ಉತ್ತಮ ನಾಯಕನ ಗುಣ. ಪ್ರಕೃತಿಯ ಸೋಜಿಗಗಳನ್ನು ಗಮನಿಸುವ ಹಾಗೂ ಆಸ್ವಾದಿಸುವ ಗುಣಗಳನ್ನು ಮಕ್ಕಳಿಗೆ ಬೆಳೆಸುವುದಕ್ಕೆ ಇದೊಂದು ಅದ್ಬುತ ಅವಕಾಶ. ಉದಾಹರಣೆ: ದಾರಿಯುದ್ದಕ್ಕೂ ಕಾಣಿಸುವ ಪಕ್ಷಿಗಳ ಪಟ್ಟಿ ಮಾಡುವುದು, ಇರುವೆಗಳ ಸಾಲನ್ನು ಗಮನಿಸುವುದು, ಕೆರೆಯ ದಡದಲ್ಲಿರುವ ಕಪ್ಪೆಗಳು, ವಿವಿಧ ಮರಗಳ ತೊಗಟೆಗಳಲ್ಲಿ ಕಾಣಬರುವ ವ್ಯತ್ಯಾಸ........... ಹೀಗೆ.
* ಸಾಗುವಾಗ – ದಾರಿಯಲ್ಲಿ ವಿಶ್ರಮಿಸುವಾಗ, ಮಕ್ಕಳಿಗೆ ಆರೋಗ್ಯಕರ ತಿನಿಸುಗಳನ್ನು ನೀಡುವುದು (ಒಣದ್ರಾಕ್ಷಿ, ಕಿತ್ತಲೆ ಹಣ್ಣು, ಹುರಿದಕಡಲೆಬೀಜ.....ಇತರೆ)

  ವಿ.ಸೂ :– ಪ್ಲಾಸ್ಟಿಕ್ ಹೊದಿಕೆ ಅಥವಾ ಕವರ್‌ನಲ್ಲಿ ಬರುವ ತಿನಿಸುಗಳನ್ನು ನಿಷೇದಿಸುವುದು ಸೂಕ್ತ.
* ಮಕ್ಕಳ ಮಾತುಗಳನ್ನು ತಾಳ್ಮೆಯಿಂದ ಕೇಳಿಸಿಕೊಂಡು ಅವರ ಪ್ರಶ್ನೆಗಳಿಗೆ ಉತ್ತರಿಸುವುದು, ಅವರಗ್ರಹಣ ಶಕ್ತಿಗಿಂತ ತುಸುಹೆಚ್ಚು ಮಾಹಿತಿ ನೀಡುವುದು, ಅವರಿಗೆ ಪ್ರಕೃತಿಯ ಬಗ್ಗೆ ಕುತೂಹಲ ಮೂಡಿಸಲು ಸಹಾಯವಾಗುತ್ತದೆ. "Listen to the Silence" ಎನ್ನುವ ಹಾಗೆ ಅವರಿಗೆ ಪ್ರಕೃತಿಯ ಧ್ವನಿಗಳನ್ನು ನಿಶ್ಯಬ್ದವಾಗಿ ಆಲಿಸುವ ಅಬ್ಯಾಸ ಮೂಡಿಸಬೇಕಷ್ಟೆ.
* ಹೊರಸಂಚಾರದ ಮುಖ್ಯ ಗುರಿಯೇನು ಎನ್ನುವುದನ್ನು ಸ್ಕೌಟ್, ಗೈಡ್‌ಗಳಿಗೆ ಮುಂಚೆಯೇ ಮನವರಿಕೆ ಮಾಡಿಕೊಟ್ಟಿರುವುದು ಅವಶ್ಯಕ.

**ಗಮನದಲ್ಲಿಡಬೇಕಾದ ಕೆಲವು ಅಂಶಗಳು**

**ಉಡುಪು:** ನಿತ್ಯದ ಉಡುಪಿನ ಮೇಲೆ ಒಂದು ಮೇಲು ಹೊದಿಕೆ (ಜಾಕೆಟ್) ಧರಿಸುವುದು ಕ್ಷೇಮ, ಸೆಖೆಯಾದರೆ ತೆಗೆಯುವಂತಿರಬೇಕು. ಮಳೆಯ ಸೂಚನೆಯುದ್ದಲ್ಲಿ ಒಂದು ಹಗುರವಾದ ರೇಯಿನ್ ಕೋಟ್ ಹಾಗೂ ಬಿಸಿಲು ತಡೆದುಕೊಳ್ಳುವ ಪೀ ಕ್ಯಾಪ್ ಅವಶ್ಯಕ.

**ಪಾದರಕ್ಷೆ:** ವಾತಾವರಣಕ್ಕೆ ತಕ್ಕಂತಹ ಮತ್ತು ಅಭ್ಯಾಸವಿರುವ, ರಬ್ಬರ್ ತಳವಿರುವ ಹಗುರ ಪಾದರಕ್ಷೆ ಉತ್ತಮ.

**ಬೆನ್ನುಚೀಲ:** ಬಾಲಕರ ವಯಸ್ಸಿಗೆ ತಕ್ಕ ಹಾಗೆ ಬೆನ್ನು ಚೀಲವಿರಬೇಕು. ಸಾಮಾನ್ಯವಾಗಿ ಮಗುವಿನ ಶೇಖಡ 20% ತೂಕವಿರಬೇಕು ಬೆನ್ನುಚೀಲ, ಎಲ್ಲಾ ವಸ್ತುಗಳನ್ನು ತುಂಬಿದ ಮೇಲೆ. ತನ್ನ ಪರಿಕರಗಳೊಂದಿಗೆ ಗುಂಪಿನ ಯಾವುದಾದರೊಂದು ವಸ್ತುವಿನ ಜವಾಬ್ದಾರಿಯನ್ನು ವಹಿಸುವುದು ಉತ್ತಮ.

ವಿ.ಸೂ:– ಪ್ರತಿ ಬಾರಿಯೂ ದಳನಾಯಕ/ ನಾಯಕಿಯು ಇದು ತನ್ನ ಮೊದಲ ಪ್ರಯತ್ನವೇನೋ ಎನ್ನುವಷ್ಟು ಉತ್ಸಾಹ, ಜಾಗರೂಕತೆ ಹಾಗೂ ಜಾಗರೂಕತೆಯಿಂದ ಸಿದ್ದರಾಗಬೇಕು.





ಏಪ್ರಿಲ್ 22 ರಂದು ಜಮ್ಮು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಅಮಾಯಕ ದೇಶವಾಸಿಗಳನ್ನು ಉಗ್ರರು ಅಮಾನುಷವಾಗಿ ಹತ್ಯೆ ಮಾಡಿದ್ದರಿಂದ ಇಡೀ ದೇಶವೇ ದುಃಖಿತವಾಗಿದೆ. ಸಂತ್ರಸ್ತ ಕುಟುಂಬದವರ ದುಃಖದೊಂದಿಗೆ ಇಡೀ ದೇಶವೇ ನಿಂತಿದೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆ ಹಾಗೂ ಮೈಸೂರು ಜಿಲ್ಲಾ ಸಂಸ್ಥೆಯ ಸಹಭಾಗಿತ್ವದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ನಾಯಕತ್ವದಲ್ಲಿ ಏಪ್ರಿಲ್ 27 ರಂದು ಸಂಜೆ 7.00 ರಿಂದ 8.00 ಗಂಟೆಗಳವರೆಗೆ ಮೈಸೂರಿನ ಗೋಕುಲಂ ಪರಿಸರದಲ್ಲಿ ಕ್ಯಾಂಡಲ್ ಮಾರ್ಚ್ ಮೂಲಕ ಮೃತರ ಆತ್ಮಕ್ಕೆ ಚಿರಶಾಂತಿ ಕೋರಲಾಯಿತು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಶ್ರೀ ಗಂಗಪ್ಪ ಗೌಡ, ಮೈಸೂರು ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ಪುಷ್ಪವಲ್ಲಿ, ಜಿಲ್ಲಾ ಕಾರ್ಯದರ್ಶಿ ಶ್ರೀ ಅಬ್ದುಲ್ ಜಮೀಲ್, ರಾಜ್ಯ ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಮತ್ತು ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಶ್ರದ್ಧಾಂಜಲಿ



ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರು, ರಾಜ್ಯ ಸಂಸ್ಥೆ ಉಪಾಧ್ಯರು ಹಾಗೂ ಬೆಳಗಾವಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಗಜಾನನ ಮನ್ನಿಕೇರಿ ಅವರ ಮಾತೃಶ್ರೀರವರಾದ **ಶ್ರೀಮತಿ ಬಸಲಿಂಗಮ್ಮ ಬಸಲಿಂಗಪ್ಪ ಮನ್ನಿಕೇರಿ** ಅವರು 16 ಏಪ್ರಿಲ್ 2025 ರಂದು ಬೆಳಗಾವಿ ಜಿಲ್ಲೆ ಗೋಕಾಕ್ ತಾಲ್ಲೂಕು ಮಮದಾಪುರ ಗ್ರಾಮದಲ್ಲಿ ನಿಧನರಾದರು. ಶತಾಯುಷಿಗಳಾದ ಇವರು 100 ವರ್ಷ ಪೂರೈಸಿದ್ದರು. ಇವರು ನಾಲ್ವರು ಗಂಡು ಮಕ್ಕಳು, ಮೂವರು ಹೆಣ್ಣು ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ.



**ಶ್ರೀ ಶರಣಪ್ಪ ವಿ. ಉಮರಗಿ,** ಕಾರ್ಯಾದರ್ಶಿ, ಸ್ಥಳೀಯ ಸಂಸ್ಥೆ ಮಾಣಿ, ದಕ್ಷಿಣ ಕನ್ನಡ ಜಿಲ್ಲೆ ಇವರು ಏಪ್ರಿಲ್ 9, 2025 ರಂದು ನಿಧನರಾದರು. ಇವರಿಗೆ 59 ವರ್ಷ ವಯಸ್ಸಾಗಿತ್ತು. ಶ್ರೀಯುತರ ದ.ಕ. ಜಿಲ್ಲಾ ಪಾಟ್ರಕೋಡಿ ಶಾಲೆಯ ಮುಖ್ಯ ಶಿಕ್ಷಕರಾಗಿದ್ದು ಸ್ಕೌಟ್ಸ್-ಗೈಡ್ಸ್ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

ಇವರು ತಮ್ಮ ಧರ್ಮಪತ್ನಿ ಶ್ರೀಮತಿ ಮಹಾನಂದ ಉಮರಗಿ, ಇಬ್ಬರು ಗಂಡುಮಕ್ಕಳು, ಒಬ್ಬ ಮಗಳನ್ನು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ.



ರಾಮನಗರ ಜಿಲ್ಲೆ ಸಾತನೂರು ಗ್ರಾಮಾಂತರ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತೀಯ ವರ್ಷದ ಬಿ.ಕಾಂ ಓದುತ್ತಿದ್ದ ರೋವರ್ **ಕು|| ನವೀನ್** ಅವರು ದಿನಾಂಕ 08 ಏಪ್ರಿಲ್ 2025ರಂದು ಸಾತನೂರಿನ ವನಗಳ್ಳಿ ಬಳಿ ಕಾರು ಅಪಘಾತ ಸಂಭವಿಸಿ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಈತನು 2022-23ನೇ ಸಾಲಿನಲ್ಲಿ ಮೂಡುಬಿದರೆಯಲ್ಲಿ ನಡೆದ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯಲ್ಲಿ ಭಾಗವಹಿಸಿ ಸೇವೆಯನ್ನು ಮಾಡಿರುತ್ತಾನೆ ಹಾಗೂ ಸ್ಥಳೀಯ ಜಿಲ್ಲಾ ಹಾಗೂ ರಾಜ್ಯಮಟ್ಟದ ಶಿಬಿರಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದನು.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

– ರಾಜ್ಯ ಕಾರ್ಯದರ್ಶಿ



# ನಿಸರ್ಗದೊಂದಿಗೆ ಸಹಬಾಳ್ವೆಗೆ ಪ್ರೋತ್ಸಾಹಿಸೋಣ

- ನೈಸರ್ಗಿಕ ಸಂಪನ್ಮೂಲಗಳನ್ನು ಮಿತವಾಗಿ ಬಳಸೋಣ
- ಮಳೆನೀರು ಕೊಯ್ಲು, ಅಂತರ್ಜಲ ಮರುಪೂರ್ಣ ಮಾಡೋಣ
- ಕೆರೆ, ಕುಂಟೆ, ಜಲಸಂಪನ್ಮೂಲಗಳನ್ನು ಸಂರಕ್ಷಿಸೋಣ
- ಮರಗಿಡಗಳನ್ನು ಬೆಳೆಸಿ ಸಂರಕ್ಷಿಸೋಣ
- ಸೌರಶಕ್ತಿ, ಪವನ ಹಾಗೂ ಇತರೆ ನವೀಕರಿಸಬಹುದಾದ ಸಂಪನ್ಮೂಲಗಳನ್ನು ಪ್ರೋತ್ಸಾಹಿಸೋಣ
- ಕಸವಿಂಗಡಣೆ ಮಾಡೋಣ ಹಾಗೂ ತ್ಯಾಜ್ಯ ಉತ್ಪಾದನೆ ಕಡಿಮೆಗೊಳಿಸಲು ಕ್ರಮವಹಿಸೋಣ
- ಪ್ಲಾಸ್ಟಿಕ್ ಬಳಕೆ ತ್ಯಜಿಸೋಣ
- ನಮ್ಮ ವಾಹನಗಳ ಹೊಗೆ ಪ್ರಮಾಣ ಮಿತಿಯಲ್ಲಿಡಲು ಕ್ರಮವಹಿಸೋಣ
- ಹಬ್ಬಗಳನ್ನು ಪರಿಸರ ಸ್ನೇಹಿಯಾಗಿ ಆಚರಿಸೋಣ
- ಕಾರ್ ಪೂಲಿಂಗ್, ಸಾರ್ವಜನಿಕ ಸಾರಿಗೆ ಹೆಚ್ಚಾಗಿ ಬಳಸುವ ಮೂಲಕ ವಾಯುಮಾಲಿನ್ಯ ನಿಯಂತ್ರಣಕ್ಕೆ ಸಹಕರಿಸೋಣ




ಸಾರ್ವಜನಿಕರ ಹಿತಾಸಕ್ತಿಯಿಂದ ಪ್ರಕಟಿತ

**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**

#49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು – 560 001 ದೂ: 080–2558 6520 / 2558 9112 / 2558 8142 ಫ್ಯಾಕ್ಸ್: 080–2558 6321

ಇಮೇಲ್ : ho@kspcb.gov.in ವೆಬ್‌ಸೈಟ್ : www.kspcb.gov.in

RNI No: 13348/1959. Title Code: KARBIL00285. Posted at Periodical Rate Rs. 2/-
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 28)

SHAHEEN
GROUP OF INSTITUTIONS

## COURSES OFFERED

- **CLASS XI-XII/PUC (SCIENCE)** INTEGRATED WITH NEET/JEE
- **CLASS XI-XII/PUC (ARTS)** INTEGRATED WITH UPSC/CLAT
- **NEET LONG TERM** REPEATERS BATCH
- **CLASS XI-XII/PUC (COMMERCE)** INTEGRATED WITH CA FOUNDATION
- **SHAHEEN VALUE SCHOOL** KG TO CLASS X

## SHAHEEN DEGREE COLLEGE & IAS ACADEMY

Boost Your Career with **1 Degree and 3 Certifications**

- **BA** - Integrated with UPSC
- **B.Sc** - Integrated with UPSC
- **B.Com** - Integrated with UPSC
- **BCA** - Integrated with UPSC
- **UPSC** - One year UPSC Course for Graduates

- Diploma in AI and Machine Learning
- Diploma in Journalism
- Diploma in Industrial Accounting and Business Leadership
- Diploma in Islamic Studies and Hospitality Management



**Head Office:**
Shaheen Nagar, BIDAR-585403.

www.shaheengroup.org
1800 121 6235

If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
www.bsgkarnataka.org

Published, Editor & Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Rd, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001
Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru-26